ವಿಶ್ವವಾಣಿ
ವಿಶ್ವಾಸವೇ ವಿಶ್ವ

ಭಾರತಕ್ಕೆ 2-1 ಮುನ್ನಡೆ
ದ.ಆಫ್ರಿಕಾ ವಿರುದ್ಧದ 5 ಪಂದ್ಯಗಳ ಟಿ20 ಸರಣಿಯಲ್ಲಿ ಭಾರತ 2-1ರಿಂದ ಮುನ್ನಡೆ ಸಾಧಿಸಿದೆ. ಭಾನುವಾರ ಭಾರತ 7 ವಿಕೆಟ್‌ಗಳ ಜಯ ಸಾಧಿಸಿತು.

ಮತಗಳ್ಳತನ ರ‍್ಯಾಲಿಗೆ ಸೀಮಿತ ಸಿಎಂ ಸಿದ್ದು, ಡಿಸಿಎಂ ಡಿಕೆಶಿ ದೆಹಲಿ ಯಾತ್ರೆ
ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಸಂಬಂಧಿಸಿ ಚರ್ಚೆಗೆ ಸಿಕ್ಕಿಲ್ಲ ಅವಕಾಶ

ಸಿಎಂ ಕಗ್ಗಂಟು ಯಥಾಸ್ಥಿತಿ

ವಿಶ್ವವಾಣಿ ಸುದ್ದಿಮನೆ ಬೆಳಗಾವಿ

ಮತಗಳ್ಳತನ ವಿರೋಧಿಸಿ ರ‍್ಯಾಲಿಯನ್ನು ನೆಪವಾಗಿಟ್ಟುಕೊಂಡು ದೆಹಲಿಗೆ ತೆರಳಿದ್ದ ರಾಜ್ಯ ಕಾಂಗ್ರೆಸ್ ದಂಡಿಗೆ ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಮಾತುಕತೆಗೆ ಅವಕಾಶ ಸಿಕ್ಕಿಲ್ಲ. ಇದೇ ವೇಳೆ ಡಿಸಿಎಂ ಶಿವಕುಮಾರ್, ರಾಹುಲ್ ಗಾಂಧಿಯನ್ನು ಕೆಲ ಕ್ಷಣಗಳ ಮಾತ್ರ ಭೇಟಿಯಾಗಲು ಸಾಧ್ಯವಾಗಿದೆ. ಈ ಕೆಲಕ್ಷಣಗಳ ಭೇಟಿಯೂ ಕುತೂಹಲ ಮೂಡಿಸಿದೆ. ಒಟ್ಟಾರೆ ದಿಲ್ಲಿ ಪ್ರಯಾಣ ಕೇವಲ ಮತಚೋರಿ ಪ್ರತಿಭಟನೆಗೆ ಮಾತ್ರ ಸೀಮಿತವಾದಂತಾಗಿದೆ ಎಂದು ಮೂಲಗಳು ಹೇಳಿವೆ.

ಭಾನುವಾರ ಮಧ್ಯಾಹ್ನ ಇಂದಿರಾ ಭವನದಲ್ಲಿ ಇಂಡಿ ಒಕ್ಕೂಟದ ನಾಯಕರಿಗೆ ಕಾಂಗ್ರೆಸ್ ವರಿಷ್ಠೆ ಸೋನಿಯಾ ಗಾಂಧಿ ಭೋಜನ ಕೂಟ ಆಯೋಜಿಸಿದ್ದರು. ಈ ಸಭೆಯಲ್ಲಿ ರಾಜ್ಯ ನಾಯಕತ್ವದ ಬಗ್ಗೆ ಚರ್ಚೆಯಾಗುವ ಸಾಧ್ಯತೆಯಿದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಸಭೆಯಲ್ಲಿ ರಾಜ್ಯ ನಾಯಕತ್ವಕ್ಕೆ ಸಂಬಂಧಿಸಿದಂತೆ ಯಾವುದೇ ಚರ್ಚೆಯಾಗಿಲ್ಲ.

ಸೋನಿಯಾ ಗಾಂಧಿ ಅವರ ಭೋಜನ ಕೂಟಕ್ಕೆ ಸಂಬಂಧಿಸಿದಲ್ಲಿ ಕಾಂಗ್ರೆಸ್‌ನ ಹಲವು ನಾಯಕರು ಭಾಗವಹಿಸಿದ್ದಾರೆ. ಆದರೆ ಭೋಜನಕೂಟದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತ್ರ ಭಾಗವಹಿಸಿದ್ದಾರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೆರಳುವ ವೇಳೆಗೆ ಭೋಜನ ಕೂಟ ಮುಗಿದಿದ್ದರಿಂದ ಈ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಲು ಸಾಧ್ಯವಾಗಿಲ್ಲ ಎಂದು ತಿಳಿದುಬಂದಿದೆ. ಅವರು ಗೈರಾಗಿರುವುದು ಭಾರಿ ಸಂಚಲನಕ್ಕೆ ಕಾರಣವಾಗಿದೆ.

ದೆಹಲಿಯ ಭೇಟಿಯ ವೇಳೆ ನಾಯಕತ್ವ ಬದಲಾವಣೆ ಬಗ್ಗೆ ಯಾವುದೇ ಚರ್ಚೆ ಬೇಡ ಎನ್ನುವ ಸಂದೇಶವನ್ನು ನಾಯಕರು ರವಾನಿಸಿದ್ದರೂ, ಸಿಎಂ-ಡಿಸಿಎಂ ಇಬ್ಬರೂ ಒಂದು ಪ್ರಯತ್ನ ಮಾಡಲಿದ್ದಾರೆ ಎನ್ನಲಾಗಿತ್ತು. ಆದರೆ ದೆಹಲಿಯಲ್ಲಿ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಇಬ್ಬರೊಂದಿಗೆ ನಾಯಕರು ಚರ್ಚೆ ನಡೆಸಿದ್ದರೂ, ಯಾವುದೇ ರಾಜಕೀಯ ಚರ್ಚೆ ನಡೆದಿಲ್ಲ ಎಂದು ತಿಳಿದುಬಂದಿದೆ.

ದೆಹಲಿಯ ಮತಚೋರಿ ಪ್ರತಿಭಟನೆಯಲ್ಲಿ ಸಾವಿರಕ್ಕೂ ಹೆಚ್ಚು ಮಂದಿ ನಾಯಕರು ಕರ್ನಾಟಕದಿಂದ ತೆರಳಿದ್ದರು. ಸಿಎಂ, ಡಿಸಿಎಂ ಆಪ್ತರು ತಮ್ಮ ತಮ್ಮ ನಾಯಕರ ಪರವಾಗಿ ಬ್ಯಾಟ್ ಬೀಸಲು ಪ್ರಯತ್ನಿಸಿದ್ದರು. → 4

ದೆಹಲಿ ವೋಟ್ ಚೋರಿ ವಿರೋಧಿ ರ‍್ಯಾಲಿಯಲ್ಲಿ ಪ್ರಿಯಾಂಕಾ, ರಾಹುಲ್, ಖರ್ಗೆ, ಸೋನಿಯಾ

ದೆಹಲಿ ಕಚೇರಿಯಲ್ಲೂ ಮುಂದಿನ ಸಿಎಂ ಡಿಕೆ ಕೂಗು
ಕಳೆದೊಂದು ತಿಂಗಳಿನಿಂದ ಮುಂದಿನ ಸಿಎಂ; ಡಿಕೆ ಎನ್ನುವ ಘೋಷಣೆಗಳು ಕೇಳಿಬರುತ್ತಿದೆ. ಇದು ದೆಹಲಿಯಲ್ಲಿಯೂ ನಡೆದಿದೆ. ದೆಹಲಿಯಲ್ಲಿ ಭಾನುವಾರ ಬೆಳಗ್ಗೆ ಎಐಸಿಸಿ ಕಚೇರಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆಗಮಿಸುತ್ತಿದ್ದಂತೆ ಮುಂದಿನ ಮುಖ್ಯಮಂತ್ರಿ ಡಿಕೆಶಿ ಎನ್ನುವ ಘೋಷಣೆಗಳು ಮೊಳಗಿದರು. ಈ ವೇಳೆ ಉಪಮುಖ್ಯಮಂತ್ರಿ, ಡಿಕೆಶಿ ಘೋಷಣೆ ಕೂಗಿದವರತ್ತ ನೋಡಿ ಮುಗುಳ್ನಕ್ಕು ತೆರಳಿದರು.

ಹೆರಾಲ್ಡ್ ವಿಚಾರಣೆ: ದೆಹಲಿಯಲ್ಲಿ ಉಳಿದ ಡಿಕೆಶಿ
ಕಾಂಗ್ರೆಸ್ ನಾಯಕರಿಗೆ ವರಿಷ್ಠೆ ಸೋನಿಯಾ ಗಾಂಧಿ ಆಯೋಜಿಸಿದ್ದ ಭೋಜನ ಕೂಟದ ವೇಳೆ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ರಾಹುಲ್ ಗಾಂಧಿಯೊಂದಿಗೆ ಒಂದೆರಡು ನಿಮಿಷ ಮಾತನಾಡಿರುವುದು ಕುತೂಹಲ ಮೂಡಿಸಿದೆ. ಇದರೊಂದಿಗೆ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೆವಾಲಾ ಅವರೊಂದಿಗೂ ಕೂಡ ಶಿವಕುಮಾರ್ ಮಾತುಕತೆ ನಡೆಸಿದ್ದಾರೆ ಎನ್ನಲಾಗಿದೆ. ಇನ್ನು ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಸಿಬಿಐ ನೋಟಿಸ್ ನೀಡಿತ್ತು. ಇದರ ವಿಚಾರಣೆಯಲ್ಲಿ ಭಾಗವಹಿಸಲು ಡಿ.ಕೆ.ಶಿವಕುಮಾರ್ ದೆಹಲಿಯಲ್ಲಿಯೇ ಉಳಿದುಕೊಂಡಿದ್ದಾರೆ. ಸಿದ್ದರಾಮಯ್ಯ ಅವರು ಭಾನುವಾರ ಸಂಜೆ ದೆಹಲಿಯಿಂದ ಹೊರಟು, ಬೆಳಗಾವಿಗೆ ವಾಪಸಾಗಿದ್ದಾರೆ.

ಏನೇನಾಯ್ತು?
- ದೆಹಲಿಯಲ್ಲಿ ರಾಹುಲ್ ನೇತೃತ್ವದಲ್ಲಿ ಕಾಂಗ್ರೆಸ್‌ನಿಂದ ಮತಗಳ್ಳತನ ವಿರೋಧಿ ರ‍್ಯಾಲಿ, ರಾಜ್ಯ ನಾಯಕರು ಭಾಗಿ
- ಹೈಕಮಾಂಡ್‌ನೊಂದಿಗೆ ನಾಯಕತ್ವ ಬದಲಾವಣೆಯ ಕುರಿತು ಮಾತನಾಡಲು ಸಿಕ್ಕಿಲ್ಲ ಅವಕಾಶ
- ಭಾನುವಾರ ಮಧ್ಯಾಹ್ನ ಇಂದಿರಾ ಭವನದಲ್ಲಿ ಸೋನಿಯಾರಿಂದ ಭೋಜನಕೂಟ, ಶಿವಕುಮಾರ್ ಭಾಗಿ, ತಡವಾಗಿ ಹೋದ ಸಿದ್ದರಾಮಯ್ಯ
- ಡಿಕೆಶಿ ಪ್ರತ್ಯೇಕ ಉಪಾಹಾರ ಸಭೆ, ಆಪ್ತರಾದ ತಿಮ್ಮಾಪುರ, ತನ್ವೀರ್, ಮಂಕಾಳ ವೈದ್ಯ, ಮಂಜುನಾಥ್ ಭಂಡಾರಿ, ಪ್ರದೀಪ್, ವೆಂಕಟೇಶ್ ಭಾಗಿ
- ಬೆಳಗಾವಿಗೆ ಸಿದ್ದರಾಮಯ್ಯ ವಾಪಸ್. ಹೆರಾಲ್ಡ್ ವಿಚಾರಣೆ ಹಿನ್ನೆಲೆಯಲ್ಲಿ ದೆಹಲಿಯಲ್ಲೇ ಉಳಿದ ಶಿವಕುಮಾರ್

ಇಡೀ ತಿಂಗಳು ಕೈಗೆ ಸಿಗಲ್ಲ ರಾಹುಲ್
ಇನ್ನು 16ಕ್ಕೆ ವಿದೇಶಕ್ಕೆ ಪ್ರವಾಸಕ್ಕೆ ತೆರಳಲಿರುವ ರಾಹುಲ್ 21ಕ್ಕೆ ವಾಪಸಾಗಲಿದ್ದಾರೆ. ಆದರೆ ಈ ಸಮಯದಲ್ಲಿ ವೇಣುಗೋಪಾಲ್ ನೇತೃತ್ವದ ಸದನ ಸಮಿತಿಯೂ ತಮಿಳುನಾಡು ಪ್ರವಾಸ ಕೈಗೊಳ್ಳಲಿದೆ. ಅದಾದ ಬಳಿಕ 27ಕ್ಕೆ ಪುನಃ ರಾಹುಲ್ ಅಮೆರಿಕಕ್ಕೆ ತೆರಳಲಿರುವುದರಿಂದ ಸದ್ಯಕ್ಕೆ ಕೈಗೆ ಸಿಗುವುದಿಲ್ಲ ಎನ್ನುವುದೂ ಖಚಿತವಾಗಿದೆ.

ದೇಹ ತೊರೆದ ದಾವಣಗೆರೆ ಧಣಿ
ಶಾಮನೂರು ಶಿವಶಂಕರಪ್ಪ

ದಾವಣಗೆರೆ ದಕ್ಷಿಣ ಕ್ಷೇತ್ರದ ಕಾಂಗ್ರೆಸ್ ಶಾಸಕ ಹಾಗೂ ಅಖಿಲ ಭಾರತ ವೀರಶೈವ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ (95) ವಿಧಿವಶರಾಗಿದ್ದಾರೆ. ವಯೋ ಸಹಜ ಸಮಸ್ಯೆಗಳಿಂದ ಬಳಲುತ್ತಿದ್ದ ಶಾಮನೂರು ಶಿವಶಂಕರಪ್ಪ ಅವರನ್ನು ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿ ಯಾಗದೇ ಭಾನುವಾರ ಕೊನೆಯುಸಿರೆಳೆದಿದ್ದಾರೆ. ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ವಿಧಾನಸಭೆಯ ಸದಸ್ಯರಾಗಿದ್ದ ಅವರು ಭಾರತದಲ್ಲಿ ರಾಜ್ಯ ವಿಧಾನಸಭೆಯ ಅತ್ಯಂತ ಹಿರಿಯ ಶಾಸಕರಾಗಿದ್ದರು.

ಕರ್ನಾಟಕದ ರಾಜಕೀಯದಲ್ಲಿ ಅಜಾತಶತ್ರು ಎಂದೇ ಗುರುತಿಸಿ ಕೊಂಡಿದ್ದ ಶಾಮನೂರು ಶಿವಶಂಕರಪ್ಪ ಅವರು ದಶಕಗಳ ಕಾಲ ಸಕ್ರಿಯ ರಾಜಕಾರಣದಲ್ಲಿದ್ದರು. ಅವರು ಆರು ಬಾರಿ ಶಾಸಕರಾಗಿ ಹಾಗೂ ಒಂದು ಬಾರಿ ಸಂಸದರಾಗಿ ಸೇವೆ ಸಲ್ಲಿಸಿದ್ದಾರೆ. ರಾಜ್ಯದ ಕಾಂಗ್ರೆಸ್ ಸರಕಾರಗಳಲ್ಲಿ ಪ್ರಮುಖ ಖಾತೆಗಳನ್ನು ನಿಭಾಯಿಸಿದ್ದರು. ವೀರಶೈವ ಲಿಂಗಾಯತ ಸಮುದಾಯದ ಪ್ರಮುಖ ಸಂಸ್ಥೆಯಾದ ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರಾಗಿದ್ದರು.

(1931-2025) ವಿಶೇಷ ಪುಟ → 5

ಹಿರಿಯ ನಾಯಕರಾದ ಶಿವಶಂಕರಪ್ಪ ನಿಧನ ವಾರ್ತೆ ನೋವುಂಟು ಮಾಡಿದೆ. ಜನ ಕಲ್ಯಾಣಕ್ಕಾಗಿಯೇ ಬದುಕಿದ್ದ ಮುತ್ಸದ್ದಿ ಅಗಲಿಕೆಯಿಂದ ಸಮಾಜ ಬಡವಾಗಿದೆ.
-ಸಿದ್ದರಾಮಯ್ಯ, ಮುಖ್ಯಮಂತ್ರಿ

ಶಿವಶಂಕರಪ್ಪ ನಿಧನದಿಂದ ಅಪಾರ ನಷ್ಟವಾಗಿದೆ. ಅಜಾತಶತ್ರು ಎಂದೇ ಗುರುತಿಸಿಕೊಂಡಿದ್ದ ಶಾಮನೂರು ಅವರು ಆರು ಬಾರಿ ಶಾಸಕರಾಗಿ, ಸಂಸದರಾಗಿ ಸಾರ್ಥಕ ಸೇವೆ ಸಲ್ಲಿಸಿದ್ದಾರೆ.
-ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ನಾಳೆ ಮಳವಳ್ಳಿಗೆ ರಾಷ್ಟ್ರಪತಿ ಭೇಟಿ: ಬಿಗಿಭದ್ರತೆ

ಮಂಡ್ಯ: ಜಿಲ್ಲೆಯ ಮಳವಳ್ಳಿ ಪಟ್ಟಣದಲ್ಲಿ ಸುತ್ತೂರಿನ ಆದಿಜಗದ್ಗುರು ಶ್ರೀ ಶಿವರಾತ್ರಿ ಶಿವಯೋಗಿಗಳ 1066ನೇ ಜಯಂತಿ ಡಿ.15ರಿಂದ ಆರಂಭವಾಗಲಿದ್ದು, ಡಿ.16ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ದೆಹಲಿ ಭದ್ರತಾಪಡೆ ಅಧಿಕಾರಿಗಳು ಮಳವಳ್ಳಿಯ ಮಾರೇಹಳ್ಳಿ ಬಳಿ ನಿರ್ಮಿಸಲಾಗಿರುವ ಹೆಲಿಪ್ಯಾಡ್ ಜಾಗದಲ್ಲಿ ಹೆಲಿಕಾಪ್ಟರ್ ಅಣಕು ಪ್ರದರ್ಶನ ನಡೆಸಿದರು. ದೆಹಲಿ ಭದ್ರತಾ ಪಡೆಯ ಅಧಿಕಾರಿಗಳ ನಿರ್ದೇಶನದಂತೆ ಪಟ್ಟಣದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿದೆ.

ಬಿಹಾರದ ನಿತಿನ್ ನಬಿ ಬಿಜೆಪಿ ಕಾರ್ಯಾಧ್ಯಕ್ಷ

ದೆಹಲಿ: ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಕಾರ್ಯಾಧ್ಯಕ್ಷರಾಗಿ ನಿತಿನ್ ನಬಿನ್ (45) ನೇಮಕಗೊಂಡಿದ್ದಾರೆ. ಬಿಜೆಪಿಯ ಸಂಸದೀಯ ಮಂಡಳಿಯು ಭಾನುವಾರ ಸಭೆ ನಡೆಸಿ ಮಹತ್ವದ ಈ ಘೋಷಣೆ ಮಾಡಿದೆ. ನಬಿನ್ ಅವರು ನಂತರದ ದಿನಗಳಲ್ಲಿ ಬಿಜೆಪಿಯ ರಾಷ್ಟ್ರಾಧ್ಯಕ್ಷರಾಗಿರುವ ಜಗತ್ ಪ್ರಕಾಶ್ ನಡ್ಡಾ ಅವರ ಸ್ಥಾನಕ್ಕೆ ಬರಲಿದ್ದಾರೆ. ಪಟನಾ ವ್ಯಾಪ್ತಿಯ ಬಂಕಿಪುರ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿರುವ ನಿತಿನ್ ನಬಿನ್ ಅವರು ಸದ್ಯ ಬಿಹಾರ ರಾಜ್ಯ ಸರಕಾರದಲ್ಲಿ ಲೋಕೋಪಯೋಗಿ ಸಚಿವರಾಗಿದ್ದಾರೆ. ಪಕ್ಷದ ಈಗಿನ ದೊಡ್ಡ ನಿರ್ಧಾರದಿಂದ ನಿತಿನ್ ನಬಿನ್ ಅವರಿಗೆ ರಾಷ್ಟ್ರ ಮಟ್ಟದ ರಾಜಕಾರಣಕ್ಕೆ ಬಡ್ತಿ ಸಿಕ್ಕಿದೆ.

ಸಂಸತ್ ಅಧಿವೇಶನದ ನಡುವೆ ಮೋದಿ ವಿದೇಶಕ್ಕೆ

ದೆಹಲಿ: ದೇಶದಲ್ಲಿ ಸಂಸತ್ ಚಳಿಗಾಲದ ಅಧಿವೇಶನ ನಡೆಯುತ್ತಿರುವಂತೆಯೇ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸೋಮವಾರದಿಂದ ನಾಲ್ಕು ದಿನಗಳ ವಿದೇಶ ಪ್ರವಾಸ ಕೈಗೊಂಡಿದ್ದಾರೆ. ಈ ಪ್ರವಾಸದಲ್ಲಿ ಅವರು ಜೋರ್ಡಾನ್, ಇಥಿಯೋಪಿಯಾ ಮತ್ತು ಒಮಾನ್ ದೇಶಗಳಿಗೆ ಭೇಟಿ ನೀಡಲಿದ್ದಾರೆ. ದ್ವಿಪಕ್ಷೀಯ ಸಂಬಂಧಗಳನ್ನು ವೃದ್ಧಿಪಡಿಸಲು ಈ ಪ್ರವಾಸ ಮಹತ್ವದ ಪಾತ್ರವಹಿಸಲಿದೆ. ಅದರಲ್ಲೂ ವಿಶೇಷವಾಗಿ ವ್ಯಾಪಾರ ಮತ್ತು ರಕ್ಷಣಾ ಕ್ಷೇತ್ರಗಳಲ್ಲಿ ಬಲಪಡಿಸುವುದು ಈ ಭೇಟಿಯ ಪ್ರಮುಖ ಉದ್ದೇಶವಾಗಿದೆ. ಡಿಸೆಂಬರ್ 15-16ರವರೆಗೆ ಜೋರ್ಡಾನ್, 16-17ರಂದು ಎರಡು ದಿನಗಳ ಕಾಲ ಇಥಿಯೋಪಿಯಾಕ್ಕೆ ಪ್ರಯಾಣ ಬೆಳೆಸಲಿದ್ದಾರೆ. ಪೂರ್ವ ಆಫ್ರಿಕಾ ದೇಶಕ್ಕೆ ಇದು ಅವರ ಮೊದಲ ಭೇಟಿಯಾಗಿದೆ.

ಅಡಿಸ್ ಅಬಾಬಾದಲ್ಲಿ ಅವರು ಇಥಿಯೋಪಿಯಾದ ಪ್ರಧಾನಿ ಅಬಿಯ್ ಅಹ್ಮದ್ ಅಲಿ ಅವರೊಂದಿಗೆ ದ್ವಿಪಕ್ಷೀಯ ಸಂಬಂಧಗಳ ಬಗ್ಗೆ ವಿಸ್ತೃತ ಮಾತುಕತೆ ನಡೆಸಲಿದ್ದಾರೆ. 18ರಂದು ಒಮಾನ್‌ಗೆ ತೆರಳಲಿದ್ದಾರೆ. ಎರಡೂ ದೇಶಗಳ ನಡುವೆ ಶತಮಾನಗಳಿಂದ ಉತ್ತಮ ಬಾಂಧವ್ಯವಿದೆ. ವ್ಯಾಪಾರಿ ಸಂಬಂಧವಿದೆ. ಇಲ್ಲಿ ಭಾರತೀಯ ಸಮುದಾಯವೂ ದೊಡ್ಡ ಪ್ರಮಾಣದಲ್ಲಿ ನೆಲೆಸಿದೆ. ದ್ವಿಪಕ್ಷೀಯ ಬಂಧವನ್ನು ವೃದ್ಧಿಸಲು ಇದು ಅವಕಾಶ.

ಸೊಂಪಾದ ಪುಟಗಳು

ನಿಖಿಲ್ ಪತ್ತೆ ಮಾಡಿದ ಚಿದಂಬರ ರಹಸ್ಯ ಯಾವುದು?
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ 6

ಅತಿ ಆಸೆಯ ಭಾವ, ಒಲೆ ಮೇಲೆ ಜೀವ...
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್ 7

ದಾರಿದೀಪೋಕ್ತಿ

ಕೆಲವರು ನಮ್ಮನ್ನು ಮೋಸ ಮಾಡುತ್ತಿರುವುದು ನಮಗೆ ಗೊತ್ತಾಗುತ್ತದೆ. ಅಂಥವರನ್ನು ಬೆತ್ತಲೆಗೊಳಿಸಲು ನೀವು ಮೂರ್ಖರಂತೆ ನಟಿಸಬೇಕಾಗುತ್ತದೆ. ಯಾವತ್ತೂ ಬುದ್ಧಿವಂತರಂತೆ ತೋರಿಸಿಕೊಳ್ಳಬೇಕಿಲ್ಲ.

ವಕ್ರತುಂಡೋಕ್ತಿ

ಎಲ್ಲರೂ ನಮ್ಮವರೇ ಅಂತ ನಂಬಬಾರದು, ಅಷ್ಟಕ್ಕೂ ನಾವು ಚುನಾವಣೆಯಲ್ಲಿ ಸ್ಪರ್ಧಿಸುತ್ತಿಲ್ಲವಲ್ಲ?

ಇಂದು ಮೋದಿ, ಫುಟ್ಬಾಲ್ ದೊರೆ ಮೆಸ್ಸಿ ಭೇಟಿ

ದೆಹಲಿ: ಫುಟ್‌ಬಾಲ್ ದಂತಕಥೆ, ಅರ್ಜೆಂಟೀನಾ ತಂಡದ ವಿಶ್ವವಿಜೇತ ಆಟಗಾರ ಲಯೋನೆಲ್ ಮೆಸ್ಸಿ ಭಾರತ ಪ್ರವಾಸ ಮುಕ್ತಾಯದ ಹಂತಕ್ಕೆ ತಲುಪಿದೆ. ಕೋಲ್ಕತಾ, ಹೈದ್ರಾಬಾದ್, ಮುಂಬೈ ಮುಗಿಸಿರುವ ಅವರು ಸೋಮವಾರ ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿಯನ್ನು ಭೇಟಿಯಾಗಲಿದ್ದಾರೆ. ಅನಂತರ ಅರುಣ್ ಜೇಟ್ಲಿ ಮೈದಾನದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಪ್ರಧಾನಿ ಮತ್ತು ಮೆಸ್ಸಿ ಭೇಟಿ ಭಾರೀ ನಿರೀಕ್ಷೆ ಹುಟ್ಟಿಸಿದ್ದು, ಭಾರತದಲ್ಲಿ ಫುಟ್‌ಬಾಲ್ ಬೆಳವಣಿಗೆಗೆ ಸಂಬಂಧಿಸಿದಂತೆ ಚರ್ಚೆಯಾಗುವ ನಿರೀಕ್ಷೆಯಿದೆ.

11 ತಿಂಗಳಲ್ಲಿ 135 ಪೊಲೀಸರು ಅಮಾನತು
ಬೆಂಗಳೂರು: ದೇಶದ ಐಟಿ ರಾಜಧಾನಿ, ಸಿಲಿಕಾನ್ ಸಿಟಿ ಎಂದೇ ಕರೆಸಿಕೊಳ್ಳುವ ಬೆಂಗಳೂರಿನಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಬೇಕಾದ ಪೊಲೀಸ್ ಇಲಾಖೆಯು ಇತ್ತೀಚೆಗಿನ ಕೆಲವು ಘಟನೆಗಳಿಂದ ತೀವ್ರ ಮುಜುಗರಕ್ಕೀಡಾಗಿದೆ. ಕಳೆದ 11 ತಿಂಗಳ ಅವಧಿಯಲ್ಲಿ ಬರೋಬ್ಬರಿ 135ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ಅಮಾನತುಗೊಂಡಿರುವುದು ಪ್ರಶ್ನಾರ್ಹ ಎಂದು ಹೇಳಲಾಗಿದೆ. ಈ ಅಮಾನತು ಪರ್ವವು ಕೇವಲ ಕೆಳಹಂತದ ಸಿಬ್ಬಂದಿಗೆ ಸೀಮಿತವಾಗಿಲ್ಲ, ಬದಲಿಗೆ ಜವಾಬ್ದಾರಿಯುತ ಸ್ಥಾನದಲ್ಲಿರುವ ಇನ್‌ಸ್ಪೆಕ್ಟರ್‌ಗಳು ಮತ್ತು ಸಬ್ ಇನ್‌ಸ್ಪೆಕ್ಟರ್‌ಗಳೇ ಕ್ರಿಮಿನಲ್ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದು ಆತಂಕಕಾರಿ ಸಂಗತಿಯಾಗಿದೆ.

ಸಿಡ್ನಿಯಲ್ಲಿ ಯಹೂದಿಗಳ ಮೇಲೆ ಅತ್ಯುಗ್ರ ದಾಳಿ: 11 ಮಂದಿ ಬಲಿ

ಯಹೂದಿಗಳ ಹನುಕ್ಕಾ ಹಬ್ಬದ ಮೊದಲ ದಿನ ಆಸೀಸಲ್ಲಿ ಹತ್ಯಾಕಾಂಡ
ಬೇಕಾಬಿಟ್ಟಿ ಗುಂಡು ಹಾರಿಸಿದ ಮೂವರಲ್ಲಿ ಒಬ್ಬ ಹತ್ಯೆ, ಇನ್ನೊಬ್ಬ ಸೆರೆ
ಒಬ್ಬ ದಾಳಿಕೋರ ನವೀದ್ ಅಕ್ರಮ್ ಎಂದು ಗುರ್ತಿಸಿದ ಪೊಲೀಸರು

ಸಿಡ್ನಿ: ಆಸ್ಟ್ರೇಲಿಯಾ ದೇಶದ ಪ್ರಮುಖ ನಗರ ಸಿಡ್ನಿಯ 'ಬೊಂಡಿ ಬೀಚ್' (ಕಡಲ ಕಿನಾರೆ)ನಲ್ಲಿ ಉಗ್ರರು ಯಹೂದಿ ಸಮುದಾಯದ ಮೇಲೆ ಬೇಕಾಬಿಟ್ಟಿ ಗುಂಡಿನ ದಾಳಿ ನಡೆಸಿದ್ದಾರೆ. ಪರಿಣಾಮ 11 ಮಂದಿ ಮೃತಪಟ್ಟಿದ್ದು, 29ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ. ಯಹೂದಿಗಳ 8 ದಿನಗಳ ಪವಿತ್ರ ಹನುಕ್ಕಾ ಹಬ್ಬ ಭಾನುವಾರ ರಾತ್ರಿಯಿಂದ ಆರಂಭವಾಗಿದೆ. ಅದರ ಮೊದಲ ದಿನವೇ ಈ ಹತ್ಯಾಕಾಂಡ ನಡೆದಿದ್ದು, ಇಡೀ ಆಸ್ಟ್ರೇಲಿಯಾವನ್ನು ದಿಗ್ಭ್ರಮೆಗೊಳಿಸಿದೆ. ಮೂವರು ದಾಳಿ ನಡೆಸಿದ್ದಾರೆಂದು ಹೇಳಲಾಗಿದ್ದರೂ, 3ನೇಯವನ ಪತ್ತೆಯಾಗಿಲ್ಲ. ಇದುವರೆಗೆ ಪೊಲೀಸರ ಮರುದಾಳಿಯಲ್ಲಿ ಒಬ್ಬ ಶೂಟರ್ ಮೃತಪಟ್ಟಿದ್ದರೆ, ಇನ್ನೊಬ್ಬ ಗಂಭೀರವಾಗಿ ಗಾಯಗೊಂಡಿದ್ದಾನೆ. ಒಬ್ಬಾತನ್ನು ನವೀದ್ ಅಕ್ರಮ್ ಎಂದು ಪೊಲೀಸರು ಗುರ್ತಿಸಿದ್ದಾರೆ.

ಹೇಗಾಯಿತು?: ಆಸ್ಟ್ರೇಲಿಯಾದ ಕಾಲಮಾನ ಭಾನುವಾರ ಸಂಜೆ 6.47ರ ವೇಳೆ ಕಡಲ ಕಿನಾರೆಯಲ್ಲಿ ಸಾವಿರಾರು ಜನರು ವಾರಾಂತ್ಯ ರಜೆಯ ಕಾರಣ ಕುಟುಂಬ ಸಮೇತ ವಿಹರಿಸುತ್ತಿದ್ದರು. ಈ ದಿನ ಯಹೂದಿಗಳ ಹನುಕ್ಕಾ ಹಬ್ಬದ ಮೊದಲ ದಿನ. ಹಾಗಾಗಿ ವಿಶೇಷ ಆಚರಣೆಗಳು ನಡೆಯುತ್ತಿದ್ದವು. ಆಗಲೇ ಜನ ಸಮೂಹದ ಮೇಲೆ ಹಠಾತ್ ಎಂಬಂತೆ ಗುಂಡಿನ ದಾಳಿ ನಡೆದಿದೆ.

ಪ್ರತ್ಯಕ್ಷದರ್ಶಿಗಳು ಹೇಳಿದ್ದು: ಇಬ್ಬರು ಬಂದೂಕುಧಾರಿಗಳು ಕಡಲ ಕಿನಾರೆಯಲ್ಲಿ ವಿಹರಿಸುತ್ತಿದ್ದ ಜನ ಸಮೂಹದ ಮೇಲೆ ಮನಬಂದಂತೆ ಗುಂಡು ಸಿಡಿಸಿದರು. ಅವರ ಬಂದೂಕುಗಳಿಂದ 50ಕ್ಕೂ ಅಧಿಕ ಗುಂಡುಗಳನ್ನು ಸಿಡಿಸಿದ್ದಾರೆ. ಪರಿಣಾಮ 25ಕ್ಕೂ ಅಧಿಕ ಜನರು ಕುಸಿದು ಬಿದ್ದರು. ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡಿ ಹಲವರು ಪ್ರಾಣಬಿಟ್ಟರು. ಉಳಿದವರು ತಕ್ಷಣವೇ ಎಚ್ಚೆತ್ತು ಸ್ಥಳದಿಂದ ಓಡಿ ಹೋಗಿ ಪ್ರಾಣ ಉಳಿಸಿಕೊಂಡರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಪೊಲೀಸ್ ತನಿಖೆ ಆರಂಭ: ಘಟನೆಗೆ ಸಂಬಂಧಿಸಿದ ನ್ಯೂ ಸೌತ್ ವೇಲ್ಸ್ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಸದ್ಯದ ಮಟ್ಟಿಗೆ ಘಟನೆಯನ್ನು ಯಹೂದಿಗಳನ್ನು ಗುರಿಯಾಗಿಟ್ಟುಕೊಂಡ ಉಗ್ರ ದಾಳಿಯೆಂದು ಪೊಲೀಸರು ಹೇಳಿದ್ದಾರೆ. ಒಬ್ಬ ಶೂಟರ್‌ನನ್ನು ಪೊಲೀಸರು ನವೀದ್ ಅಕ್ರಮ್ (24) ಎಂದು ಗುರ್ತಿಸಿದ್ದಾರೆ. ಸಿಡ್ನಿಯ ಬೋನಿರಿಗ್‌ನಲ್ಲಿ ಆತನ ಮನೆಯಿದ್ದು, ಪೊಲೀಸರು ಶೋಧ ನಡೆಸಿದ್ದಾರೆ. ಹತ್ಯಾಕಾಂಡ ನಡೆದ ಸ್ಥಳದ ಸನಿಹ ಮದ್ದುಗುಂಡುಗಳು, ಸ್ಫೋಟಕಗಳು ಲಭಿಸಿವೆ.

ಆಸ್ಟ್ರೇಲಿಯಾದ ಸಿಡ್ನಿ ನಗರದ ಬೊಂಡಿ ಬೀಚ್‌ನಲ್ಲಿ ಭಾನುವಾರ ಸಂಜೆ ತೀವ್ರ ಗುಂಡಿನ ದಾಳಿ ನಡೆಯಿತು. ಈ ವೇಳೆ ಗಾಯಗೊಂಡವರನ್ನು ಆಸ್ಪತ್ರೆಗೆ ಒಯ್ಯುದ್ದ ದೃಶ್ಯವಿದು.


ಬೊಂಡಿಯಲ್ಲಿ ಭಾನುವಾರ ನಡೆದ ಗುಂಡಿನ ದಾಳಿ ಆಘಾತಕಾರಿ ಘಟನೆ. ಜನರ ಸಾಮೂಹಿಕ ಸಾವು ದುಃಖಕರ. ತಮ್ಮವರನ್ನು ಕಳೆದುಕೊಂಡ ದೇಶವಾಸಿಗಳ ಕುಟುಂಬದ ಜತೆಗೆ ನಾನಿದ್ದೇನೆ. ದಾಳಿಕೋರರ ವಿರುದ್ಧ ಕ್ರಮ ಖಚಿತ.
-ಆಲ್ಬನೀಸ್, ಆಸೀಸ್ ಪ್ರಧಾನಿ


ಬೊಂಡಿ ಬೀಚ್‌ನಲ್ಲಿ ನಡೆದ ಹೇಯಕೃತ್ಯವನ್ನು ನಾನು ಕಟುವಾಗಿ ವಿರೋಧಿಸುತ್ತೇನೆ. ಈ ನೋವಿನ ದಿನಗಳಲ್ಲಿ ಭಾರತ ಆಸೀಸ್ ಪ್ರಜೆಗಳ ಜೊತೆಗೆ ನಿಲ್ಲುತ್ತದೆ. ಉಗ್ರ ಕೃತ್ಯಗಳನ್ನು ಭಾರತ ಎಂದೂ ಸಹಿಸಲ್ಲ.
-ನರೇಂದ್ರ ಮೋದಿ, ಭಾರತದ ಪ್ರಧಾನಿ

ಯಹೂದಿಗಳ 8 ದಿನಗಳ ಬೆಳಕಿನ ಹಬ್ಬ ಹನುಕ್ಕಾ
ಯಹೂದಿಗಳು ಆಚರಿಸುವ 8 ದಿನಗಳ ಹಬ್ಬ ಹನುಕ್ಕಾ. ಒಂದು ಚೂರೇಚೂರು ಎಣ್ಣೆಯಿಂದ 8 ದಿನಗಳ ಕಾಲ ಜೆರುಸಲೇಮ್‌ನಲ್ಲಿ 2ನೇ ದೇವಸ್ಥಾನವೆಂದು ಕರೆಸಿಕೊಳ್ಳುವ ಜಾಗದಲ್ಲಿ ದೀಪವೊಂದು ಉರಿದಿತ್ತು. ಗ್ರೀಕ್ ಮತ್ತು ಸಿರಿಯಾದ ರಾಜರ ವಿರುದ್ಧ ಹೋರಾಡಿ ಗೆದ್ದ ಮೆಕೆಬಿಯನ್ನರ ಜಯದ ಗಾಥೆಯೂ ಇಲ್ಲಿದೆ. ಹನುಕ್ಕಾವನ್ನು ಯಹೂದಿಗಳಲ್ಲಿ ಬೆಳಕಿನ ಹಬ್ಬ ಎಂದೇ ಕರೆಯುತ್ತಾರೆ. ಈ ವರ್ಷ ಡಿ.14ರಿಂದ ಆರಂಭವಾಗಿ 22ರವರೆಗೆ ನಡೆಯಲಿದೆ.

1996ರ ನಂತರ ಆಸೀಸ್ ಕಂಡ ಭೀಕರ ಹತ್ಯಾಕಾಂಡ
1996, ಏ.28ರಂದು ಆಸ್ಟ್ರೇಲಿಯಾದ ಟಾಸ್ಮೇನಿಯಾದಲ್ಲಿರುವ ಅರ್ಥರ್ ಬಂದರಿನಲ್ಲಿ ಭಾರೀ ಗುಂಡಿನ ದಾಳಿಯಾಗಿತ್ತು. ಆಗ 35 ಮಂದಿ ಮೃತಪಟ್ಟಿದ್ದರು. ಅದಾದ ಆಸ್ಟ್ರೇಲಿಯಾದ ಬಂದೂಕುಗಳನ್ನು ನೀಡಲು ಬಿಗುವಾದ ಕಾನೂನುಗಳನ್ನು ಜಾರಿ ಮಾಡಲಾಗಿದೆ. ಅದಾದ ನಂತರ ಆಸ್ಟ್ರೇಲಿಯಾದಲ್ಲಿ ಬೃಹತ್ ಹತ್ಯಾಕಾಂಡ ಭಾನುವಾರ ನಡೆದಿದೆ.

ಬೆಂಗಳೂರು ಸೇರಿ ಭಾರತದ ಹಲವೆಡೆ ಕಟ್ಟೆಚ್ಚರ
ಆಸ್ಟ್ರೇಲಿಯಾದಲ್ಲಿ ಭಾರೀ ದಾಳಿಯಾದ ಬೆನ್ನಲ್ಲೇ ಭಾರತದಲ್ಲೂ ತೀವ್ರ ಎಚ್ಚರಿಕೆ ವಹಿಸಲಾಗಿದೆ. ಯಹೂದಿಗಳು ಭಾರತದಲ್ಲೂ ಇದ್ದಾರೆ. ಮುಖ್ಯವಾಗಿ ಬೆಂಗಳೂರು, ದೆಹಲಿ, ಮುಂಬೈನಲ್ಲಿ ಯಹೂದಿಗಳ ತಾಣಗಳಿರುವುದರಿಂದ ಅಲ್ಲಿ ನಿಗಾವಹಿಸಲಾಗಿದೆ ಎಂದು ಮೂಲಗಳು ಹೇಳಿವೆ.

ರಾಜ್ಯಸಭೆಯಲ್ಲಿ ಸರಕಾರಕ್ಕೆ ಸುಧಾಮೂರ್ತಿ ಆಗ್ರಹ
3ರಿಂದ 6 ವರ್ಷದ ಮಕ್ಕಳಿಗೆ ಕಡ್ಡಾಯ ಶಿಕ್ಷಣ, ಉಚಿತ ಆರೈಕೆ

ನವದೆಹಲಿ: 3ರಿಂದ 6 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಉಚಿತವಾಗಿ, ಕಡ್ಡಾಯವಾಗಿ ಆರೈಕೆ ಹಾಗೂ ಬಾಲ್ಯಶಿಕ್ಷಣ (ಅರ್ಲಿ ಚೈಲ್ಡ್‌ಹುಡ್ ಕೇರ್ ಆ್ಯಂಡ್ ಎಜುಕೇಶನ್ -ಇಸಿಸಿಇ) ಸಿಗಬೇಕು ಎಂದು ರಾಜ್ಯಸಭೆಯಲ್ಲಿ ಸುಧಾ ಮೂರ್ತಿ ಆಗ್ರಹಿಸಿದ್ದಾರೆ. ಇದಕ್ಕಾಗಿ ಸಂವಿಧಾನದಲ್ಲಿ ತಿದ್ದುಪಡಿ ತಂದು ಹೊಸ ವಿಧಿ 21(ಬಿ) ಯನ್ನು ಸೇರಿಸಬೇಕೆಂದು ಅವರು ಕೇಂದ್ರ ಸರಕಾರಕ್ಕೆ ಒತ್ತಾಯಿಸಿದ್ದಾರೆ. ರಾಜ್ಯಸಭೆಯಲ್ಲಿ ನಿರ್ಣಯ ಮಂಡಿಸಿದ ಸುಧಾ ಮೂರ್ತಿ, ಅಂಗನವಾಡಿ ಕಾರ್ಯಕರ್ತರನ್ನು ಅಭಿನಂದಿಸಿದ್ದು, ಈ ಯೋಜನೆಗೆ ಈಗ 50 ವರ್ಷಗಳಾಗಿವೆ ಎನ್ನುವ ಮೂಲಕ ಭಾಷಣ ಆರಂಭಿಸಿದರು.

1975ರಲ್ಲಿ ಪ್ರಾರಂಭಿಸಲಾದ ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆಯು ಗರ್ಭಿಣಿಯರು, ಹಾಲುಣಿಸುವ ತಾಯಂದಿರು ಮತ್ತು ಆರು ವರ್ಷದವರೆಗಿನ ಮಕ್ಕಳಿಗೆ ನೆರವು ನೀಡಿದೆ. ಈ ಯೋಜನೆ ಸಂಬಂಧ 2002ರಲ್ಲಿ ವಾಜಪೇಯಿ ಸರಕಾರ ಪ್ರಮುಖ ಸುಧಾರಣೆಗಳನ್ನು ಸುಧಾ ಮೂರ್ತಿ ಉಲ್ಲೇಖಿಸಿದ್ದಾರೆ. ವಾಜಪೇಯಿ ಸರಕಾರದ ಅವಧಿಯಲ್ಲಿ 86ನೇ ಸಾಂವಿಧಾನಿಕ ತಿದ್ದುಪಡಿಯು 6ರಿಂದ 14 ವರ್ಷ ವಯಸ್ಸಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಮಾಡಿತ್ತು ಎಂದರು.

ರಾಜ್ಯದಲ್ಲಿ ಮುಂದುವರಿದ ದುಷ್ಕೃತ್ಯ | ಅಪಹರಿತರಲ್ಲಿ 6891 ಹೆಣ್ಣುಮಕ್ಕಳು
3 ವರ್ಷದಲ್ಲಿ 9,639 ಮಕ್ಕಳ ಅಪಹರಣ!


ಬೆಂಗಳೂರು: ಕಳೆದ ಮೂರು ವರ್ಷಗಳಲ್ಲಿ 9,639 ಮಕ್ಕಳ ಅಪಹರಣವಾಗಿರುವ ಕುರಿತು ಗೃಹ ಇಲಾಖೆ ಅಂಕಿಅಂಶಗಳಿಂದ ತಿಳಿದು ಬಂದಿದೆ. ಕಳೆದ 3 ವರ್ಷಗಳಲ್ಲಿ, 2023, 2024 ಹಾಗೂ 2025ರ ನ.15ರವರೆಗೆ ರಾಜ್ಯದಲ್ಲಿ ಒಟ್ಟು 9,639 ಮಕ್ಕಳು ಅಪಹರಣಕ್ಕೊಳಗಾಗಿರುವ ವರದಿಯಾಗಿದೆ. 2023ರಲ್ಲಿ ರಾಜ್ಯದಲ್ಲಿ 3,039 ಮಕ್ಕಳು, 2024ರಲ್ಲಿ 3,411 ಮಕ್ಕಳು ಹಾಗೂ 2025ರಲ್ಲಿ ಇದುವರೆಗೆ 3,189 ಮಕ್ಕಳು ಅಪಹರಣಕ್ಕೊಳಗಾಗಿದ್ದಾರೆ.

6,891 ಬಾಲಕಿಯರ ಅಪಹರಣ: ಮೂರು ವರ್ಷ ವರದಿಯಾಗಿರುವ ಅಪಹರಣ, ನಾಪತ್ತೆಯಾದ ಒಟ್ಟು ಮಕ್ಕಳಲ್ಲಿ ಹೆಣ್ಣು ಮಕ್ಕಳ ಪ್ರಮಾಣವೇ ಹೆಚ್ಚಿರುವುದು ಆಘಾತಕಾರಿ ವಿಚಾರವಾಗಿದೆ. ಈ ಅವಧಿಯಲ್ಲಿ ಸುಮಾರು 6,891 ಬಾಲಕಿಯರು ಅಪಹರಣ, ನಾಪತ್ತೆಯಾಗಿದ್ದಾರೆ. ಅಂದರೆ ಒಟ್ಟಾರೆ ಮಕ್ಕಳ ಅಪಹರಣದಲ್ಲಿ ಶೇ.71.50ರಷ್ಟು ಬಾಲಕಿಯರಿದ್ದಾರೆ. ಅಲ್ಲದೆ, ಒಟ್ಟು 2,748 ಗಂಡು ಮಕ್ಕಳು ಕಣ್ಮರೆ ಇಲ್ಲವೇ ಅಪಹರಣಗೊಂಡಿದ್ದಾರೆ. 2023ರಲ್ಲಿ ಒಟ್ಟು 3,039 ಮಕ್ಕಳು ಅಪಹರಣಕ್ಕೀಡಾಗಿದ್ದಾರೆ. ಈ ಪೈಕಿ 2,131 ಹೆಣ್ಣು ಮಕ್ಕಳಿದ್ದಾರೆ. → 4

ಸಮಾಚಾರ ಸಣ್ಣದಲ್ಲ

ನೂತನ ಅಧ್ಯಕ್ಷೆಯಾಗಿ ಆರ್.ಸುನಂದಮ್ಮ ಆಯ್ಕೆ

ಚಿಕ್ಕಬಳ್ಳಾಪುರ : ಇತ್ತೀಚಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಸಾಹಿತಿ ಡಾ.ಆರ್.ಸುನಂದಮ್ಮ ಅವರು ಕರ್ನಾಟಕ ಲೇಖಕಿಯರ ಸಂಘದ ನೂತನ ಅಧ್ಯಕ್ಷರಾಗಿ ಭಾನುವಾರ ಆಯ್ಕೆಯಾಗಿದ್ದಾರೆ. ಬೆಂಗಳೂರಿನಲ್ಲಿ ನಡೆದ ಚುನಾವಣೆಯಲ್ಲಿ ಡಾ. ಆರ್ ಸುನಂದಮ್ಮ 471 ಮಾತುಗಳನ್ನು ಪಡೆದು ಅಧ್ಯಕ್ಷರಾಗಿ ಆಯ್ಕೆಯಾದರೆ ಎದುರಾಳಿನಿರ್ಮಲ ಯಲಿಗಾರ್282 ಮತಗಳನ್ನು ಪಡೆದು ಪರಾಜಿತರಾದರು.ಒಟ್ಟು 757 ಮತಗಳ ಪೈಕಿ 04 ಮತಗಳು ಅಸಿಂಧುವಾದರೆ ಉಳಿದವು ಚಲಾವಣೆಯಾದವು. ಸುನಂದಮ್ಮ ಅವರ ಆಯ್ಕೆಯ ಸಂಗತಿ ತಿಳಿದ ಕೂಡಲೇ ಜಿಲ್ಲೆಯ ಸಾಹಿತ್ಯ ವಲಯದಲ್ಲಿ ಸಂತಸ ಮನೆಮಾಡಿದೆ. ಅಂದ ಹಾಗೆ ಆರ್‌ಸುನಂದಮ್ಮ ಜಿಲ್ಲೆಯ ಶಿಡ್ಲಘಟ್ಟ ತಾಲೂಕು ಜಂಗಮಕೋಟೆ ಹೋಬಳಿ ವೆಂಕಟಾಪುರ ಗ್ರಾಮದವರು.ಹಾಲಿ ವಾಸ ಬೆಂಗಳೂರು.

ಮಕ್ಕಳಲ್ಲಿ ಅಡಗಿರುವ ಪ್ರತಿಭೆ ಗುರುತಿಸಿ

ಶಿಡ್ಲಘಟ್ಟ : ಪ್ರತಿಭಾವಂತ ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ಗುರುತಿಸಿ ಈ ರೀತಿಯ ಸ್ಪರ್ಧೆ ಗಳಲ್ಲಿ ಮಕ್ಕಳು ಪಾಲ್ಗೊಳ್ಳುವದರಿಂದ ಅವರಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಯುತ್ತದೆ ಹಾಗೂ ಮಕ್ಕಳ ಮನೋ ವಿಕಾಸ ಹೊಂದಲು ದಾರಿಯಾಗುತ್ತದೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸುಬ್ಬಾರೆಡ್ಡಿ ಹೇಳಿದರು.ನಗರದ ಶ್ರೀ ವಾಸವಿ ವಿದ್ಯಾಸಂಸ್ಥೆ ಯ ಆವರಣದಲ್ಲಿ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ದ ಅಂಗವಾಗಿ ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಇಲಾಖೆ ಏರ್ಪಡಿಸಿದ್ದ ಶಾಲಾ ಮಕ್ಕಳಿಗೆ ವಿವಿಧ ಸ್ಪರ್ಧೆ ಗಳನ್ನು ಏರ್ಪಡಿಸಲಾಗಿತ್ತು.ಸ್ಪರ್ಧೆಯಲ್ಲಿ ವಿಜೇತ ರಾದವರಿಗೆ ಪ್ರಮಾಣ ಪತ್ರಗಳನ್ನು ವಿತರಿಸಿ ಮಾತನಾಡಿದ ಅವರು ಪ್ರತಿಭೆ ಗುರುತಿಸದ ಕಾರಣ ಎಷ್ಟೋ ಮಕ್ಕಳು ಅವಕಾಶದಿಂದ ವಂಚಿತರಾಗುತ್ತಿದ್ದಾರೆ. ಮಕ್ಕಳಲ್ಲಿ ಕೀಳರಿಮೆ ಮೂಡುತ್ತಿದೆ.ಇಂದಿನ ಆಧುನಿಕ ಯುಗದಲ್ಲಿ ಕೇವಲ ಪಠ್ಯಗಳ ಜತೆ ಪಠ್ಯೇತರ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ಪಾಲ್ಗೊಳ್ಳಲು ಮಕ್ಕಳನ್ನು ಪ್ರೇರೇಪಿ ಸಬೇಕು.ಹೀಗಾದಾಗ ಮಾತ್ರ ವಿದ್ಯಾರ್ಥಿ ಪರಿಪೂರ್ಣ ವ್ಯಕ್ತಿತ್ವ ಹೊಂದಲು ಸಾಧ್ಯ ಎಂದರು.ಅಧ್ಯಕ್ಷ ತೆ ವಹಿಸಿದ್ದ ವಾಸವಿ ವಿದ್ಯಾಸಂಸ್ಥೆ ಯ ಆಡಳಿತಾಧಿಕಾರಿ ರೂಪಸಿ ರಮೇಶ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಪ್ರಗತಿ ಪರ ರೈತ ಸೊಣ್ಣಪ್ಪ ರೆಡ್ಡಿ, ಶಾಲಾ ಮುಖ್ಯ ಶಿಕ್ಷಕ ಶಿವಕುಮಾರ್,ಹಾಗೂ ಸಿ, ರವಿ ಪಾಲ್ಗೊಂಡರು,ವಿಜೇತ ರಾದ ಮಕ್ಕಳಿಗೆ ಪ್ರಶಸ್ತಿ ಪತ್ರಗಳನ್ನು ವಿತರಿಸಲಾಯಿತು. ಗ್ರಂಥಪಾಲಕಿಯರಾದ ರಾಮಲೀಲ,ಮತ್ತು ಬಾಂಧವ್ಯ ಮತ್ತಿತರರು ಉಪಸ್ಥಿತರಿದ್ದರು.

ಜಾತಿಧರ್ಮ ಒಗ್ಗೂಡಿಸುವ ಸಾಮರ್ಥ್ಯ ಕನ್ನಡಕ್ಕಿದೆ

ತುಮಕೂರು: ಎಲ್ಲರೂ ಒಟ್ಟಾಗಿ ಕನ್ನಡ ಭಾಷೆ, ನಾಡಿಗೆ ವಿಶೇಷ ಗೌರವ ಸಲ್ಲಿಸುವ ನಾಡಹಬ್ಬವಾಗಿ ಕನ್ನಡ ರಾಜ್ಯೋತ್ಸವ ಆಚರಿಸುತ್ತೇವೆ. ಎಲ್ಲಾ ಜಾತಿ, ಧರ್ಮ,ಸಮುದಾಯಗಳನ್ನು ಒಗ್ಗೂಡಿಸುವ ಸಾಮರ್ಥ್ಯ ಕನ್ನಡ ಭಾಷೆಗಿದೆ ಎಂದು ಮಾಜಿ ಶಾಸಕ ಡಾ.ಎಸ್.ರಫಿಕ್ ಅಹ್ಮದ್ ಅಭಿಪ್ರಾಯಪಟ್ಟರು.ನಗರದ ರಿಂಗ್ ರಸ್ತೆಯ ದಾನಾ ಪ್ಯಾಲೇಸ್ ವೃತ್ತದಲ್ಲಿ ಸುವರ್ಣ ಕರ್ನಾಟಕ ಕಾರ್ಮಿಕರ ರಕ್ಷಣಾ ಪರಿಷತ್ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವದಲ್ಲಿ ಕನ್ನಡ ಧ್ವಜಾರೋಹಣ ನೆರವೇರಿಸಿ ಧ್ವಜವಂದನೆ ಸ್ವೀಕರಿಸಿ ಮಾತನಾಡಿದ ಅವರು, ನಾಡಹಬ್ಬವನ್ನು ಕರ್ನಾಟಕ ಏಕೀಕರಣಕ್ಕಾಗಿ ಶ್ರಮಿಸಿದ ಮಹನೀಯರ ಸೇವೆ ಸ್ಮರಿಸುವ ಹಾಗೂ ಕನ್ನಡ ನಾಡು, ನುಡಿ ಉಳಿವು, ಬೆಳವಿಗೆ ಸಂಕಲ್ಪ ಮಾಡುವ ದಿನವಾಗಿ ಆಚರಿಸಬೇಕು. ಕರ್ನಾಟಕ ಮಾತ್ರವಲ್ಲದೆ, ದೇಶದ ಹಾಗೂ ವಿಶ್ವದ ವಿವಿಧೆಡೆ ಇರುವ ಕನ್ನಡಿಗರು ರಾಜ್ಯೋತ್ಸವವನ್ನು ಅಭಿಮಾನದಿಂದ ಆಚರಿಸುತ್ತಾರೆ ಎಂದರು.ವಿವಿಧ ಮುಖಂಡರನ್ನು ಸನ್ಮಾನಿಸಿ ಮಾಜಿ ಶಾಸಕ ಎಸ್.ಷಫಿ ಅಹ್ಮದ್ ಅವರು ಮಾತನಾಡಿದರು.

ಪತ್ರಕರ್ತರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ

ಹುಳಿಯಾರು: ದೃಷ್ಟಿ ಹೀನತೆಗೆ ಒಳಗಾಗಿದ್ದ ಪತ್ರಕರ್ತ ರಮೇಶ್ ಮನೆಗೆ ಚಿಕ್ಕನಾಯಕನಹಳ್ಳಿ ತಾಲೂಕು ಕಾರ್ಮಿಕ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ, ಸ್ಮಾರ್ಟ್ ಕಾರ್ಡ್ ಪಡೆಯಲು ಅರ್ಜಿ ವಿತರಿಸಿ ಯೋಜನೆಯ ಬಗ್ಗೆ ಮಾಹಿತಿ ನೀಡಿದರು. ಕೆಯುಡಬ್ಲ್ಯುಜೆ ಜಿಲ್ಲಾಧ್ಯಕ್ಷ ಎಲ್. ಯೋಗೇಶ್ ಮನವಿ ಮೇರೆಗೆ ತಾಲೂಕು ಕಾರ್ಮಿಕ ಇಲಾಖೆಯ ತಾಲೂಕು ಅಧಿಕಾರಿ ತಿಲಕ್ ಹುಳಿಯರಿನಲ್ಲಿರುವ ರಮೇಶ್ ಮನೆಗೆ ತೆರಳಿ ಸಂಪೂರ್ಣ ಮಾಹಿತಿ ಪಡೆದು, ಅಸಂಘಟಿತ ವಲಯದ ಕಾರ್ಮಿಕರ ಸಾಮಾಜಿಕ ಭದ್ರತೆಗಾಗಿ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ವತಿಯಿಂದ ಜಾರಿಗೊಳಿಸಲಾಗಿರುವ ಅಂಬೇಡ್ಕರ್‌ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ ತಿಳಿಸಿ, ಸ್ಥಳದಲ್ಲೇ ಅರ್ಜಿ ಭರ್ತಿ ಮಾಡಿಸಿಕೊಂಡರು.ನಂತರ ತಿಲಕ್ ಅಂಬೇಡ್ಕರ್ ಅವರು ಮಾತನಾಡಿದರು.

{ಎಂ.ಬಿ.ಪಾಟೀಲ } ಸಚಿವ

2ನೇ ವಿಮಾನ ನಿಲ್ದಾಣಕ್ಕಾಗಿ ರಾಜ್ಯ ಸರಕಾರವು ಕನಕಪುರ ರಸ್ತೆಯಲ್ಲಿರುವ ಚೂಡಹಳ್ಳಿ, ಸೋಮನಹಳ್ಳಿ ಮತ್ತು ನೆಲಮಂಗಲದ ಬಳಿ ಸ್ಥಳಗಳನ್ನು ಗುರುತಿಸಿದೆ. ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಉನ್ನತ ಮಟ್ಟದ ತಂಡವು ಇವುಗಳ ಪರಿಶೀಲನೆ ನಡೆಸಿ, ಪ್ರಾಥಮಿಕ ವರದಿ ನೀಡಿದೆ.

ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಹಕ್ಕು ಪತ್ರ ವಿತರಣೆ ಕಾರ್ಯಕ್ರಮದಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ ಹೇಳಿಕೆ

ಗ್ರೇಟರ್ ತುಮಕೂರು ಘೋಷಣೆಗೆ ಪ್ರಸ್ತಾವನೆ ಸಲ್ಲಿಕೆ

ತುಮಕೂರು: ಗ್ರೇಟರ್‌ತುಮಕೂರು ಘೋಷಣೆಗಾಗಿ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಈ ಕುರಿತು ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಜಿ. ಪರಮೇಶ್ವರ ಹೇಳಿದರು.

ನಗರದ ಕೇಂದ್ರ ಗ್ರಂಥಾಲಯ ಸಭಾಂಗಣದಲ್ಲಿ ಭಾನುವಾರ ನಗರಾಭಿವೃದ್ಧಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಹಯೋಗದಲ್ಲಿ ಇ-ಖಾತಾ(ನಮೂನೆ 2) ವಿತರಣಾ ಕಾರ್ಯಕ್ರಮ ಮತ್ತು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಹಕ್ಕು ಪತ್ರ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗ್ರೇಟರ್‌ತುಮಕೂರು ಘೋಷಣೆಯಿಂದ ನಗರಕ್ಕೆ ಹೆಚ್ಚಿನ ಅನುದಾನ ಲಭ್ಯವಾಗುತ್ತದೆ. ರಸ್ತೆ, ಕುಡಿಯುವ ನೀರು, ಒಳಚರಂಡಿ ಸೇರಿದಂತೆ ಮೂಲಸೌಕರ್ಯ ಅಭಿವೃದ್ಧಿ ಸುಧಾರಣೆಗೊಳ್ಳುತ್ತದೆ. ಕೈಗಾರಿಕೆ, ಉದ್ಯೋಗಾವಕಾಶಗಳು ಹೆಚ್ಚಾಗುತ್ತವೆ. ಯೋಜಿತ ನಗರ ಅಭಿವೃದ್ಧಿ ಹೊಂದಿ ಜನರ ಜೀವನಮಟ್ಟ ಉತ್ತಮಗೊಳಿಸುವ ಉದ್ದೇಶದಿಂದ ಈ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.ನಗರದಲ್ಲಿ 5ಕೋಟಿ ರು. ವೆಚ್ಚದಲ್ಲಿ 18 ಪಾರ್ಕ್ ಗಳನ್ನು ನವೀಕರಿಸಲಾಗುತ್ತಿದೆ. ಪೌರಕಾರ್ಮಿಕರ ಬದುಕು ಸುಧಾರಣೆಗೆ ಅವರಿಗೆ ಖಾಯಂ ಉದ್ಯೋಗ ಹಾಗೂ ವಸತಿ ಸೌಲಭ್ಯ ಒದಗಿಸುವ ನಿರ್ಧಾರ ಕೈಗೊಳ್ಳಲಾಗಿದೆ. ದಿಬ್ಬೂರು ವ್ಯಾಪ್ತಿಯಲ್ಲಿ 64 ಕೊಠಡಿಗಳ ಅಪಾರ್ಟ್‌ಮೆಂಟ್ ನಿರ್ಮಿಸಿ ಕೊಡುವ ಕಾರ್ಯಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗಿದೆ ಎಂದರಲ್ಲದೆ, ತುಮಕೂರು ಅಭಿವೃದ್ಧಿಯಾದರೆ ನಾಗರಿಕರ ಸಮಗ್ರ ಅಭಿವೃದ್ಧಿ ಸಾಧ್ಯವೆಂಬ ದೃಷ್ಟಿಯಿಂದ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯಡಿ ಜಿಲ್ಲೆಗೆ 120 ಕೋಟಿ ರು. ಅನುದಾನವನ್ನು ಸರ್ಕಾರ ಮಂಜೂರು ಮಾಡಿದೆ ಎಂದು ಹೇಳಿದರು.ನಗರ ಶಾಸಕ ಜಿ.ಬಿ.ಜ್ಯೋತಿ ಗಣೇಶ್ ಮಾತನಾಡಿ, ಪೌರಕಾರ್ಮಿಕರು ಹಾಗೂ ಕೊಳಗೇರಿ ಪ್ರದೇಶದ ನಿವಾಸಿಗಳ ಜೀವನಮಟ್ಟವನ್ನು ಸುಧಾರಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ಹೇಳಿದರು. ಕೊಳಗೇರಿ ಪ್ರದೇಶಗಳಲ್ಲಿ ಯುಜಿಡಿ ಹಾಗೂ ಕಸ ವಿಲೇವಾರಿ ವ್ಯವಸ್ಥೆಯನ್ನು ಇನ್ನಷ್ಟು ಉತ್ತಮಗೊಳಿಸ 'ಬೇಕಾದ ಅಗತ್ಯವಿದೆ. ಜೊತೆಗೆ, ಕೊಳಗೇರಿ ಪ್ರದೇಶಗಳ ಹೆಸರನ್ನು ಬದಲಿಸುವ ಮೂಲಕ ಸಾಮಾಜಿಕ ಗೌರವ ಹೆಚ್ಚಿಸುವ ಕ್ರಮ ಕೈಗೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.ಮಹಾನಗರ ಪಾಲಿಕೆ ಆಯುಕ್ತ ಯೋಗಾನಂದ ಮಾತನಾಡಿ, ಕರ್ನಾಟಕ ಸರ್ಕಾರದ ಮಹತ್ವದ ಯೋಜನೆಯಾದ ಇ-ಆಸ್ತಿ ತಂತ್ರಾಂಶದ ಮೂಲಕ ಮಹಾನಗರಪಾಲಿಕೆ ವ್ಯಾಪ್ತಿಯ 1.30ಲಕ್ಷ ಆಸ್ತಿಗಳ ಪೈಕಿ 50ಸಾವಿರ ಅರ್ಜಿಗಳನ್ನು ವಿಲೇವಾರಿ ಮಾಡಿ 48ಸಾವಿರ ಆಸ್ತಿಗಳಿಗೆ ಇ-ಖಾತಾ(ನಮೂನೆ೨2) ವಿತರಿಸಲಾಗುತ್ತಿದೆ. ಗೃಹ ಭಾಗ್ಯ ಯೋಜನೆಯಡಿ 52 ಪೌರಕಾರ್ಮಿಕ ಫಲಾನುಭವಿಗಳಿಗೆ ಇ-ಖಾತೆ ವಿತರಣೆ ಮಾಡಲಾಗುತ್ತದೆ. ಜತೆಗೆ, ಕೊಳಗೇರಿಮುಕ್ತ ನಗರ ನಿರ್ಮಾಣದ ಉದ್ದೇಶದಿಂದ 4 ಕೊಳಗೇರಿ ಪ್ರದೇಶಗಳ 120 ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ನೀಡಲಾಗುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿ. ಪ್ರಭು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಶೋಕ್ ಕೆ.ವಿ, ಬಿ.ಎಂ.ಟಿ.ಸಿ ಉಪಾಧ್ಯಕ್ಷ ನಿಕೇತ್ ಮೌರ್ಯ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಹಕ್ಕು ಪತ್ರ ವಿತರಣಾ ಕಾರ್ಯಕ್ರಮವನ್ನು ಸಚಿವ ಡಾ. ಜಿ. ಪರಮೇಶ್ವರ ಅವರು ಉದ್ಘಾಟಿಸಿದರು.

ನಗರದಲ್ಲಿ 5ಕೋಟಿ ರು. ವೆಚ್ಚದಲ್ಲಿ 18 ಪಾರ್ಕ್ ಗಳನ್ನು ನವೀಕರಿಸಲಾಗುತ್ತಿದೆ. ಪೌರಕಾರ್ಮಿಕರ ಬದುಕು ಸುಧಾರಣೆಗೆ ಅವರಿಗೆ ಖಾಯಂ ಉದ್ಯೋಗ ಹಾಗೂ ವಸತಿ ಸೌಲಭ್ಯ ಒದಗಿಸುವ ನಿರ್ಧಾರ ಕೈಗೊಳ್ಳಲಾಗಿದೆ. ದಿಬ್ಬೂರು ವ್ಯಾಪ್ತಿಯಲ್ಲಿ 64 ಕೊಠಡಿಗಳ ಅಪಾರ್ಟ್‌ಮೆಂಟ್ ನಿರ್ಮಿಸಿ ಕೊಡುವ ಕಾರ್ಯಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗಿದೆ.

-ಡಾ.ಜಿ.ಪರಮೇಶ್ವರ, ಸಚಿವ

ಎನ್‌ಜಿ ಪಬ್ಲಿಕ್ ಶಾಲೆಯಲ್ಲಿ ಮೆಟ್ರಿಕ್ ಮೇಳ ಯಶಸ್ವಿ

ಕಳ್ಳಿಪಾಳ್ಯದಲ್ಲಿರುವ ಎನ್ ಜಿ ಪಬ್ಲಿಕ್ ಶಾಲೆಯಲ್ಲಿ ಮೆಟ್ರಿಕ್ ಮೇಳ ಯಶಸ್ವಿಯಾಗಿ ನಡೆಯಿತು.

ತುಮಕೂರು: ಕಳ್ಳಿಪಾಳ್ಯದಲ್ಲಿರುವ ಎನ್ ಜಿ ಪಬ್ಲಿಕ್ ಶಾಲೆಯಲ್ಲಿ ಶಾಲಾ ಮುಖ್ಯಸ್ಥರ ನೇತೃತ್ವದಲ್ಲಿ ಅದ್ಭುತವಾದ ಮೆಟ್ರಿಕ್ ಮೇಳವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು.

ಈ ಮೇಳದಲ್ಲಿ ಸ್ಟೇಷನರಿ, ಫ್ಯಾನ್ಸಿ ವಸ್ತುಗಳು, ತರಕಾರಿ ಮತ್ತು ಹಣ್ಣುಗಳ ಅಂಗಡಿಗಳು, ಸ್ನಾಕ್ಸ್ ತಿನಿಸುಗಳು, ಮಕ್ಕಳ ಆಟಿಕೆಗಳು ಹಾಗೂ ದಿನನಿತ್ಯ ಬಳಕೆಯ ವಿವಿಧ ವಸ್ತುಗಳು ವಿದ್ಯಾರ್ಥಿಗಳಿಂದಲೇ ವ್ಯವಸ್ಥಿತವಾಗಿ ಪ್ರದರ್ಶನಗೊಂಡವು.

ಕಾರ್ಯಕ್ರಮದ ಯಶಸ್ಸಿಗೆ ಪ್ರಾಂಶುಪಾಲರಾದ ಜ್ಯೋತಿ, ಮುಖ್ಯಶಿಕ್ಷಕರಾದ ಗೋಪಾಲ ಕೃಷ್ಣ, ಶಾಲೆಯ ಎಲ್ಲಾ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರು ಸಕ್ರಿಯವಾಗಿ ಪಾಲ್ಗೊಂಡು ಕೈಜೋಡಿಸಿದರು.

ಪ್ರಾಂಶುಪಾಲರಾದ ಜ್ಯೋತಿ ಅವರು ಮಾತನಾಡಿ,ಈ ಮೇಳವು ಮಕ್ಕಳಲ್ಲಿ ವ್ಯವಹಾರ ಜ್ಞಾನ, ಸ್ವಾವಲಂಬನೆ, ಹಾಗೂ ಆತ್ಮವಿಶ್ವಾಸ ಬೆಳೆಸುವಲ್ಲಿ ಮಹತ್ವದ ಪಾತ್ರವಹಿಸಿದೆ. ಮಕ್ಕಳ ಶೈಕ್ಷಣಿಕ ಬೆಳವಣಿಗೆಯ ಜತೆಗೆ ಪ್ರಾಯೋಗಿಕ ಜೀವನ ಕೌಶಲಗಳನ್ನು ಹೆಚ್ಚಿಸಲು ಸಹಕರಿಸಿದೆ ಎಂದು ಹೇಳಿದರು.

ಅಂಬೇಡ್ಕರ್ ಭವನ ನಿರ್ಮಾಣಕ್ಕೆ 2 ಕೋಟಿ ರು. ಬಿಡುಗಡೆ: ಶಾಸಕ

ಬಾಗೇಪಲ್ಲಿ: ತಾಲ್ಲೂಕು ಕೇಂದ್ರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್‌ಭವನ ನಿರ್ಮಾಣ ಮಾಡಬೇಕು. ಗುರ್ರಾಲದಿನ್ನೆ ಗ್ರಾಮದ ಬಳಿಯ ಹಜರತ್ ಉಸ್ಮಾನ್ ಷಾ ಆಸ್ತಾನದ ದರ್ಗಾಕ್ಕೆ ಅನುದಾನ ಕಲ್ಪಿಸಬೇಕು ಎಂದು ಒತ್ತಾಯಿಸಿ ಮಹಾನಾಯಕ ಡಾ.ಬಿ.ಆರ್. ಅಂಬೇಡ್ಕರ್‌ಸೇನೆ ಮುಖಂಡರು ಶಾಸಕ ಎಸ್. ಎನ್. ಸುಬ್ಬಾರೆಡ್ಡಿಗೆ ಮನವಿ ಪತ್ರ ಸಲ್ಲಿಸಿದರು.

ಮಹಾನಾಯಕ ಡಾ.ಬಿ.ಆರ್. ಅಂಬೇಡ್ಕರ್ ಸೇನೆಯ ತಾಲ್ಲೂಕು ಅಧ್ಯಕ್ಷ ನಾರಾಯಣಸ್ವಾಮಿ ಮಾತನಾಡಿ, ಅನೇಕ ವರ್ಷಗಳಿಂದ ತಾಲ್ಲೂಕು ಕೇಂದ್ರದಲ್ಲಿ ಅಂಬೇಡ್ಕರ್‌ಭವನ ನಿರ್ಮಿಸುವಂತೆ ದಲಿತಪರ ಸಂಘಟನೆಗಳು ಬೀದಿಗಿಳಿದು ಹೋರಾಟ ಮಾಡಿದೆ. ಆದರೆ ಅಂಬೇಡ್ಕರ್‌ಭವನ ನಿರ್ಮಾಣ ಆಗಿಲ್ಲ. ಅಂಬೇಡ್ಕರ್‌ಭವನ ನಿರ್ಮಾಣ ಬಗ್ಗೆ ವಿಧಾನ ಸಭೆಯಲ್ಲಿ ಅಧಿವೇಶನ ದಲ್ಲಿ ಪ್ರಸ್ತಾಪಿಸುವಂತೆ ಶಾಸಕರಿಗೆ ಮನವಿ ಮಾಡಿದರು. ತಾಲ್ಲೂಕಿನ ಕಸಬಾ ಗೆ ಸೇರಿದ ಗುರ್ರಾಲದಿನ್ನೆ ಗ್ರಾಮದ ಬಳಿಯ ಹಜರತ್ ಉಸ್ಮಾನ್ ಷಾ ಆಸ್ತಾನ ದರ್ಗಾಗೆ ಕುಡಿಯುವ ನೀರು, ರಸ್ತೆ, ಕಟ್ಟಡ ನಿರ್ಮಾಣ, ವಿದ್ಯುತ್, ಸಿ.ಸಿ ರಸ್ತೆ ಕಾಮಗಾರಿ ಮಾಡಿಸಬೇಕು. ಪೆನುಮಲ ಗ್ರಾಮದಿಂದ ಸಿದ್ದನಪಲ್ಲಿ, ಕಾಗಾನಪಲ್ಲಿ, ಮೈನಗಾನಪಲ್ಲಿ ಗ್ರಾಮದವರೆಗೆ ರಸ್ತೆ ನಿರ್ಮಾಣ ಮಾಡಿಸಲು ಪಟ್ಟಣದ ಶಾಸಕರ ಸ್ವಗೃಹದಲ್ಲಿ ಮಹಾನಾಯಕ ಡಾ.ಬಿ.ಆರ್‌ಅಂಬೇಡ್ಕರ್ ಸೇನೆ ಮುಖಂಡರು ಶಾಸಕ ಎಸ್ ಎನ್ಸುಬ್ಬಾರೆಡ್ಡಿಗೆ ಮನವಿ ಸಲ್ಲಿಸಿದರು.

ಡಾ.ಬಿ.ಆರ್.ಅಂಬೇಡ್ಕರ್‌ನಿರ್ಮಾಣ ಮಾಡಬೇಕು ಎಂದು ಯಲ್ಲಂಪಲ್ಲಿ ಗ್ರಾಮದಲ್ಲಿ ಭವನಕ್ಕೆ ಅನ್ವೇಷಣೆ ಮಾಡಲು ಅಧಿಕಾರಿಗಳಿಗೆ ತಿಳಿಸಿದ್ದೇನೆಂದ ಅವರು ಇದಕ್ಕಾಗಿ 12ಲಕ್ಷ ಅನುದಾನ ನೀಡಿದ್ದೇವೆ ಎಂದರು.

ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಪ್ರತಿಕ್ರಿಯಿಸಿ, ತಾಲ್ಲೂಕು ಕೇಂದ್ರದಲ್ಲಿ ಅಂಬೇಡ್ಕರ್ ಭವನದ ಜತೆಗೆ ಡಾ.ಬಿ.ಅಂಬೇಡ್ಕರ್ ಅಧ್ಯಯನ ಕೇಂದ್ರ ಮಾಡಬೇಕು ಎಂದು ಗುರಿ ಇದೆ. ಇದರಿಂದ ಭವನದ ಜತೆಗೆ ಅಧ್ಯಯನ ಕೇಂದ್ರಕ್ಕೆ ಹೆಚ್ಚಿನ ಅನುದಾನ ನೀಡುವಂತೆ ರಾಜ್ಯ ಸರ್ಕಾರಕ್ಕೆ ಮನವಿ ಮಾಡಲಾಗಿದೆ. ಸರ್ಕಾರದ ಕಾರ್ಯ-ದರ್ಶಿಗಳ ಬಳಿ ಕಡತ ಇವೆ. ಶೀಘ್ರವೇ ಹಣಕಾಸಿನ ಅನುಮೋದನೆ ಆಗಿ, ಸರ್ಕಾರದಿಂದ ಅಧಿಕೃತವಾಗಿ ಡಾ. ಬಿ ಆರ್ ಅಂಬೇಡ್ಕರ್‌ಭವನ ಮತ್ತು ಅಂಬೇಡ್ಕರ್ ಅಧ್ಯಯನ ಕೇಂದ್ರಕ್ಕೆ ಅನುದಾನ ಬಿಡುಗಡೆ ಆಗಲಿದೆಂದರು. ಜಿಲ್ಲಾ ಮಹಿಳಾ ಅಧ್ಯಕ್ಷೆ ಎನ್. ರೂಪ, ತಾಲ್ಲೂಕು ಮಹಿಳಾ ಅಧ್ಯಕ್ಷೆ ಗಂಗುಲಮ್ಮ, ತಾಲ್ಲೂಕು ಕಾರ್ಯದರ್ಶಿ ಮಂಜುನಾಥ ನಾಯಕ, ತಾಲೂಕು ಉಪಾಧ್ಯಕ್ಷ ಎನ್.ಶ್ರೀನಿವಾಸ್, ಎ.ಆರ್. ರುಣುಕ್ಕುಮಾರ್, ಬಂಡಿನರಸಿಂಹಪ್ಪ, ಪೆನುಮಲನರಸಿಂಹಪ್ಪ, ಎಂ.ಆರ್. ನರಸಿಂಹಮೂರ್ತಿ ಇತರರು ಹಾಜರಿದ್ದರು.

ಸಮ-ಸಮಾಜ ನಿರ್ಮಾಣಕ್ಕೆ ಕೈಜೋಡಿಸಿ

ನಟ ಚೇತನ್ ಅವರ ಅಭಿಮಾನಿ ಯುವಕರ ಬಳಗದಿಂದ ಸನ್ಮಾನಿಸಲಾಯಿತು.

ಶ್ರೀನಿವಾಸಪುರ: ಕರ್ನಾಟಕದಲ್ಲಿ ಉತ್ತಮ ಸಮಾಜ ನಿರ್ಮಾಣ ಮಾಡುವ ಉದ್ದೇಶದಿಂದ ರಾಜ್ಯದಾದ್ಯಂತ ಇರುವ 224 ಕ್ಷೇತ್ರಗಳಲ್ಲಿ ಒಂದು ದೊಡ್ಡ ಸಾಮಾಜಿಕ ಪರಿವರ್ತನೆ ಮಾಡುವ ಗುರಿಯೊಂದಿಗೆ ನಮ್ಮ ತಂಡ ಹೋರಾಟ ನಡೆಸುತ್ತಿದೆ ಎಂದು ನಟ ಹಾಗೂ ಸಮ-ಸಮಾಜದ ಹೋರಾಟಗಾರ ಚೇತನ್ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನಡ ಚಿತ್ರರಂಗದಲ್ಲಿ ಗುರುತಿಸಿಕೊಂಡಿರುವ ತಾವು, ಕರ್ನಾಟಕದಲ್ಲಿ ಸಮ-ಸಮಾಜವನ್ನು ನಿರ್ಮಾಣ ಮಾಡಲು, ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಲು ಮತ್ತು ಮೇಲು-ಕೀಳು ಎನ್ನುವ ಭಾವನೆಯನ್ನು ಹೋಗಲಾಡಿಸಲು ಕಳೆದ 14 ವರ್ಷಗಳಿಂದ ರಾಜ್ಯದ ಮೂಲೆ-ಮೂಲೆಗಳಲ್ಲಿ ಸಂಚರಿಸಿ ಜನರ ಕಷ್ಟ-ಸುಖಗಳನ್ನು ಅರಿತಿದ್ದೇವೆ ಎಂದರು. ವ್ಯವಸ್ಥಾಪಕ ಜೀವನ್‌ಪ್ರಕಾಶ್, ಕನಿಗಾನಹಳ್ಳಿ ಚಿರಂಜೀವಿ, ಬುಲೆಟ್ ವೆಂಕಟರೆಡ್ಡಿ, ಪುರಸಭೆ ನಾಮಿನಿ ಸದಸ್ಯ ನರಸಿಂಹಮೂರ್ತಿ,ಡಾ. ನಿರಂಜನ್ ಉಪ್ಪರಪಲ್ಲಿ, ದಲಿತ ಹಿರಿಯ ಮುಖಂಡರಾದ ಚಲ್ದಿಗಾನಹಳ್ಳಿ ಮುನಿವೆಂಕಟಪ್ಪ, ನಾಗದೇನ ಹಳ್ಳಿ ಶ್ರೀನಿವಾಸ್, ಲಕ್ಷ್ಮೀಪುರ ಕೃಷ್ಣ, ಚಿರಂಜೀವಿ ಎಂ, ಅರುಣ್ ಕುಮಾರ್ ಎಚ್ ಎಮ್, ಹರೀಶ್ ಪಿಎನ್, ರವಿ ವಿ, ರವಿಕುಮಾರ್ ಹಾಜರಿದ್ದರು.

ಕ್ಷೇತ್ರವಾರು ತಂಡಗಳ ರಚನೆ

ಈ ಎಲ್ಲಾ ಅವ್ಯವಸ್ಥೆಗಳನ್ನು ಹೋಗಲಾಡಿಸಿ ಬಡ ಜನರನ್ನು ಮುಖ್ಯವಾಹಿನಿಗೆ ತರಲು ಒಂದು ತಂಡ ರಚನೆ ಮಾಡಿಕೊಳ್ಳಲಾಗಿದೆ. ಪ್ರತಿ ಕ್ಷೇತ್ರಕ್ಕೆ ಒಂದು ತಂಡ ರಚಿಸಿ, ಆ ಭಾಗಗಳಲ್ಲಿ ನಡೆಯುವ ಭ್ರಷ್ಟಾಚಾರವನ್ನು ತಡೆಹಿಡಿದು ಸಾಮಾನ್ಯರಿಗೆ ನ್ಯಾಯ ಕೊಡಿಸುವ ಕೆಲಸ ಮಾಡಬೇಕೆಂದು ನಾವು ಪಣ ತೊಟ್ಟಿದ್ದೇವೆ. ಇದಕ್ಕೆ ಸಾಮಾಜಿಕ ಕಳಕಳಿಯ ಮನಸ್ಸುಳ್ಳವರು ನಮಗೆ ಕೈಜೋಡಿಸಬೇಕು ಎಂದು ನಟ ಚೇತನ್ ಕರೆ ನೀಡಿದರು.

ಕ್ರೀಡಾಂಗಣ ನಿರ್ಮಾಣ: ಸ್ಥಳ ಪರಿಶೀಲನೆ

ಗುಡಿಬಂಡೆ: ಪಟ್ಟಣದ ಹೊರವಲಯದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ 6 ಎಕರೆ ಜಮೀನು ಮಂಜೂರಾಗಿದ್ದು, ಸದರಿ ಜಾಗಕ್ಕೆ ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ಮಾಡಿದರು. ಆದಷ್ಟು ಶೀಘ್ರವಾಗಿ ಕ್ರೀಡಾಂಗಣ ನಿರ್ಮಾಣ ಮಾಡಲು ಅಗತ್ಯ ಕ್ರಮ ತೆಗೆದುಕೊಳ್ಳಲು ಅಧಿಕಾರಿಗಳು ಮುಂದಾಗಬೇಕೆಂದು ಸೂಚನೆ ನೀಡಿದರು.

ಈ ಸಮಯದಲ್ಲಿ ಮಾಧ್ಯಮ ಗಳೊಂದಿಗೆ ಮಾತನಾಡಿದ ಶಾಸಕರು, ಗುಡಿಬಂಡೆಯಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡುವುದು ನನ್ನ ಸುಮಾರು ದಿನಗಳ ಕನಸಾಗಿದೆ. ಈ ಭಾಗದ ಕ್ರೀಡಾಪಟುಗಳು ಸೇರಿದಂತೆ ಅನೇಕರು ಕ್ರೀಡಾಂಗಣ ನಿರ್ಮಾಣಕ್ಕೆ ಮನವಿ ಮಾಡುತ್ತಿದ್ದಾರೆ. ಅವರ ಮನವಿ ಮೇರೆಗೆ ಗುಡಿಬಂಡೆ ಹೊರವಲಯದ ಅಮಾನಿಬೈರಸಾಗರ ಕೆರೆಯ ಬಳಿ 6 ಎಕರೆ ಜಮೀನನ್ನು ಸಹ ಗುರ್ತಿಸಲಾಗಿದೆ. ಜೊತೆಗೆ ಎರಡು ಕೋಟಿ ಅನುದಾನ ಸಹ ಬಿಡುಗಡೆಯಾಗಿದೆ. ಸುಮಾರು ಸದರಿ ಜಾಗದಲ್ಲಿ ಬೆಟ್ಟ ಗುಡ್ಡಗಳಿರುವ ಕಾರಣದಿಂದ ಕ್ರೀಡಾಂಗಣ ನಿರ್ಮಾಣ ತಡವಾಗುತ್ತಿದೆ. ಇದೇ ಜಾಗದಲ್ಲಿ ಕ್ರೀಡಾಂಗಣ ನಿರ್ಮಾಣವಾದರೇ ಅನುಕೂಲವಾಗುವ ಉದ್ದೇಶ ದಿಂದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಿದ್ದೇವೆ. ಬಿಡುಗಡೆಯಾಗಿರುವ ಅನುದಾನಕ್ಕೆ ಮತ್ತಷ್ಟು ಅನುದಾನ ಕೊಟ್ಟು ಸ್ಥಳ ಸಮತಟ್ಟು ಮಾಡಲು ತಿಳಿಸಿದ್ದೇನೆ. ಆದಷ್ಟು ಶೀಘ್ರವಾಗಿ ಕ್ರೀಡಾಂಗಣ ನಿರ್ಮಾಣಕ್ಕೆ ಬೇಕಾಗುವಂತಹ ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಸೂಚನೆ ನೀಡಿದ್ದೇನೆ ಎಂದರು.

ಇನ್ನೂ ತಾಲೂಕು ಕೇಂದ್ರದಲ್ಲಿ ವಾಲ್ಮೀಕಿ ಭವನ ನಿರ್ಮಾಣಕ್ಕೆ ಜಾಗ ಸಹ ಮಂಜೂರಾಗಿದೆ. ಭವನ ನಿರ್ಮಾಣಕ್ಕೆ 2 ಕೋಟಿ ಅನುದಾನಕ್ಕೆ ಪ್ರಸ್ತಾವನೆ ನೀಡಲಾಗಿತ್ತು. ಈ ಸಂಬಂಧ ಕಳೆದೆರಡು ದಿನಗಳ ಹಿಂದೆ ಬೆಳಗಾವಿ ಅಧಿವೇಶನದಲ್ಲಿ ಪ್ರಶ್ನೆ ಸಹ ಕೇಳಿದ್ದೆ. ಅದಕ್ಕೆ ಮುಖ್ಯಮಂತ್ರಿಗಳು ಉತ್ತರ ನೀಡಿದ್ದು, 2 ಕೋಟಿ ಅನುದಾನ ಒದಗಿಸಿದ್ದಾರೆ. ಅಧಿಕೃತ ಆದೇಶ ಸಹ ಶೀಘ್ರದಲ್ಲೇ ಹೊರಬೀಳಲಿದೆ. ಇದರ ಜೊತೆಗೆ ನನ್ನ ಕ್ಷೇತ್ರದ ಚೇಳೂರಿನಲ್ಲಿ ವಾಲ್ಮೀಕಿ ಭವನ ನಿರ್ಮಾಣಕ್ಕೆ ಮುಖ್ಯಮಂತ್ರಿಗಳು ಸಮ್ಮತಿ ಸೂಚಿಸಿದ್ದಾರೆ. ಗುಡಿಬಂಡೆ ಕೆರೆ ಕಟ್ಟೆಯು ಅಲ್ಲಲ್ಲಿ ಕುಸಿದಿರುವ ಬಗ್ಗೆ ದೂರು ಬಂದಿದ್ದು, ಒಂದು ವಾರದೊಳಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳನ್ನು ಕರೆಸಿ ಅಗತ್ಯ ಕ್ರಮ ತೆಗೆದುಕೊಳ್ಳುತ್ತೇನೆ ಎಂದರು. ತಹಸೀಲ್ದಾರ ಸಿಗ್ಬತ್ತುಲ್ಲಾ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಆದಿರೆಡ್ಡಿ, ಆರಕ್ಷಕ ವೃತ್ತ ನಿರೀಕ್ಷಕ ಮುನಿಕೃಷ್ಣ, ಸಬ್ ಇನ್ಸ್ ಪೆಕ್ಟರ್‌ಗಣೇಶ್, ಪಪಂ ಅಧ್ಯಕ್ಷ ವಿಕಾಸ್, ಮುಖಂಡರಾದ ನರೇಂದ್ರ, ಅಂಬರೀಶ್, ಮಹದೇವಪ್ಪ ಇದ್ದರು.

ಕ್ರೀಡಾಂಗಣ ನಿರ್ಮಾಣಕ್ಕೆ ಮಂಜೂರಾಗಿರುವ ಸ್ಥಳವನ್ನು ಶಾಸಕ ಎಸ್.ಎನ್. ಸುಬ್ಬಾರೆಡ್ಡಿ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮದನಹಳ್ಳಿ ಸೋಮಶೇಶ್ವರ ದೇಗುಲ ಪ್ರತಿಷ್ಠಾಪನೆ

ಕೋಲಾರ: ತಾಲೂಕಿನ ಮದನಹಳ್ಳಿಯ ಗ್ರಾಮದಲ್ಲಿ ನವಗ್ರಹ ಸಮೇತ ಪಾರ್ವತಿದೇವಿ, ಸೋಮಶೇಶ್ವರ ಸ್ವಾಮಿ, ಬಲಮುರಿ ಗಣಪತಿ ನೂತನ ದೇವಾಲಯದ ಸ್ಥಿರಬಿಂಬ, ಅಷ್ಠಬಂಧನಾ ಪ್ರತಿಷ್ಠಾಪನೆ, ವಿಮಾನಗೋಪುರ, ಮಹಾ ಕುಂಬಾಭಿಷೇಕ ಮತ್ತು ಊರಿನ ಹೆಬ್ಬಾಗಿಲು ಉದ್ಘಾಟನೆಯಲ್ಲಿ ಶಾಸಕ ಕೊತ್ತೂರು ಮಂಜುನಾಥ್, ಕೆ.ವೈ ನಂಜೇಗೌಡ ಸೇರಿದಂತೆ ಜನಪ್ರತಿನಿಧಿಗಳು ಗಣ್ಯರು ಭಾಗವಹಿಸಿ ದೇವರ ಕೃಪೆಗೆ ಪಾತ್ರರಾದರು.

ಡಿ.12 ರಿಂದ ದೈವೀ ಕಾರ್ಯಕ್ರಮ ನಡೆಯುತ್ತಿದ್ದು ಭಾನುವಾರ ಬೆಳಿಗ್ಗೆ 5 ರಿಂದ ರಾತ್ರಿ 9 ಗಂಟೆವರೆಗೆ ಧಾರ್ಮಿಕ ಕೈಂಕರ್ಯಗಳು ಜರುಗಿತು. ಸುಮಾರು 400 ವರ್ಷದ ಪುರಾತನ ದೇಗುಲವಾಗಿದ್ದು ಕಳೆದ 8 ವರ್ಷದ ಹಿಂದೆ ಕೆಡವಲಾಗಿತ್ತು. ಮದನಹಳ್ಳಿ, ಗುಟ್ಟಹಳ್ಳಿ, ಕಲ್ಲೂರು, ತಿಮ್ಮಾಪುರ, ಮೂರಾಂಡಹಳ್ಳಿ, ದೊಡ್ಡಗಾನಹಳ್ಳಿ, ಕೆಂದಟ್ಟಿ, ವರ್ತನಹಳ್ಳಿಯ ಹತ್ತಕ್ಕೂ ಹೆಚ್ಚು ಗ್ರಾಮಸ್ಥರ ಕುಲದೇವರು ಇದಾಗಿದೆ, ಭಾನುವಾರ ಬೆಳಗ್ಗೆ 10 ರಿಂದ ಸಂಜೆ 6 ಗಂಟೆವರೆಗೆ ಅನ್ನದಾನ ನಡೆದು. ಪ್ರಧಾನ ಅರ್ಚಕ ಕುಮಾರದೀಕ್ಷಿತ್, ಸುರೇಶ್ ದೀಕ್ಷಿತ್, ರಮೇಶ್ ದೀಕ್ಷಿತ್ ಸಾರಥ್ಯದಲ್ಲಿ ವಿಜೃಂಭಣೆಯಿಂದ ಹಬ್ಬದ ಮಾದರಿಯಲ್ಲಿ ಧಾರ್ಮಿಕ ಕಾರ್ಯಗಳು ನಡೆದವು. ಸಂಸದ ಎಂ.ಮಲ್ಲೇಶ್ ಬಾಬು, ಶಾಸಕ ಸಮೃದ್ಧಿ ಮಂಜುನಾಥ್, ಎಂಎಲ್ಸಿ ಇಂಚರ ಗೋವಿಂದರಾಜು, ಡಿಸಿಪಿ ಡಿ.ದೇವರಾಜ್, ಸಮಾಜ ಸೇವಕಿ ಕುರ್ಕಿ ರಾಜೇಶ್ವರಿ, ಕೋಮುಲ್ ನಿರ್ದೇಶಕರಾದ ಚಂಜಿಮಲೆ ರಮೇಶ್, ವೇಮಗಲ್ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಉರಟ ಅಗ್ರಹಾರ ಚೌಡರೆಡ್ಡಿ, ಕಾಂಗ್ರೆಸ್ ಗ್ರಾಮಾಂತರ ಬ್ಲಾಕ್ ಅಧ್ಯಕ್ಷ ಮೈಲಾಂಡಹಳ್ಳಿ ಮುರಳಿ ಇದ್ದರು. ಕಾರ್ಯಕ್ರಮದ ಉಸ್ತುವಾರಿಯನ್ನು ಎಂಎಲ್ಸಿ ಎಂ.ಎಲ್ ಅನಿಲ್ ಕುಮಾರ್ ವಹಿಸಿದ್ದರು.

ಕೋಲಾರದ ಮದನಹಳ್ಳಿ ಸೋಮಶೇಶ್ವರ ಸ್ವಾಮಿ ಪ್ರತಿಷ್ಠಾಪನೆಯಲ್ಲಿ ಶಾಸಕ ಕೊತ್ತೂರು ಮಂಜುನಾಥ್, ಎಂಎಲ್ಸಿ ಅನಿಲ್ ಕುಮಾರ್ ಭಾಗವಹಿಸಿದ್ದರು.

ಸುಪ್ರೀಂಕೋರ್ಟ್ ಆದೇಶದ ಹಿನ್ನೆಲೆ ಕಡ್ಡಾಯ ನಿಯಮ | ಹಾದಿ ಬೀದಿಯಲ್ಲಿ ತಲೆಯೆತ್ತಿದ ಹೆಲ್ಮೆಟ್ ಮಾರಾಟ

ಚಿಕ್ಕಬಳ್ಳಾಪುರದಲ್ಲಿ ಹೆಲ್ಮೆಟ್ ಕಡ್ಡಾಯ ಜಾರಿ: ದಂಡ ವಸೂಲಿ ಜೋರು

ಮುನಿರಾಜು ಎಂ ಅರಿಕೆರೆ

ಚಿಕ್ಕಬಳ್ಳಾಪುರ: ಡಿ.12ರಿಂದ ಜಿಲ್ಲೆಯಲ್ಲಿ ಹೆಲ್ಮೆಟ್ ಕಡ್ಡಾಯ ಜಾರಿ ಮಾಡಿರುವ ಬೆನ್ನಲ್ಲೇ ಸಂಚಾರಿ ಪೊಲೀಸರು ದಂಡಾಸ್ತ್ರ ಪ್ರಯೋಗಕ್ಕೆ ಯಮವೇಗದಲ್ಲಿ ಮುಂದಾಗಿದ್ದಾರೆ.ಇದನ್ನೇ ಬಂಡವಾಳ ಮಾಡಿಕೊಂಡಿರುವ ಅನ್ಯ ರಾಜ್ಯಗಳ ಹೆಲ್ಮೆಟ್ ವ್ಯಾಪಾರಿಗಳು ಹಾದಿ ಬೀದಿಯಲ್ಲಿ ನಾನಾ ನಮೂನೆಯ ಹೆಲ್ಮೆಟ್ಗಳನ್ನು ಕಡಿಮೆ ಬೆಲೆಗೆ ಮಾರಾಟಕ್ಕಿಳಿದಿರುವುದು ಜನತೆಗೆ ಸಂತೋಷದ ಜತೆಗೆ ಆತಂಕವನ್ನು ಉಂಟು ಮಾಡುತ್ತಿದೆ.

ಹೌದು ಜಿಲ್ಲಾಡಳಿತ, ಜಿಲ್ಲಾ ಪೊಲೀಸ್ ಇಲಾಖೆ, ಜಿಲ್ಲಾ ನ್ಯಾಯಾಲಯ ಮತ್ತು ಕಾನೂನು ಸೇವಾ ಆಯೋಗದ ಜಂಟಿ ಸಹಯೋಗದಲ್ಲಿ ನಾಗರೀಕರ ಸುರಕ್ಷತೆ ದೃಷ್ಟಿಯಿಂದ ಜಿಲ್ಲಾಡಳಿತ ಹೆಲ್ಮೆಟ್ ಕಡ್ಡಾಯ ನಿಯಮ ಜಾರಿ ಮಾಡಿದೆ.

ಇದೇ ಅವಕಾಶಕ್ಕಾಗಿ ಕಾದಂತಿದ್ದ ಪೊಲೀಸ್ ಇಲಾಖೆ ದಂಡಾಸ್ತ್ರದ ಹೆಸರಲ್ಲಿ ಭರ್ಜರಿಯಾಗಿಯೇ ಬೇಟೆಗೆ ಇಳಿದಿದೆ. ಶುಕ್ರವಾರ ಒಂದೇ ದಿನ ಜಿಲ್ಲೆಯಲ್ಲಿ 1250ಕ್ಕೂ ಹೆಚ್ಚು ಮಂದಿಯ ವಿರುದ್ಧ ಸಂಚಾರಿ ನಿಯಮಗಳ ಉಲ್ಲಂಘನೆ ಪ್ರಕರಣ ದಾಖಲಿಸಿದ್ದು ಸರಿ ಸುಮಾರು 6.25 ಲಕ್ಷದಷ್ಟು ದಂಡ ವಸೂಲಿ ಮಾಡಿದ್ದಾರೆ.

ಜಿಲ್ಲಾ ತಾಲೂಕು ಕೇಂದ್ರಗಳ ಪ್ರವೇಶಕ್ಕೆ ಹೆಲ್ಮೆಟ್ ಕಡ್ಡಾಯವಂತೆ, ಇದಿಲ್ಲದಿದ್ದರೆ ದಂಡ ಹಾಕುತ್ತಾರೆ ಎಂಬ ಸುದ್ದಿ ಗ್ರಾಮೀಣರಿಗೆ ಕಾಡ್ಗಿಚ್ಚಿನಂತೆ ಹರಡಿದೆ. ಪರಿಣಾಮ ಕೆಲವರು ನಗರ, ಪಟ್ಟಣ, ಜಿಲ್ಲಾ ಕೇಂದ್ರಗಳ ಪ್ರವೇಶಕ್ಕೆ ಅಡ್ಡದಾರಿಗಳನ್ನು ಹಿಡಿಯುತ್ತಿರುವುದು ಕಂಡು ಬರುತ್ತಿದೆ.

ಮತ್ತೂ ಕೆಲವರು ದಂಡಾಸ್ತ್ರದಿಂದ ಪಾರಾಗಲು ಮನೆಯಲ್ಲಿದ್ದ ಯಾವ್ಯಾವುದೋ ಹಳೆಯ ಹೆಲ್ಮೆಟ್ಗಳನ್ನು ಧರಿಸಿ ಬರುತ್ತಿದ್ದರೆ, ಮಗದೊಂದಷ್ಟು ಮಂದಿ ಕಳಪೆ ಗುಣಮಟ್ಟದ ಹೆಲ್ಮೆಟ್ಗಳನ್ನು ಕೊಳ್ಳಲು ಮುಂದಾಗಿರುವುದು ಆದೇಶದ ಸಾರ್ಥಕತೆಯನ್ನು ನಿರರ್ಥಕವಾಗಿಸುವಂತಿದೆ.

ಬಿಹಾರ, ದೆಹಲಿ ವ್ಯಾಪಾರಿಗಳು: ಜಿಲ್ಲಾ ಕೇಂದ್ರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳಲ್ಲಿ ಮೈಸೂರು, ದೆಹಲಿ, ರಾಜಸ್ಥಾನ, ಬಿಹಾರ ಮೂಲದ ವ್ಯಾಪಾರಿಗಳು ಹೆಲ್ಮೆಟ್ಗಳನ್ನು ಇಟ್ಟುಕೊಂಡು ವ್ಯಾಪಾರಕ್ಕಿಳಿದಿದ್ದಾರೆ. ಆಕರ್ಷಕವಾದ ಬಣ್ಣಗಳ ಹೆಲ್ಮೆಟ್ಗಳನ್ನು 300 ರಿಂದ 500 ರೂಪಾಯಿಗೆ ಮಾರಾಟ ಮಾಡುತ್ತಿದ್ದಾರೆ. ಇವುಗಳು ನೋಡಲು ಸುಂದರ ಬಣ್ಣದಿಂದ ಕೂಡಿ, ಹಿಂಬದಿಯಲ್ಲಿ ಐಎಸ್‌ಐ ಮಾರ್ಕಿನ ಚಿತ್ರವಿದ್ದರೂ ಗುಣಮಟ್ಟದಲ್ಲಿ ಕಡಿಮೆ ಎನಿಸುತ್ತದೆ. ದ್ವಿಚಕ್ರವಾಹನ ಸವಾರರು ಇಂತಹ ಕಡಿಮೆ ಬೆಲೆಯ ಹೆಲ್ಮೆಟ್ಗಳನ್ನು ಧರಿಸಲು ಮನಸ್ಸು ಮಾಡಿರುವುದು ಸರಿಯಲ್ಲ. ಒಮ್ಮೆ ಗುಣಮಟ್ಟದ ಜೀವವುಳಿಸುವ ಗಟ್ಟಿಮುಟ್ಟಾದವುಗಳನ್ನು ಕೊಳ್ಳಲು ಮುಂದಾಗಲಿ ಎನ್ನುವುದೇ ಹೆಸರು ಹೇಳಲು ಇಚ್ಚಿಸದ ಪೊಲೀಸ್ ಇಲಾಖೆ ಅಧಿಕಾರಿಗಳ ಮಾತಾಗಿದೆ.ಉದ್ದೇಶ ಅರಿಯಬೇಕು.ಜಿಲ್ಲೆಯಲ್ಲಿ ನಡೆದಿರುವ ರಸ್ತೆ ಅಪಘಾತಗಳಲ್ಲಿ ಹೆಚ್ಚಿನ ಮಂದಿ ಸಾವನ್ನಪ್ಪಿರುವುದು ಹೆಲ್ಮೆಟ್ ಧರಿಸಿಲ್ಲ ಎಂಬ ಾರಣಕ್ಕೆ ಆಗಿದೆ. ಇವರೆಲ್ಲಾ ಯುವಕರೇ ಎಂಬುದು ನೋವಿನ ಸಂಗತಿಯಾಗಿದೆ. ಅಲ್ಲದೆ ತಲೆಗೆ ಪೆಟ್ಟಾದ ಕಾರಣ ಸಾವು ಸಂಭವಿಸಿದೆ ಎಂಬುದನ್ನು ಮನಗಂಡ ಜಿಲ್ಲಾ ಪೊಲೀಸ್ ಇಲಾಖೆ, ಜಿಲ್ಲಾ ನ್ಯಾಯಾಲಯ ಮತ್ತು ಕಾನೂನು ಸೇವಾ ಆಯೋಗ ಸುಪ್ರಿಂ ಕೋರ್ಟಿನ ಆದೇಶದ ಹಿನ್ನೆಯಲ್ಲಿ ಹೆಲ್ಮೆಟ್ ಕಡ್ಡಾಯ ನಿಯಮ ಜಾರಿ ಮಾಡಿದೆ. ದಂಡದಿಂದ ಪಾರಾಗುವ ಏಕೈಕ ಉದ್ದೇಶದಿಂದ ಯಾವ್ಯಾವುದೋ ಗುಣಮಟ್ಟವಿಲ್ಲದ ಹೆಲ್ಮೆಟ್ ಧರಿಸಲು ಮುಂದಾಗುತ್ತಿದ್ದಾರೆ.ಇದು ಸರಿಯಲ್ಲ ಎಂಬುದನ್ನು ಜನತೆ ಅರ್ಥ ಮಾಡಿಕೊ ಳ್ಳಬೇಕಿದೆ.

ಹಾದಿ ಬೀದಿಯಲ್ಲಿ ಹೆಲ್ಮೆಟ್ ಮಾರಾಟಕ್ಕೆ ಇಳಿದಿರುವ ಹೊರರಾಜ್ಯದ ವ್ಯಾಪಾರಿಗಳ ಚಿತ್ರ

ಹೆಲ್ಮೆಟ್ ನಿಂದ 50 ರು.ಲಾಭ

ದೆಹಲಿಯಿಂದ ಹೆಲ್ಮೆಟ್ ಖರೀದಿ ಮಾಡಿ ಇಲ್ಲಿ ಮಾರಾಟ ಮಾಡಲು ಬಿಹಾರದಿಂದ ಬರಲಾಗಿದೆ. ಶನಿವಾರ ದಿನವಿಡೀ ಮಾರಿದರೂ 9 ಹೆಲ್ಮೆಟ್ ಮಾರಾಟವಾಗಿವೆ. ಒಂದು ಹೆಲ್ಮೆಟ್ ಮಾರಿದರೆ 50 ರೂಪಾಯಿ ದೊರೆಯಲಿದೆ. ನಾವು ಉಳಿದುಕೊಳ್ಳಲು, ಊಟ ಮಾಡಲು ಕೂಡ ಇದರಿಂದ ಆಗುವುದಿಲ್ಲ. ಕಾನೂನು ಜಾರಿಯಾಗಿದ್ದರೂ ಜನತೆ ಖರೀದಿಗೆ ಆಸಕ್ತಿ ತೋರುತ್ತಿಲ್ಲ ಎಂದು ಬಿಹಾರ ಮೂಲದ ಧೀರಜ್ ಕುಮಾರ್‌ಹೇಳುತ್ತಾರೆ.

ಭಾವಪೂರ್ಣ ಶ್ರದ್ಧಾಂಜಲಿ

ನಾಡಿನ ಹಿರಿಯ ಚೇತನ , ದಾವಣಗೆರೆ ದಕ್ಷಿಣ ವಿಧಾನ ಸಭಾ ಕ್ಷೇತ್ರದ ಜನಪ್ರಿಯ ಶಾಸಕರು,
ಸತತ 54 ವರ್ಷಗಳ ಕಾಲ ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಗಳು,
ಅದಮ್ಯ ಚೇತನರು, ಸರ್ವ ಜನಾನುರಾಗಿಗಳು, ಧರ್ಮ ಪ್ರವರ್ತಕರಾದ,

ಡಾ. ಶಾಮನೂರು ಶಿವಶಂಕರಪ್ಪನವರು

ನಿಧನರಾಗಿದ್ದು ಅವರಿಗೆ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ

ಬಾಪೂಜಿ ವಿದ್ಯಾ ಸಂಸ್ಥೆ (ರಿ.)
ದಾವಣಗೆರೆ.

ಸಿಎಂ ಕಗ್ಗಂಟು ಯಥಾಸ್ಥಿತಿ

ಮೊದಲಪುಟದಿಂದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಮ್ಮ ಬಲಪ್ರದರ್ಶನಕ್ಕೆ ಹಮ್ಮಿಕೊಂಡಿದ್ದ ಉಪಾ ಹಾರ ಸಭೆಯಲ್ಲಿ ಸಚಿವ ಆರ್.ಬಿ.ತಿಮ್ಮಾಪುರ, ತನ್ವೀರ್ ಸೇಠ್, ಮಂಕಾಳ ವೈದ್ಯ, ಆನೇಕಲ್ ಶಿವಣ್ಣ, ಮಂಜುನಾಥ್ ಭಂ ಡಾರಿ, ಪ್ರದೀಪ್ ಈಶ್ವರ್, ಯು.ಬಿ. ವೆಂಕಟೇಶ್ ಸೇರಿದಂತೆ ಹಲವರು ಭಾಗವಹಿ ಸಿದ್ದರು. ಈ ಸಭೆಯ ಮೂಲಕ ಬಲ ಪ್ರದರ್ಶನ ಮಾಡುವ ಪ್ರಯತ್ನವನ್ನು ನಡೆಸಿದ್ದಾರೆ ಎನ್ನಲಾಗಿದೆ.

ಅಧಿವೇಶನದಲ್ಲೂ ನಾಯಕತ್ವಕ್ಕೆ ಚಿಂತೆ?: ಚಳಿಗಾಲದ ಅಧಿವೇಶನ ಸೋಮವಾರದಿಂದ ಪುನರಾರಂಭವಾಗಲಿದ್ದು, ನಾಯಕತ್ವ ಬದಲಾವಣೆ ವಿಷಯದಲ್ಲಿ ಯತೀಂದ್ರ ಸಿದ್ದರಾಮಯ್ಯ ಅವರ ಹೇಳಿಕೆಯೇ ಮತ್ತೆ ಕೇಂದ್ರಬಿಂದುವಾಗುವ ಸಾಧ್ಯತೆಯಿದೆ. ದೆಹಲಿಯಲ್ಲಿ ನಾಯಕರನ್ನು ಭೇಟಿಯಾಗಿ, ಸ್ಪಷ್ಟನೆ ಪಡೆದರೂ ಪ್ರತಿಪಕ್ಷ ನಾಯಕರಿಗೆ ನಾಯಕತ್ವ ಬದಲಾವಣೆಗೆ ಪ್ರಮುಖ ಆಹಾರವಾಗುವ ಸಾಧ್ಯತೆಯಿದೆ. ಬಿಜೆಪಿ ನಾಯಕರು ನಾಯಕತ್ವ ಬದಲಾವಣೆ ವಿಷಯವನ್ನು ಅಸ್ತ್ರವನ್ನಾಗಿ ಕೊಂಡರೆ, ಆಡಳಿತ ಪಕ್ಷದವರು ಮತಚೋರಿ ವಿಷಯವನ್ನು ಮುನ್ನಲೆಗೆ ತಂದು ಬಿಜೆಪಿಯನ್ನು ಇಕ್ಕಟ್ಟಿಗೆ ಸಿಲುಕಿಸಲು ಪ್ರಯತ್ನಿಸಬಹುದು. ಇದರೊಂದಿಗೆ ದ್ವೇಷ ಭಾಷಣ, ಜಾನುವಾರು ವಧೆ ಪ್ರತಿಬಂಧಕ ಕಾಯಿದೆ, ಒಳ ಮೀಸಲು ಸೇರಿದಂತೆ ವಿವಿಧ ವಿಧೇಯಕವನ್ನು ಮಂಡಿಸಿ, ಅನುಮೋದನೆ ಪಡೆಯಲಿದೆ. ಈ ಮೂರು ವಿಧೇಯಕಕ್ಕೆ ಬಿಜೆಪಿ ವಿರೋಧಿಸಿದರೆ ಗದ್ದಲದ ನಡುವೆಯೇ ಒಪ್ಪಿಗೆ ಪಡೆದು ಅಧಿವೇಶನಕ್ಕೆ ತೆರೆಯುವ ಸಾಧ್ಯತೆಯಿದೆ.

ಸಂಪುಟ ಪುನಾರಚನೆಗೆ ಬೇಡಿಕೆ?: ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಭಾರಿ ಚರ್ಚೆ ನಡೆಯುತ್ತಿರುವ ವೇಳೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವ ಸಂಪುಟ ಪುನಾರಚನೆಗೆ ಸಂಬಂಧಿಸಿದಂತೆ ಒತ್ತಡ ಹೇರುವ ಸಾಧ್ಯತೆಯಿದೆ. ರಾಜ್ಯದಲ್ಲಿ ಹಲವು ಹಿರಿಯ ನಾಯಕರು ಸಚಿವ ಸಂಪುಟ ಪುನಾರಚನೆಗೆ ಕೇಳಿಬರುತ್ತಿದೆ. ಆದ್ದರಿಂದ ಈಗ ಸಚಿವ ಸಂಪುಟ ಪುನಾರಚನೆ ಮಾಡಿದರೆ ಮುಂದಿನ ಸ್ಥಳೀಯ ಸಂಸ್ಥೆ ಚುನಾವಣೆಗೆ ಸಹಾಯವಾಗಲಿದೆ. ಇದರೊಂದಿಗೆ ರಾಜ್ಯದಲ್ಲಿ ನಡೆಯುತ್ತಿರುವ ನಾಯಕತ್ವ ಬದಲಾವಣೆ ಗೊಂದಲಕ್ಕೂ ಪರಿಹಾರ ಸಿಗುವ ಲೆಕ್ಕಾಚಾರದಲ್ಲಿದ್ದಾರೆ. ಆದರೆ ರಾಷ್ಟ್ರೀಯ ನಾಯಕರು, ಇದಕ್ಕೆ ಅವಕಾಶ ನೀಡುವರೇ ಇಲ್ಲವೇ ಎನ್ನುವ ಗೊಂದಲ ಮುಂದುವರಿದಿದೆ.

ಸೋನಿಯಾ ಗಾಂಧಿ ಭೇಟಿಯಾದ ಡಿಕೆ: ಈ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿಗೆ ತೆರಳಿದರೂ, ಮಧ್ಯಾಹ್ನದ ಊಟಕ್ಕೆ ಸೋನಿಯಾ ಗಾಂಧಿ ಅವರ ಕರೆದಿದ್ದ ಸಭೆಗೆ ಎಲ್ಲರನ್ನೂ ಆಹ್ವಾನಿಸಿದರೂ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಸಭೆಗೆ ಗೈರಾಗಿದ್ದರಿಂದ ಯಾವುದೇ ಚರ್ಚೆಗಳು ನಡೆದಿಲ್ಲ. ಆದರೆ ಈ ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಪ್ರಧಾನ ಕಾರ್ಯದರ್ಶಿ ಗಳಾದ ಪ್ರಿಯಾಂಕಾ ಗಾಂಧಿ, ಕೆ.ಸಿ. ವೇಣು ಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲ ಅವರು ಭಾಗವಹಿಸಿದ್ದರು. ಈ ವೇಳೆ ಯಾವುದೇ ಚರ್ಚೆ ಅವಕಾಶ ನಡೆಯದಿದ್ದರೂ, ಪರೋಕ್ಷ ವಾಗಿ ತಮ್ಮ ಬಲಪ್ರದರ್ಶನವನ್ನು ಡಿ.ಕೆ.ಶಿವಕುಮಾರ್ ಅವರು ಮಾಡಿದ್ದಾರೆ ಎಂದು ತಿಳಿದುಬಂದಿದೆ.

ಜನಪ್ರತಿನಿಧಿಗಳ ಮೌನಕ್ಕೆ ಪ್ರಯಾಣಿಕರ ಹಿಡಿಶಾಪ | ವಿಧಾನಸಭೆ–ಸಂಸತ್ತಿನಲ್ಲಿ ಧ್ವನಿ ಎತ್ತಲು ಆಗ್ರಹ

ಕೇಂದ್ರ-ರಾಜ್ಯ ತಿಕ್ಕಾಟ, ಕಲಬುರಗಿಯಿಂದ ಹಾರದ ವಿಮಾನ

ದೇವೇಂದ್ರ ಜಾಡಿ ಕಲಬುರಗಿ

ಕಲ್ಯಾಣ ಕರ್ನಾಟಕದ ಪ್ರಾದೇಶಿಕ ಕೇಂದ್ರವಾದ ಕಲಬುರಗಿ ವಿಮಾನ ನಿಲ್ದಾಣವು ಕೇಂದ್ರ ಮತ್ತು ರಾಜ್ಯ ಸರಕಾರಗಳ ನಡುವಿನ ಗುದ್ದಾಟಕ್ಕೆ ಸಿಲುಕಿ ಸಂಪೂರ್ಣ ಬಡಪಾಯಿಯಾಗಿದೆ. ರಾಜ್ಯದಲ್ಲೇ ಎರಡನೇ ಅತಿದೊಡ್ಡ ರನ್‌ವೇ ಹೊಂದಿರುವ ಹೆಗ್ಗಳಿಕೆ ಹೊಂದಿರುವ ಈ ವಿಮಾನ ನಿಲ್ದಾಣದಿಂದ ಕಲಬುರಗಿ – ಬೆಂಗಳೂರು ನಡುವಿನ ವಿಮಾನ ಸೇವೆ ಅಕ್ಟೋಬರ್ 15 ರಿಂದ ಸ್ಥಗಿತಗೊಂಡಿದ್ದರೂ ಅದನ್ನು ಪುನರಾರಂಭಿ ಸಲು ಯಾವುದೇ ಜನಪ್ರತಿನಿಧಿಗಳು ಪ್ರಾಮಾಣಿಕ ಪ್ರಯತ್ನ ಮಾಡದಿರುವುದು ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ.

ತುರ್ತು ಪ್ರಯಾಣಕ್ಕೆ ಅನುಕೂಲಕರವಾಗಿದ್ದ ವಿಮಾನ ಸೇವೆ ಸ್ಥಗಿತಗೊಂಡು ಎರಡು ತಿಂಗಳಾದರೂ ಜನಪ್ರತಿನಿಧಿಗಳ ದಿವ್ಯ ಮೌನವು ಈ ಭಾಗದ ತೀವ್ರ ಕಡೆಗಣನೆಗೆ ಸಾಕ್ಷಿಯಾಗಿದೆ ಎಂದು ವಿಮಾನ ಪ್ರಯಾಣಿಕರು ಹಿಡಿಶಾಪ ಹಾಕುತ್ತಿದ್ದಾರೆ. ನೂರಾರು ಕೋಟಿ ರುಪಾಯಿ ವೆಚ್ಚದಲ್ಲಿ ನಿರ್ಮಿಸಿದ ವಿಮಾನ ನಿಲ್ದಾಣದಲ್ಲಿ ನೀರವತೆ ಆವರಿಸಿದೆ. ಅಭಿವೃದ್ಧಿಯ ನಿರೀಕ್ಷೆಯಲ್ಲಿರುವ ಜನರಿಗೆ ತೀವ್ರ ನಿರಾಸೆ ಉಂಟು ಮಾಡಿದೆ.

ಪ್ರಾದೇಶಿಕ ಅಸಮಾನತೆ ಹೋಗಲಾಡಿಸಲು ಕಲ್ಯಾಣ ಕರ್ನಾಟಕ ಭಾಗಕ್ಕೆ 371 (ಜೆ) ಅಡಿಯಲ್ಲಿ ವಿವಿಧ ಸೌಲಭ್ಯಗಳನ್ನು ನೀಡಿ ಅಭಿವೃದ್ಧಿಗೆ ಆದ್ಯತೆ ಕೊಡಲಾಗುತ್ತಿದೆ. ಅಭಿವೃದ್ಧಿಗೆ ಪೂರಕವಾದ ವಿಮಾನ ಸೇವೆಯು ಸ್ಥಗಿತಗೊಂಡು ಎರಡು ತಿಂಗಳಾ ದರೂ ಸರಕಾರದ

ಕಲಬುರಗಿ ವಿಮಾನ ನಿಲ್ದಾಣ.

ಮಟ್ಟದಲ್ಲಿ ಚರ್ಚೆ ಆಗದಿರುವುದು ಈ ಭಾಗದ ಜನಪ್ರತಿನಿಧಿಗಳ ಜಾಣಮೌನವನ್ನು ಅಣುಕಿಸುವಂತಾಗಿದೆ. ಕೇಂದ್ರ ನಾಗರಿಕ ವಿಮಾನಯಾನ ಸಚಿವರು ಹಾಗೂ ರಾಜ್ಯ ಸರಕಾರದ ಸಂಬಂಧಪಟ್ಟ ಸಚಿವರು ಈ ಬಗ್ಗೆ ಪ್ರತಿಕ್ರಿಯೆ ನೀಡುತ್ತಿಲ್ಲ. ಕೋಟಿ ಗಟ್ಟಲೇ ವೆಚ್ಚದಲ್ಲಿ ನಿರ್ಮಾಣ ಆಗಿರುವ ವಿಮಾನ ನಿಲ್ದಾಣದ ರನ್‌ವೇನಲ್ಲಿ ವಿಮಾನಗಳೇ ಓಡಾಡದಿರು ವುದು ವಿಪರ್ಯಾಸ. ಕೇಂದ್ರ ಸರಕಾರದ ಉಡಾನ್ ಯೋಜನೆಯಡಿ ಕಲಬುರಗಿ ವಿಮಾನ ನಿಲ್ದಾಣವನ್ನು ಸೇರ್ಪಡೆ ಗೊಳಿಸಿಲ್ಲ ಎಂಬುದು ರಾಜ್ಯ ಸರಕಾರದ ಆರೋಪ. ಇತ್ತ ಬೆಂಗಳೂರು-ಕಲಬುರಗಿ ನಡುವೆ ಸಂಚಾರ ನಡೆಸುತ್ತಿದ್ದ ವಿಮಾನ ಸಂಸ್ಥೆಯು ದಿಢೀರ್ ಆಗಿ ತನ್ನ ವಿಮಾನ ಸೇವೆ ರದ್ದು ಮಾಡಿ ಬೇರೆ ಮಾರ್ಗದಲ್ಲಿ ಸಂಚಾರ ನಡೆಸುತ್ತಿದೆ. ಆದರೆ ಕೇಂದ್ರ ಮತ್ತು ರಾಜ್ಯ ಸರಕಾರದ ಜನಪ್ರತಿನಿಧಿಗಳು, ಸಂಬಂಧಪಟ್ಟ ಸಚಿವರೂ ಯಾವುದೇ ಕ್ರಮ ಕೈಗೊಳ್ಳದಿರುವುದು ಬೇಸರ ತರಿಸಿದೆ.

ಪ್ರವಾಸೋದ್ಯಮಕ್ಕೆ ಪೆಟ್ಟು: ವಿಮಾನ ಸೇವೆ ಸ್ಥಗಿತ ಗೊಂಡ ಪರಿಣಾಮವಾಗಿ ವಿಭಾಗದ ಪ್ರವಾಸೋ ದ್ಯಮ, ಶಿಕ್ಷಣ, ಕೈಗಾರಿಕೆ, ವೈದ್ಯಕೀಯ ಉದ್ಯೋಗ ಸೇರಿದಂತೆ ಹಲವು ಕ್ಷೇತ್ರಗಳ ಮೇಲೆ ತೀವ್ರ ಪರಿಣಾಮ ಉಂಟಾಗಿದೆ.

ಹೀಗಾಗಿ, ಕಲಬುರಗಿ ಯಿಂದ ಬೆಂಗ ಳೂರು, ಮಂಗಳೂರು, ದೆಹಲಿ, ಮುಂಬೈ, ತಿರುಪತಿ ಮಧ್ಯೆ ವಿಮಾನ ಸೇವೆ ಆರಂಭಿಸ ಬೇಕು. ಅಲ್ಲದೇ, ಕಲ್ಯಾಣ ಕರ್ನಾಟಕ ಭಾಗದ ಪ್ರಯಾಣಿಕರನ್ನು ಕಡೆಗಣಿಸಿ ಮೋಸ ಮಾಡಿದ ವಿಮಾನ ಸಂಸ್ಥೆಯನ್ನು ಹೊರತುಪಡಿಸಿ, ಇತರ ಖಾಸಗಿ ಸಂಸ್ಥೆಗಳ ಮೂಲಕ ಕೂಡಲೇ ಬೆಂಗಳೂರು, ಮಂಗಳೂರು, ದೆಹಲಿ, ಮುಂಬೈ ಮತ್ತು ತಿರುಪತಿ ಮಧ್ಯೆ ವಿಮಾನ ಸೇವೆ ಆರಂಭಿಸಲು ಕೇಂದ್ರ ಸರಕಾರ ನಿರ್ದೇಶನ ನೀಡಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಕಲಬುರಗಿ ಸೇರಿ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳು ಜಿಐ ಟ್ಯಾಗ್ ಹೊಂದಿದ ತೊಗರಿಯ ಕಣಜವಾಗಿದ್ದು, ಈ ಭಾಗದಿಂದ ದೇಶ, ವಿದೇಶಗಳಿಗೆ ತೊಗರಿಬೇಳೆ ಸಾಗಿಸಲಾಗುತ್ತಿದೆ. ಅದಕ್ಕಾಗಿ ಕಲಬರಗಿ ವಿಮಾನ ನಿಲ್ದಾಣವನ್ನು ಕಾರ್ಗೋ ಸೇವೆಗೂ ಬಳಸುವ ಸಾಧ್ಯತೆ ಇದೆ. ಕಲ್ಯಾಣ ಕರ್ನಾಟಕ ಭಾಗದ ಇತರ ಕೃಷಿ ವಲಯದ ಉತ್ಪನ್ನಗಳನ್ನು ಸಾಗಾಟ ಮಾಡಲು ವಿಮಾನ ಸೇವೆ ಅನುಕೂಲಕರವಾಗಿದೆ.

-ಡಾ.ಸದಾನಂದ ಪೆರ್ಲ,
ಮಾಜಿ ಅಧ್ಯಕ್ಷ, ದಕ್ಷಿಣ ಕನ್ನಡ ಸಂಘ

ನವಿ ಮುಂಬಯಿ ನೂತನ ವಿಮಾನ ನಿಲ್ದಾಣ ಕಾರ್ಯಾರಂಭ ದಿಂದಾಗಿ ಕಲಬುರಗಿ ನವಿ ಮುಂಬಯಿ ನಡುವೆ ವಿಮಾನ ಸಂಚಾರಕ್ಕೆ ಈಗ ಅವಕಾಶವಿದ್ದು, ಈಗಾಗಲೇ ರಾಜಮಂಡ್ರಿ ಮುಂತಾದ ಸಣ್ಣ ನಗರಗಳಿಂದ ನವಿ ಮುಂಬಯಿಗೆ ವಿಮಾನ ಸಂಪರ್ಕ ಕಲ್ಪಿಸಲಾಗಿದೆ. ಮುಂಬಯಿ ನಗರಕ್ಕೆ ಕಲಬುರಗಿ ನಗರಕ್ಕೆ ನಿತ್ಯ ನೂರಾರು ಮಂದಿ ತೆರಳುತ್ತಾರೆ. ಇಲ್ಲಿಗೂ ವಿಮಾನ ಸೇವೆ ಒದಗಿಸಿದರೆ ಅನುಕೂಲ ಆಗಲಿದೆ.

-ನರಸಿಂಹ ಮೆಂಡನ್,
ವಿಮಾನ ನಿಲ್ದಾಣ ಪ್ರಾಧಿಕಾರದ ಮಾಜಿ ಸದಸ್ಯರು

ಜನಪ್ರತಿನಿಧಿಗಳು ಒಗ್ಗಟ್ಟಾಗಿ ಪ್ರಶ್ನಿಸಲಿ

ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶನ ನಡೆಯುತ್ತಿದ್ದು, ಕಲ್ಯಾಣ ಕರ್ನಾಟಕ ಭಾಗದ ಶಾಸಕರು ಒಕ್ಕೊರಲಿ ನಿಂದ ರಾಜ್ಯ ಸರಕಾರದ ಮೂಲಭೂತ ಸೌಲಭ್ಯ ಖಾತೆಯ ಸಚಿವರ ಗಮನ ಸೆಳೆದು, ಕೇಂದ್ರವನ್ನು ಒತ್ತಾಯಿ ಸುವ ಕೆಲಸ ಮಾಡಲಿ. ಹಾಗೆ ಸಂಸತ್ತಿನ ಚಳಿಗಾಲ ಅಧಿವೇಶನ ನಡೆಯುತ್ತಿರುವುದರಿಂದ ಕಲ್ಯಾಣ ಕರ್ನಾಟಕ ಭಾಗದ ಎಲ್ಲ ಲೋಕಸಭಾ ಸದಸ್ಯರು ಒಗ್ಗಟ್ಟಾಗಿ ಕೂಡಲೇ ಪ್ರಶ್ನೆ ಎತ್ತಿ ಕಲ್ಯಾಣ ಕರ್ನಾಟಕ ಭಾಗಕ್ಕೆ ಆಗುವ ಅನ್ಯಾಯ ಬಗೆಹರಿಸಬೇಕು ಎಂಬುದು ಈ ಭಾಗದ ಜನರ ಆಶಯವಾಗಿದೆ.

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ (ಒಂದು ಷೆಡ್ಯೂಲ್ ವಾಣಿಜ್ಯ ಬ್ಯಾಂಕ್)

ಪ್ರಧಾನ ಕಛೇರಿ: ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ದ ಫೇರ್‌ವೇ, ನೆಲ ಮತ್ತು ಮೊದಲ ಮಹಡಿ, ಸರ್ವೆ ನಂ. 10/1, 11/2 & 12/2ಬಿ ಆಫ್ ದೊಮ್ಮ್ಲೂರು, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ಹತ್ತಿರ, ಚಳ್ಳಘಟ್ಟ, ಬೆಂಗಳೂರು–560071

ಚಿನ್ನಾಭರಣಗಳ ಹರಾಜಿಗಾಗಿ ಸಾರ್ವಜನಿಕ ಸೂಚನೆ

ಈ ಕೆಳಗೆ ಹೆಸರಿಸಿರುವ ಸಾಲಗಾರರು ಹಲವಾರು ವಿನಂತಿಯ ನಂತರವೂ ಸಾಲ ಮರು ಪಾವತಿಸಲು ವಿಫಲರಾಗಿ, ಚಿನ್ನಾಭರಣ ಪಡೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಕೆಳಗೆ ಹೆಸರಿಸಿರುವ ಖಾತೆಗಳ ಸಾಲಗಾರರ ಚಿನ್ನಾಭರಣಗಳನ್ನು ಸಾರ್ವಜನಿಕ/ಆನ್‌ಲೈನ್/ಖಾಸಗಿ ಹರಾಜು ಮೂಲಕ ನಮ್ಮ ಶಾಖೆಯಲ್ಲಿ ಆನ್‌ಲೈನ್ ಆಕ್ಷನ್ ಟೈಗರ್ ಮೂಲಕ **22.12.2025 ರಂದು ಬೆಳಿಗ್ಗೆ 10.30ಕ್ಕೆ** ಮಾರಾಟ ಮಾಡಲಾಗುವುದು. ಭಾಗವಹಿಸಲು ಆಸಕ್ತರಾಗಿರುವವರು ಶಾಖೆಯನ್ನು ಸಂಪರ್ಕಿಸಬಹುದಾಗಿದೆ. ಯಾವುದೇ ಕಾರಣ ನೀಡದೆ, ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ. ದಯವಿಟ್ಟು ಗಮನಿಸಬೇಕಾದುದೇನೆಂದರೆ, ಹರಾಜಿನ ದಿನದಂದು ಹರಾಜು ಪೂರ್ಣಗೊಂಡಿಲ್ಲವಾದರೆ, ಅದನ್ನು ಮರುದಿನ ಅದೇ ನಿಯಮ ನಿಬಂಧನೆಗಳಿಗನುಸಾರವಾಗಿ ನಡೆಸಲಾಗುವುದು. ಒಂದು ವೇಳೆ ಗ್ರಾಹಕ ಮೃತನಾಗಿದ್ದರೆ, ಅದೇ ನಿಯಮ ಮತ್ತು ನಿಬಂಧನೆ ಅವರ ಉತ್ತರಾಧಿಕಾರಿ/ ನಾಮನಿರ್ದೇಶಿತನಿಗೆ ಅನ್ವಯವಾಗುವುದು. ಸಾಲಗಾರರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಹರಾಜಿನ ಮೊದಲು ಎಲ್ಲ ಬಾಕಿ, ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ಪಾವತಿಸಬೇಕು. ತಪ್ಪಿದಲ್ಲಿ ಅಡಮಾನ ಮಾಡಿರುವ ಚಿನ್ನಾಭರಣಗಳನ್ನು ಮಾರಾಟ ಮಾಡಿ ಬ್ಯಾಂಕಿಗೆ ಬರಬೇಕಾಗಿರುವ ಬಾಕಿ ಹಣವನ್ನು ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ವಸೂಲು ಮಾಡಲಾಗುವುದು. ಯಾವುದೇ ವಿಚಾರಣೆ ಮತ್ತು ನಿಯಮ ಮತ್ತು ನಿಬಂಧನೆಗಳಿಗೆ ಶಾಖೆಯನ್ನು ಸಂಪರ್ಕಿಸಿ. ಶಾಖೆ ವಿಳಾಸಕ್ಕಾಗಿ www.janabank.com ಗೆ ಭೇಟಿ ನೀಡಿ.

ಕ್ರ. ಸಂ.	ಸಾಲದ ಖಾತಾ ಸಂ.	ಸಾಲಗಾರರ / ಸಹ–ಸಾಲಗಾರರ ಹೆಸರು	ಅಡಮಾನ ಮಾಡಿದ ಆಭರಣಗಳ ಒಟ್ಟು ತೂಕ
1	31838730024102	ಸ್ವಲ್ಲಾ	18.4
2	31838730057308	ಗೀತಾ ಜಿ ಗಂಗಾಧರ್	14.5
3	31838730057350	ರತ್ನಮ್ಮ ಸುನೇಕರ್ ಗೌಡ	4
4	31838730057360	ಮಧುಸೂದನ್ ಎನ್	29.9
5	31838730057400	ಜಯಲಕ್ಷ್ಮಿ ಸದಾದಿವ್‌ಮೂರ್ತಿ	2.9
6	31838730057525	ಸುಮೈಯ್ಯ	40.2
7	31838730057577	ಇನಾಯತ್ ಪಾಶಾ	41.8
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ದೇನಾ ಬ್ಯಾಂಕ್ ಬ್ಯಾಂಕ್ ಮೇಲ್ಭಾಗ, ಸೈಟ್ ನಂ. 22 ಖಾತಾ ನಂ.25, ಶಾರದಾ ನಗರ, ವಸಂತಪುರ ಮುಖ್ಯರಸ್ತೆ, ಉತ್ತರಹಳ್ಳಿ ಹೋಬಳಿ, ಬೆಂಗಳೂರು–560061.	
8	32568160005442	ರಾಜೇಶ್ವರಿ ರಾಮು ಸಿಕೆ	38.4
9	32568160005494	ರಾಜೇಶ್ವರಿ ರಾಮು ಸಿಕೆ	45.6
10	32568160005560	ಚಿಕ್ಕಣ್ಣಯ್ಯ ಟಿ	41.4
11	32568730028092	ಗೌರಮ್ಮ ವಿ	36.4
12	32568730028100	ಬಾಬು ಡಿ	33
13	32568730028270	ಎಂ ಮಾದೇಶ್	8
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ಖಾತಾ ನಂ.68/63, ಹಳೆ ನಂ.1534 ಸಿಕೆಆರ್ ಕಾಂಪ್ಲೆಕ್ಸ್, ಆನೇಕಲ್ ಬಸ್ ನಿಲ್ದಾಣ ಎದುರು, ಬೆಂಗಳೂರು–562106	
14	46448730039875	ಶೇಖರ್ ಆರ್	6.4
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ನಂ. 1809/1809 ಮತ್ತು 1810/1810 ರಾಮಸಮುದ್ರ ಪಟ್ಟಣ, ಎಫ್ ವಿಭಾಗ, ಬಿ ಆರ್ ಹಿಲ್ಸ್, ಚಾಮರಾಜನಗರ–571313.	
15	31870670000069	ಉಮಾಶಂಕರ್ ಎಸ್	91
16	31878730046146	ಶೋಭಾ ರಾಮನಾಯ್ಡು	2.3
17	31878730046392	ಎನ್ ಮಹಾಲಿಂಗಪ್ಪ	4.9
18	31878730046515	ದೀಪಾ ಸುಭಾಶ್	3
19	31878740000050	ಮಾರಾಯಣಮ್ಮ ಗಂಗಪ್ಪ	9.2
20	31878740000086	ಮಂಜುನಾಥ್ ಬಿ	12
21	31878740000100	ಲೈಡಿಯ ರಾಣಿ ಎಸ್	16.2
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ನಂ. 273–ಬಿ, ಕೊ–ಅಪರೇಟಿವ್ ಹೌಸ್ ಕಟ್ಟಡ ಸೊಸೈಟಿ ಚೌಡೇಶ್ವರಿ ಬಸ್ ನಿಲ್ದಾಣದ ಎದುರು, ಮತ್ತಿಕೆರೆ, ಬೆಂಗಳೂರು–560078.	
22	31138730063329	ಪ್ರಿಯಾಂಕ ಗುಲ್ಬರ್ಗ	2.3
23	31138730063371	ವಿಠಲ್ ಶಿಲ್ಪಿ	15.2
24	31138730063394	ಅಲಿಂಸಾಬ್ ಮುಜಾವರ್	3.8
25	31138730063405	ಶರಣಬಸಪ್ಪ ಕಮಲ್	17.6
26	31138730063533	ಬಸವರಾಜ್ ಶರಣಪ್ಪ ತೋಟದ	10.2
27	31138730063792	ಧನರಾಜ್ ತದಲಗಿ	4.2
28	31138730063800	ಧನರಾಜ್ ತದಲಗಿ	4.9
29	31138730063941	ಧನಸಿಂಗ್ ಯಂಕು ರಾಥೋಡ್	17.1
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಸಿಟಿಎಸ್ ನಂ.1334/ಎ, 2ನೇ ಮಹಡಿ, ಜಯಲಕ್ಷ್ಮಿ ಟ್ರಾನ್ಸ್‌ಪೋರ್ಟ್ ಕಂ. ಮೇಲ್ಭಾಗ, ಶಹಾಪೇಟೆ, ಬಿಜಾಪುರ–586101	
30	31128730038349	ಗುಲ್ಸರ್‌ಬಾನು ರಸೂಲ್‌ಸಾಬ್	27.5
31	31128730038441	ಪ್ರಕಾಶ್ ಎನ್	7.5
32	31128730038477	ಚಂದ್ರಪ್ಪ	10.7
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., #880, 2ನೇ ಮಹಡಿ, ಎಸ್ ಎಸ್ ಕಾಂಪ್ಲೆಕ್ಸ್, ಬಿ ಹೆಚ್ ರಸ್ತೆ, ಶಿವಮೊಗ್ಗ–577202.	
33	31988730034169	ಯೆರ್ರಿಸ್ವಾಮಿ	23
34	31988730034206	ಬಸವರಾಜ್ ಹೆಚ್ ಕೆ	7.1
35	31988730034284	ಬಂದಾರು ಅರುಣಕುಮಾರಿ	3.4
36	31988730034399	ಮಧು ಆರ್	20.2
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಅಕ್ಷಯ ಸ್ಕ್ವೇರ್, ಗಾಂಧಿ ನಗರ ಮುಖ್ಯ ರಸ್ತೆ, ಸರ್ಕಾರಿ ಆಸ್ಪತ್ರೆ ಎದುರು, ಬಳ್ಳಾರಿ–583103	
37	33818730033650	ಆರ್ ಸಚಿನ್ದ ನಾಯಕ್	5.7
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಡೋರ್ ನಂ.604/ಬಿ, ಖಾತಾ ನಂ.23/19 ಸಿದ್ದಲಿಂಗೇಶ್ವರ ಕಾಂಪ್ಲೆಕ್ಸ್, ಎಕ್ಸಿಸ್ ಬ್ಯಾಂಕ್ ಹತ್ತಿರ, ಹಾಡಾಡಿ ರಸ್ತೆ, ದಾವಣಗೆರೆ–577004	
38	34018730026612	ಮುನಿಪೂಜಮ್ಮ ನಾಗಪ್ಪ	6.4
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ # 362, ಪಿಐಡಿ ನಂ.007–ಡಬ್ಲ್ಯು0377–73–1 ತಲಕಾವೇರಿ ಲೇಔಟ್, ಅಮೃತಹಳ್ಳಿ ಮುಖ್ಯರಸ್ತೆ ಬ್ಯಾಟರಾಯನಪುರ, ಬೆಂಗಳೂರು–560092	
39	33878160002791	ಶ್ವೇತ ಮಂಜುನಾಥ್	112.9
40	33878730045249	ನೇತ್ರಾವತಿ ಶಂಕರಪ್ಪ	5.1
41	33878730045341	ಸುಮಿತ್ರ ಲಕ್ಷ್ಮಣ	8
42	33878730045364	ಶರವಣ ಕುಂಆರ್ ಕೆ	10.3
43	33878730045377	ಕೌಸಲ್ಯ ಎಸ್	4
44	33878730045631	ಮಂಜುನಾಥ್ ಕೆ	21.97
45	33878730045644	ಮಂಜುನಾಥ್ ಕೆ	7.98
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ. 33/34, ಖಾತಾ ನಂ.159, ಪಿಐಡಿ ನಂ.14–23–33/34, 1ನೆ ಕ್ರಾಸ್, ಮುನೇಶ್ವರ ಬ್ಲಾಕ್, ಬೆಂಗಳೂರು–560086.	
46	45350670000074	ಭಾನು ಪ್ರಕಾಶ್ ಎ	89.8
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 558, ನೆಲ ಮಹಡಿ, ಬಿಡಿಎ, 1ನೇ ಮುಖ್ಯ ರಸ್ತೆ, ಕೆಂಗೇರಿ ಉಪನಗರ/ ಸ್ಯಾಟಲೈಟ್ ಟೌನ್, ಬೆಂಗಳೂರು–560060, ಭಾರತ,	
47	32508730046622	ಮಹದೇವಸ್ವಾಮಿ ಎಸ್	3.1
48	32508730046687	ಬಿ ರಾಘು	22.3
49	32508730046711	ಕಾರ್ತಿಕ್ ಪ್ರಕಾಶ್	49.7
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ.543/4, ನೆಲಮಹಡಿ, ಜಾಕಿ ಶೋರೂಂ ಹತ್ತಿರ, ಜ್ವಾಲಮಾಲ ಕೈಗಾರಿಕಾ ಎಸ್ಟೇಟ್, ದೇವರಚಿಕ್ಕನಹಳ್ಳಿ ಮುಖ್ಯ ರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು, ಕರ್ನಾಟಕ, ಪಿನ್–560068	
50	33638730060800	ವನಜಾಕ್ಷಿ ಎಮ್	13.7
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 2/1, ಹೊಸ ನಂ. 4, ರುಕ್ಮಿಣಿ ನಿಲಯ, ಮೆಟ್ರೋ ನಿಲ್ದಾಣದ ಹತ್ತಿರ, ಮಾಗಡಿ ಮುಖ್ಯ ರಸ್ತೆ, ಬೆಂಗಳೂರು–560023.	
51	33648730033880	ಮಂಜುನಾಥ ಎಮ್	26.8
52	33648730033917	ದಿವ್ಯ ಜಿ	6.3
53	33648730033956	ಲಕ್ಷ್ಮಿ	4.9
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 12, 1ನೇ ಮಹಡಿ, ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಮೇಲ್ಭಾಗ, ನಾಗರಬಾವಿ 2ನೇ ಹಂತ, 11ನೇ ಬ್ಲಾಕ್, ಪಿ ಆರ್ ಪಾಳ್ಯ, ಬೆಂಗಳೂರು–560072.	
54	33458160005570	ಶಿವರಾಜು ನಂಜಪ್ಪ	49.1
55	33458160005719	ಲಕ್ಷ್ಮಿ ಮಂಜುನಾಥ್	68.5
56	33458730027340	ಸೇವಂತಿ ಕೆ	5.9
57	33458730027400	ಗಾಯತ್ರಿ ಶೇಷಣ್ಣ	5.3
58	33458730027617	ಶಿವಮಲ್ಲು ಡಿ	5.2
59	33458730027620	ದಿಲೀಪ್ ಕುಮಾರ್ ಎಂ ಕೆ	10.3
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 730, ಹಿಣಕಲ್ ಹುಣಸೂರು ಮುಖ್ಯರಸ್ತೆ ಮೈಸೂರು–570017.	
60	32018730008277	ಪೂಜಾ ಪೂಜಾರಿ	3.5
61	32018730008327	ಹಜರತಬಿ ಪಟೇಲ್	7
62	32018730008518	ಅಶ್ವಿನಿ ಗಣೇಶ್ ಪತ್ತಾರ್	4
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 239/2ಎ+ಬಿ/1ಡಿ, ಪ್ಲಾಟ್ ನಂ. 5, ನಂದಗೌಡ ರಸ್ತೆ, ನೂರ್ ಕೆರೂಡಿ ಆಸ್ಪತ್ರೆ, ವಿನಾಯಕ ನಗರ್, ಬಾಗಲಕೋಟೆ–587101, ದೂ: 08354–225452	
63	30948160003992	ಶೋಭಾ ಚಿದಾನಂದಮೂರ್ತಿ	29.9
64	30948730022253	ಯೂನುಸ್ ಖಾನ್	3.1
65	30948730022329	ಚಂದ್ರಕಲಾ ಎಂ ಹೊಂಬಯ್ಯ	22
66	30948730022332	ಚಂದ್ರಕಲಾ ಎಂ ಹೊಂಬಯ್ಯ	4.7
67	30948730022355	ವಿನೋದ್	52.6
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 2ನೇ ಮಹಡಿ, ನಂ. 2391/1, ಕಾಂತರಾಜ್ ಅರಸ್ ರಸ್ತೆ ಕೆ ಜಿ ಕೊಪ್ಪಲು, ಮೈಸೂರು–570009, ಭಾರತ	
68	46988730037764	ನರಸಿಂಹಮೂರ್ತಿ ಎಂ	5
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮತ್ತು 1ನೇ ಮಹಡಿ, ಡೋರ್ ನಂ. 66, ಖಾತಾ ನಂ.865/66 ರೋಜಿಪುರ ಗ್ರಾಮ, ಕಸಬಾ ಹೋಬಳಿ, ನಂದಿನಿ ಆಸ್ಪತ್ರೆ ಹತ್ತಿರ, ದೊಡ್ಡಬಳ್ಳಾಪುರ, ಬೆಂಗಳೂರು–561203	
69	47468730005047	ಅರುಣ್ ಕುಮಾರ್	46
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, 7ಎಂ–414, ಹೆಚ್‌ಆರ್‌ಬಿಆರ್ 1ನೇ ಬ್ಲಾಕ್ ಎಕ್ಸ್‌ಟೆನ್ಶನ್, ಬೆಂಗಳೂರು–560043, ಭಾರತ	
70	45488730018440	ಶಹೀದಾ ಬೇಗಂ	6.7
71	45488730018492	ವೆಂಕಟೇಶ್ ಎನ್	5.1
72	45488730018568	ಮಂಜುನಾಥ್ ನಾಯಕ್	10
73	45488730018657	ಶಿವರಾಜ್ ಕಉಮಾರ್	10.1
74	45488730018707	ಶೈಲಜ ಕೆ ಜಗದೀಶ್	32.2
75	45488730018785	ಈರಮ್ ಮಬಿ	5.8
76	45488730018851	ಮಹೇಶ್ ನಾಯಕ್	22
77	45488730018890	ಎಂಡಿ ಮುರ್ಸಲೀನ್	36.5
78	45488730018924	ಉರುಕುಂದ ಎನ್	5
79	45488730018963	ಗಂಗಾಧರ್ ಜೆ	29.9
80	45488730018976	ಪಂಪೇಶ್ ವಿ	5
81	45488730019009	ಈರಮ್ಮ ಬಿ	10.3
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಡೋರ್ ನಂ.1–4–380, ಹೆಚ್ ಕೆ ದುಂಬಾ ನರ್ಸಿಂಗ್ ಹೋಂ, ಆರ್ಥೋಪೆಡಿಕ್ ಸೆಂಟರ್, ಐ ಬಿ ರಸ್ತೆ, ರೈಲ್ವೆ ನಿಲ್ದಾಣ ಸಮೀಪ, ರಾಯಚೂರು–584101, ಭಾರತ	
82	45450670000012	ಸತೀಶ್ ಕುಮಾರ್ ಎಂ	170.9
83	45458160005742	ಮೊಹಮ್ಮದ್ ಉಮರ್ ಜಿ	34.7
84	45458730028067	ಅಫ್ರೀನ್ ಬೇಗಂ	4.9
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ.2–907/23/2, ಡಾ. ಸವಿತ ವಾಣಿಜ್ಯ ಸಂಕೀರ್ಣ ಬಸವೇಶ್ವರ ಆಸ್ಪತ್ರೆ ಎದುರು, ಸೇಡಂ ರಸ್ತೆ, ಗುಲಬರ್ಗ– 590003,	
85	45398730008029	ರಾಜು ದೊಡ್ಡಕ್ಕನವರ್	2.5
86	45398730008131	ಶಂಕರ್ ಗೊದಲಕುಂದರಗಿ	18.95
87	45398730008207	ಉದಯ್ ಕುಮಾರ್ ಎನ್ ಎನ್ ಅಕ್ಕಸಾಲಿಗರ್	9.2
88	45398730008309	ಹನಮಂತ್ ಯಲ್ಲಪ್ಪ ನಾಯ್ಕ್	4
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಯುನಿಕ್ ಟವರ್ ಬಿಗ್ ಬಜಾರ್ ಹತ್ತಿರ, ಎಕ್ಸಿಸ್ ಬ್ಯಾಂಕ್ ಎದುರು, ಖಾನಾಪುರ ರಸ್ತೆ, ಅಂಗೋಳ್ ಎಕ್ಸ್‌ಟೆನ್ಶನ್ ಬೆಳಗಾವಿ, ಕರ್ನಾಟಕ–590003	
89	45448730007262	ವೆಂಕಟೇಶ್ ಕಲಾಲ್	11.1
90	45448730007338	ಹುಸೇನಬಿ ಅಯೂಬಾಲಿ ಶೇಕ್	5
91	45448730007351	ಹನಮಂತಪ್ಪ ಫಕೀರಪ್ಪ ಕಲ್ಲವ್ವನವರ್	18.75
92	45448730007380	ಹನಮಂತಪ್ಪ ಫಕೀರಪ್ಪ ಕಲ್ಲವ್ವನವರ್	9.9
93	45448730007479	ಬಾಶಾ ಯದ್ವಾಡ್	10.9
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮೆಝನೈನ್ ಮತ್ತು 1ನೇ ಮಹಡಿ, ಡೋರ್ ನಂ.#00 ಉಣಕಲ್ ಗ್ರಾಮ, ವಿದ್ಯಾನಗರ, ಹುಬ್ಬಳ್ಳಿ ತಾಲೂಕು, ಧಾರವಾಡ ಕರ್ನಾಟಕ–580021	
94	45388730006086	ಪುನೀತ್ ಪಿ	127.24
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., #231, 2ನೇ ಮುಖ್ಯರಸ್ತೆ, ಸಂಪಿಗೆ ಮುಖ್ಯರಸ್ತೆ, ಬಿಬಿಎಂಪಿ ಹಳೆ ವಾರ್ಡ್ ಸಂ. 5, ಹೊಸ ನಂ. 35, ಮಲ್ಲೇಶ್ವರಂ, ಬೆಂಗಳೂರು–560003, ಭಾರತ	
95	30198160002729	ರುಕ್ಮಿಣಿ ಸಿ	148.3
96	30198730040326	ಜನನಿ ಬಿ	8.1
97	30198730040415	ಕಾಮಾಕ್ಷಿ ಕಣ್ಣನ್	4.2
98	30198730040441	ನ್ಯಾನ್ಸಿ	11.9
99	30198730040530	ಎಂ ಕಲಾಸೆಲ್ವಿ	3.4
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 39/2 ನೆಲಮಹಡಿ, 2ನೇ ಮೈನ್, 2ನೇ ಮಹಡಿ ಸಿ ಕೆ ಸಿ ಗಾರ್ಡನ್, ಮಿಷನ್ ರಸ್ತೆ ಕ್ರಾಸ್, ಬೆಂಗಳೂರು–560027.	
100	46658730025501	ಪ್ರೇಮ ಆರ್	4.3
101	46658730025642	ಪದ್ಮ ಎಂ	19.7
102	46658730025715	ಮೌಲಾ	3.9
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ನಂ. 5, ಹೊಸ ಖಾತಾ ನಂ. 839/3735/3735 /5, ಹಳೆ ಖಾತಾ ನಂ. 3735/3735/5, ಎಸ್ ನರಸಿಂಹಯ್ಯ ಲೇಔಟ್, ವಾರ್ಡ್ ನಂ. 22 ಬೂದಿಗೆರೆ ರಸ್ತೆ ಎಡಭಾಗ, 4ನೇ ವಿಭಾಗ, ದೇವನಹಳ್ಳಿ ಪಟ್ಟಣ, ಬೆಂಗಳೂರು–562110.	
103	31888730030921	ನೇತ್ರಾವತಿ ಡಿ	6.8
104	31888740000125	ವಿಜಯ್ ಎಸ್	41
105	31888740000214	ಫೌಜಿಯ	26.3
106	31888740000240	ನಹೇಶ್ವರಿ ರಾಜೇಂದ್ರನ್ ಪಿ ಎಲ್	15.9
		ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮತ್ತು 1ನೇ ಮಹಡಿ, ಪ್ಲಾಟ್ ನಂ. 22, ಪಿಐಡಿ ನಂ.85–6–22 ಸರ್ವಜ್ಞನಗರ, ವೀಲರ್ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು–560005.	

ಸ್ಥಳ: ಕರ್ನಾಟಕ
ದಿನಾಂಕ: 15.12.2025

ಸಹಿ/–ಅಧಿಕೃತ ಅಧಿಕಾರಿ
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್

ಕೊಲ್ಹಾಪುರಿ ಚಪ್ಪಲಿಗಳ ಉತ್ಪಾದನೆಗೆ ಪ್ರಾಡಾ ಜತೆ ಒಪ್ಪಂದ
ಕರ್ನಾಟಕ-ಮಹಾರಾಷ್ಟ್ರ ಕುಶಲಕರ್ಮಿಗಳ ನಡುವೆ ಸಮರ

ಮುಂಬೈ: ಕೊಲ್ಹಾಪುರಿ ಚಪ್ಪಲಿಗಳ ಉತ್ಪಾದನೆಗಾಗಿ ಇಟಲಿಯ ಐಷಾರಾಮಿ ಫ್ಯಾಷನ್ ಬ್ರ್ಯಾಂಡ್ ಪ್ರಾಡಾ ಮತ್ತು ಮಹಾರಾಷ್ಟ್ರದ ಲಿಡ್ಕಾಮ್ ಹಾಗೂ ಕರ್ನಾಟಕದ ಲಿಡ್ಕರ್ ನಡುವೆ ಇತ್ತೀಚೆಗೆ ನಡೆದ ಒಪ್ಪಂದವು ಎರಡು ರಾಜ್ಯಗಳ ಕರಕುಶಲಕರ್ಮಿಗಳ ನಡುವೆ ವಿವಾದಕ್ಕೆ ಕಾರಣವಾಗಿದೆ.

ಕೊಲ್ಹಾಪುರಿ ಚಪ್ಪಲಿಗಳಿಗೆ 2019ರಲ್ಲಿ ಭೌಗೋಳಿಕ ಸೂಚಕ (ಜಿಐ) ಟ್ಯಾಗ್ ಲಭಿಸಿದೆ. ಈ ಒಪ್ಪಂದದಿಂದಾಗಿ ಜಿಐ ಟ್ಯಾಗ್‌ಗೆ ಸಂಬಂಧಿಸಿದಂತೆ ಲಿಡ್ಕರ್ ಮತ್ತು ಲಿಡ್ಕಾಮ್ ಎರಡೂ ಸಂಸ್ಥೆಗಳು ನೋಂದಾಯಿತ ಮಾಲೀಕರಾಗಿದ್ದಾರೆ. ಹೀಗಾಗಿ ಈ ಒಪ್ಪಂದದ ವಿರುದ್ಧ ಮಹಾರಾಷ್ಟ್ರದ ಕರಕುಶಲಕರ್ಮಿಗಳು ಧ್ವನಿ ಎತ್ತಿದ್ದು, ಕೊಲ್ಹಾಪುರಿ ಚಪ್ಪಲಿಗಳು ಮಹಾರಾಷ್ಟ್ರದ ಸ್ಥಳೀಯ ಕಲೆ ಮತ್ತು ಸಂಸ್ಕೃತಿಯ ಪ್ರತೀಕವಾಗಿವೆ. ಕರ್ನಾಟಕದ ಕರಕುಶಲಗಾರರಿಗೆ ಈ ಯೋಜನೆಯ ಲಾಭ ವಿಸ್ತರಿಸುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕೊಲ್ಹಾಪುರಿ ಚಪ್ಪಲ್ ಕ್ಲಸ್ಟರ್ ಪ್ರೈವೇಟ್ ಲಿಮಿಟೆಡ್ ಅಧ್ಯಕ್ಷ ಅಶೋಕ್ ಗಾಯಕವಾಡ್ ಮಾತನಾಡಿ, 'ಪ್ರಾಡಾ ಜತೆ ಲಿಡ್ಕಾಮ್ ಮಾಡಿ ಕೊಂಡಿರುವ ಒಪ್ಪಂದದಿಂದ ಕೊಲ್ಹಾಪುರದ ಕರಕುಶ ಲಗಾರರಿಗೆ ಲಾಭವಾಗುತ್ತದೆ ಎಂಬುದು ಸಂತೋಷ, ಆದರೆ ಈ ಲಾಭವನ್ನು ಕರ್ನಾಟಕದ ಕರಕುಶಲ ಗಾರರಿಗೆ ಏಕೆ ವಿಸ್ತರಿಸಬೇಕು? ಜಿಐ ಟ್ಯಾಗ್‌ನಿಂದ ಅವರಿಗೆ ಪ್ರಯೋಜನವಾಗುತ್ತದೆ. ಕೊಲ್ಹಾಪುರಿ ಚಪ್ಪಲಿ ಒಂದು ಸ್ಥಳೀಯ ಕಲೆ, ಹಾಗಾಗಿ ಭೌಗೋಳಿಕ ಸಮೀಪದ ಕಾರಣಕ್ಕೆ ಬೇರೆ ಪ್ರದೇಶದವರು ಅದನ್ನು ಹಕ್ಕು ಪಡೆದುಕೊಳ್ಳುವುದು ಸರಿಯಲ್ಲ. ಈ ವಿಷ ಯದ ಕುರಿತು ಸ್ಥಳೀಯ ಸಂಘಟನೆಗಳೊಂದಿಗೆ ಚರ್ಚಿಸಿ, ಜಿಐ ಟ್ಯಾಗ್ ಹಂಚಿಕೆ ಸಂಬಂಧ ಕಾನೂನು ತಜ್ಞರ ಸಲಹೆ ಪಡೆಯಲಾಗುವುದು' ಎಂದು ಹೇಳಿದರು.

ಕೊಲ್ಹಾಪುರ ಚಪ್ಪಲ್ ಇಂಡಸ್ಟ್ರಿಯಲ್ ಕ್ಲಸ್ಟರ್ ನಿರ್ದೇಶಕ ಹಾಗೂ ಕೊಲ್ಹಾಪುರ ಫುಟ್‌ವೇರ್ ಅಸೋಸಿಯೇಷನ್ ಸದಸ್ಯ ಭೂಪಾಲ್ ಶೆಟ್ಟೆ ಮಾತನಾಡಿ, ಕೊಲ್ಹಾಪುರದ ಕರಕುಶಲಗಾರರು ತಮ್ಮ ಗುರುತು ಮತ್ತು ಬ್ರ್ಯಾಂಡ್ ಅನ್ನು ನೆರೆಯ ರಾಜ್ಯದೊಂದಿಗೆ ಹಂಚಿಕೊಳ್ಳಬೇಕಾಗಿರುವುದು ಸರಿಯಲ್ಲ ಎಂದು ತಿಳಿಸಿದ್ದಾರೆ. ಈ ಕುರಿತು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದ್ದು, 'ಕೊಲ್ಹಾ ಪುರದ ಕರಕುಶಲಗಾರರು ಈ ಒಪ್ಪಂದದಿಂದ ದೊರಕುವ ಲಾಭ ಮತ್ತು ಅವಕಾಶಗಳ ಮೇಲೆ ಗಮನ ಕೇಂದ್ರೀಕರಿಸಬೇಕು. ಕರ್ನಾಟಕಕ್ಕೆ ಸಂಬಂಧಿ ಸಿದ ವಿಷಯಗಳು ಈಗ ಹಳೆಯವು, ಹಾಗಾಗಿ ಭವಿಷ್ಯದತ್ತ ನೋಡಬೇಕು. ಈ ಒಪ್ಪಂದದಿಂದ ಕೊಲ್ಹಾಪುರಿ ಚಪ್ಪಲಿಗಳಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆ ಬರಲಿದೆ' ಎಂದು ಹೇಳಿದ್ದಾರೆ.

ಏನಿದು ಒಪ್ಪಂದ?

ಪ್ರಾಡಾ ಸಂಸ್ಥೆಯು ಮಹಾರಾಷ್ಟ್ರದ ಲಿಡ್ಕಾಮ್ ಮತ್ತು ಕರ್ನಾಟಕದ ಲಿಡ್ಕರ್ ನಡುವೆ ಒಪ್ಪಂದ ಮಾಡಿಕೊಂಡಿದ್ದು, ಕೊಲ್ಹಾಪುರಿ ಚಪ್ಪಲಿಗಳಿಂದ ಪ್ರೇರಿತವಾದ ಸೀಮಿತ ಆವೃತ್ತಿಯ ಸ್ಯಾಂಡಲ್‌ಗಳನ್ನು ತಯಾರಿಸಲು ಮುಂದಾಗಿದೆ. ಈ ಯೋಜನೆಯಡಿಯಲ್ಲಿ ಪ್ರಾಡಾ ಸುಮಾರು 2,000 ಜೋಡಿ ಚಪ್ಪಲಿಗಳನ್ನು ಉತ್ಪಾದಿಸಲು ಯೋಜನೆ ರೂಪಿಸಿದೆ. ಒಪ್ಪಂದದ ಭಾಗವಾಗಿ, ಪ್ರಾಡಾ ಮೊದಲ ಹಂತದಲ್ಲಿ ತಯಾರಿಸುವ ಪ್ರತಿ ಜೋಡಿ ಚಪ್ಪಲಿಗಳ ಬೆಲೆ ಸುಮಾರು 800 ಯುರೋ (ಸುಮಾರು ₹84,000) ಇರಲಿದೆ. ಈ ಸ್ಯಾಂಡಲ್‌ಗಳು 2026ರ ಫೆಬ್ರವರಿಯಿಂದ ಪ್ರಾಡಾದ ಆನ್‌ಲೈನ್ ವೇದಿಕೆ ಹಾಗೂ ವಿಶ್ವದಾದ್ಯಂತ ಇರುವ 40 ಪ್ರಾಡಾ ಶೋರೂಮ್‌ಗಳಲ್ಲಿ ಲಭ್ಯವಾಗಲಿವೆ.

3 ವರ್ಷದಲ್ಲಿ 9,639 ಮಕ್ಕಳ ಅಪಹರಣ!

ಮೊದಲಪುಟದಿಂದ 2024ರಲ್ಲಿ ಒಟ್ಟು 3,411 ಮಕ್ಕಳು ನಾಪತ್ತೆ, ಅಪಹರಣಕ್ಕೀಡಾಗಿದ್ದಾರೆ. ಅವರಲ್ಲಿ 2,436 ಹೆಣ್ಣು ಮಕ್ಕಳು ಮತ್ತು 975 ಗಂಡು ಮಕ್ಕಳಿದ್ದಾರೆ. 2025ರ ನವೆಂಬರ್ 15ರ ವರೆಗೆ ರಾಜ್ಯದಲ್ಲಿ ಒಟ್ಟು 3,189 ಮಕ್ಕಳ ಅಪಹರಣವಾಗಿದೆ. ಇದರಲ್ಲಿ 2,324 ಹೆಣ್ಣು ಮಕ್ಕಳು ಹಾಗೂ 865 ಗಂಡು ಮಕ್ಕಳ ಅಪಹರಣ ಮಾಡಲಾಗಿದೆ. ಮಾಹಿತಿ ಪ್ರಕಾರ, 2023ರಲ್ಲಿ ಅಪಹರಣವಾದ 908 ಬಾಲಕರ ಪೈಕಿ, 873 ಬಾಲಕರು ಪತ್ತೆಯಾಗಿದ್ದು, 35 ಪ್ರಕರಣಗಳಲ್ಲಿ ಪತ್ತೆಯಾಗದೆ ಬಾಕಿ ಉಳಿದುಕೊಂಡಿವೆ. ಒಟ್ಟು 2,131 ಬಾಲಕಿಯರ ಅಪಹರಣ ಕೇಸುಗಳ ಪೈಕಿ, 2,089 ಪತ್ತೆಯಾಗಿದ್ದರೆ, 42 ಇನ್ನೂ ಪತ್ತೆಯಾಗಿಲ್ಲ. 2024ರಲ್ಲಿ ಒಟ್ಟು 975 ಗಂಡು ಮಕ್ಕಳ ಅಪಹರಣಗಳ ಪೈಕಿ 930 ಪತ್ತೆಯಾಗಿದ್ದರೆ, 45 ಬಾಲಕರು ಇನ್ನೂ ಪತ್ತೆಯಾಗಿಲ್ಲ. ಅದೇ ರೀತಿ ಒಟ್ಟು 2,436 ಹೆಣ್ಣು ಮಕ್ಕಳ ಅಪಹರಣ ಪೈಕಿ, 2,336 ಪತ್ತೆಯಾಗಿದ್ದು, 100 ಬಾಲಕಿಯರು ಇನ್ನೂ ಕಂಡುಬಂದಿಲ್ಲ. 2025ರ ನವೆಂಬರ್ 15ರವರೆಗೆ ಒಟ್ಟು 865 ಅಪಹರಣವಾದ ಬಾಲಕರ ಪೈಕಿ 676 ಪತ್ತೆಯಾಗಿದ್ದರೆ, 189 ಬಾಲಕರು ಇನ್ನೂ ಪತ್ತೆಯಾಗಿಲ್ಲ. ಇತ್ತ ಅಪಹರಣವಾದ ಒಟ್ಟು 2,324 ಹೆಣ್ಣು ಮಕ್ಕಳ ಪೈಕಿ 1,641 ಪತ್ತೆಯಾಗಿದ್ದರೆ, 683 ಬಾಲಕಿಯರು ಇನ್ನೂ ಪತ್ತೆಯಾಗಿಲ್ಲ.

ಬೆಂಗಳೂರು ನಗರದಲ್ಲೇ ಅತಿ ಹೆಚ್ಚು ಅಪಹರಣ

ಬೆಂಗಳೂರು ನಗರ ಮಕ್ಕಳ ಅಪಹರಣಗಳಲ್ಲಿ ಅಗ್ರಸ್ಥಾನ ಎಂಬ ಕುಖ್ಯಾತಿ ಪಡೆದಿದೆ. ಕಳೆದ 3 ವರ್ಷಗಳಲ್ಲಿ ನಗರದಲ್ಲಿ ಸುಮಾರು 3,268 ಮಕ್ಕಳ ಅಪಹರಣವಾಗಿದೆ. ಈ ಪೈಕಿ ಹೆಣ್ಣು ಮಕ್ಕಳ ಅಪಹರಣ ಸಂಖ್ಯೆ 2,290. ರಾಜ್ಯದಲ್ಲಿ ಮೂರು ವರ್ಷಗಳಲ್ಲಿ ವರದಿಯಾಗಿ ರುವ ಮಕ್ಕಳ ಅಪಹರಣದ ಪೈಕಿ ಸುಮಾರು ಶೇ.24ರಷ್ಟು ಬೆಂಗಳೂರಿನಲ್ಲೇ ನಡೆದಿದೆ. ಬೆಂಗಳೂರು ಜಿಲ್ಲೆಯಲ್ಲಿ 3 ವರ್ಷಗಳಿಂದ ಒಟ್ಟು 694 ಮಕ್ಕಳ ಅಪಹರಣವಾಗಿದ್ದು, ಈ ಪೈಕಿ 493 ಬಾಲಕಿಯರು ಸೇರಿದ್ದಾರೆ. ಉಳಿದಂತೆ, ತುಮಕೂರು ಜಿಲ್ಲೆಯಲ್ಲಿ ಮೂರು ವರ್ಷಗಳಿಂದ ಒಟ್ಟು 450 ಮಕ್ಕಳ ಅಪಹರಣಗಳು ವರದಿಯಾಗಿವೆ. ಈ ಪೈಕಿ, 361 ಬಾಲಕಿಯರು ಅಪಹರಣ, ನಾಪತ್ತೆಯಾಗಿದ್ದಾರೆ. ರಾಮನಗರ ಜಿಲ್ಲೆ (ಬೆಂಗಳೂರು ದಕ್ಷಿಣ) ಯಲ್ಲಿ ಒಟ್ಟು 305 ಮಕ್ಕಳ ಅಪಹರಣವಾಗಿದ್ದು, ಈ ಪೈಕಿ 226 ಹೆಣ್ಣು ಮಕ್ಕಳಾಗಿದ್ದಾರೆ. ದಾವಣಗೆರೆ ಜಿಲ್ಲೆಯಲ್ಲಿ ಮೂರು ವರ್ಷಗಳಿಂದ ಒಟ್ಟು 301 ಮಕ್ಕಳ ಅಪಹರಣವಾಗಿದ್ದು, ಇದರಲ್ಲಿ 212 ಬಾಲಕಿಯರಾಗಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಒಟ್ಟು 297 ಮಕ್ಕಳ ಅಪಹರಣವಾಗಿದ್ದು, ಈ ಪೈಕಿ 216 ಹೆಣ್ಣು ಮಕ್ಕಳ ಅಪಹರಣವಾಗಿದೆ. ಮಂಡ್ಯ ಜಿಲ್ಲೆಯಲ್ಲಿ 3 ವರ್ಷಗಳಿಂದ ಒಟ್ಟು 283 ಮಕ್ಕಳ ಅಪಹರಣವಾಗಿದ್ದು, ಈ ಪೈಕಿ 186 ಬಾಲಕಿಯಾಗಿ ದ್ದಾರೆ. ಹಾಸನದಲ್ಲಿ ಒಟ್ಟು 264 ಮಕ್ಕಳ ಅಪಹರಣ ವರದಿಯಾಗಿದ್ದು, ಈ ಪೈಕಿ 192 ಹೆಣ್ಣು ಮಕ್ಕಳ ಅಪಹರಣ ಪ್ರಕರಣಗಳಾಗಿವೆ.

ಕೇಂದ್ರ ಸಚಿವರ ಸರಳ ನಡೆಗೆ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಮೆಚ್ಚುಗೆ

ರಸ್ತೆ ಬದಿ ಪೇರಲೆ ಹಣ್ಣು ಸವಿದು ಸರಳತೆ ಮೆರೆದ ಜೋಶಿ

ಬೆಂಗಳೂರು: ಉನ್ನತ ಹುದ್ದೆಯಲ್ಲಿರುವವರು, ರಾಜಕೀಯ ನಾಯಕರು ಪಂಚತಾರಾ ಹೋಟೆಲ್‌ಗಳಲ್ಲಿ ಊಟ, ತಿಂಡಿ ತಿನಿಸುಗಳನ್ನು ತಿನ್ನುವುದು ವಾಡಿಕೆ. ಇದ್ದಕ್ಕೆ ತದ್ವಿರುದ್ಧ ಎನ್ನುವಂತೆ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು ರಸ್ತೆ ಬದಿಯಲ್ಲಿ ರೈತ ಮಹಿಳೆ ಮಾರಾಟ ಮಾಡುತ್ತಿದ್ದ ಪೇರಲೆ ಹಣ್ಣು (ಪ್ಯಾರ್ಲ್ ಹಣ್ಣು) ಖರೀದಿಸಿ ತಿಂದು ಸರಳತೆ ಮೆರೆದಿದ್ದಾರೆ.

ಹೌದು. ಹುಬ್ಬಳ್ಳಿಯಿಂದ ತಮ್ಮ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು ನವಲೂರ ಸಮೀಪ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಬಿಸಿಲಿನಲ್ಲಿ ರೈತ ಮಹಿಳೆಯೊಬ್ಬರು ಪೇರಲೆ ಹಣ್ಣು ಮಾರಾಟ ಮಾಡುತ್ತಿದ್ದದನ್ನು ಗಮನಿಸಿ, ಕಾರು ಪಾರ್ಕಿಂಗ್ ಮಾಡಿ ಮಂದಹಾಸದಿಂದ ನಡೆದು ಬಂದರು. ಪೇರಳೆ ಹಣ್ಣು ವ್ಯಾಪಾರ ಮಾಡುತ್ತಿದ್ದ ರೈತ ಮಹಿಳೆಯೊಂದಿಗೆ ಕೇಂದ್ರ ಸಚಿವರು ಎಂಬ ಹಮ್ಮುಬಿಮ್ಮು ಇಲ್ಲದೆ ಆತ್ಮೀಯ ವಾಗಿ ಮಾತನಾಡಿಸಿ ಹಣ್ಣುಗಳನ್ನು ಖರೀದಿಸಿ ನಿಂತ ಜಾಗದಲ್ಲೇ ತಿಂದರು.

ಕಾರಿನಿಂದ ಇಳಿದು ವ್ಯಾಪಾರಿ ರೈತ ಮಹಿಳೆ ಬಳಿ ಬಂದ ಪ್ರಲ್ಹಾದ್ ಜೋಶಿ ಅವರು 'ಪ್ಯಾರ್ಲ್ ಹಣ್ಣು ಹೆಂಗ ಕೊಟ್ಟಿ ಅಮ್ಮಾ' ಎಂದರು. 'ಐವತ್ತಕ್ಕ ಎರಡ, ನೂರಕ್ಕೆ ಐದ ಹಣ್ಣು ಕೊಡ್ತೆನೆ ತಗೋರಿ ಸರ್' ಎಂದು ರೈತ ಮಹಿಳೆ ಹೇಳಿದರು. ಮುಂದುವರಿದು ಆತ್ಮೀಯವಾಗಿ ಮಾತನಾಡಿದ ಜೋಶಿ ಅವರು, 'ಹಣ್ಣ ಸಿಹಿ ಅದಾವ ಇಲ್ಲ' ಎಂದರು. 'ನಮ್ಮ ನವಲೂರು ಪ್ಯಾರ್ಲ್ ಹಣ್ಣ ಅಂದರ ಕೇಳ್ತಿಯನಾ ಯಪ್ಪಾ ತಿಂದರಾ ನೋಡ' ಎಂದು ಪೇರಲೆ ಹಣ್ಣು ಕೊಟ್ಟರು.

ಸಮೀಪ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ವ್ಯಾಪಾರ ಮಾಡುತ್ತಿದ್ದ ರೈತ ಮಹಿಳೆಯಿಂದ ಪೇರಲೆ ಹಣ್ಣು ಖರೀದಿಸಿದ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ.

ನಾಲ್ಕೈದು ಪೇರಲೆ ಹಣ್ಣುಗಳನ್ನು ಖರೀದಿಸಿ ತಿಂದರು.

ಈ ಕುರಿತು ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್ ಮಾಡಿರುವ ಅವರು, ಹೆದ್ದಾರಿ ಬಳಿ ಪೇರಲೆ ಹಣ್ಣು ಖರೀದಿಸಿ ಸವಿದ ಸಂದರ್ಭವನ್ನು ಬರೆದುಕೊಂಡಿದ್ದಾರೆ. ನಮ್ಮ ರೈತರು ಬೆಳೆದ ನವಲೂರು ಪೇರಲೆ ಹಣ್ಣನ್ನು ನಾವು ಖರೀದಿಸಿ ತಿನ್ನದೆ ಇದ್ದರೆ ಹೇಗೆ.. ನಮ್ಮವರು ಬೆಳೆದ ಹಣ್ಣನ್ನು ನಾವು ಖರೀದಿಸಿ ತಿನ್ನದೇ ಇರುವುದು ಸಾಧ್ಯವೇ ಎಂದು ಬರೆದುಕೊಂಡಿದ್ದಾರೆ. ಈ ಮೂಲಕ ರೈತರ ಬೆಳೆಗೆ ಉತ್ತೇಜನ ನೀಡಿದ್ದಾರೆ. ರಸ್ತೆ ಬದಿ ಹಣ್ಣು ಖರೀದಿಸಿ ತಿನ್ನುವ ಮೂಲಕ ನಮ್ಮ ರೈತರ ಉತ್ಪನ್ನಗಳನ್ನು ನಾವು ಖರೀದಿಸಿ ಬಳಸಬೇಕು ಎನ್ನುವ ಸಂದೇಶ ಸಾರಿದ್ದಾರೆ.

ಸಚಿವರ ಈ ಸರಳ ನಡೆಗೆ ಸಾಮಾಜಿಕ ಜಾಲತಾಣಗಳಲ್ಲಿಯೂ ವ್ಯಾಪಕ ಮೆಚ್ಚುಗೆಗೆ ಪಾತ್ರವಾಗಿದೆ. 'ಸಾಮಾನ್ಯ ಜನರ ನಡುವೆ ಇರುವ ನಾಯಕ', 'ಸಣ್ಣ ವ್ಯಾಪಾರಿಗಳಿಗೆ ಪ್ರೋತ್ಸಾಹ ನೀಡುವ ನಡೆ' ಎಂಬ ಪ್ರತಿಕ್ರಿಯೆಗಳು ಬಂದಿವೆ. ಇನ್ನೂ ಕೆಲವರು ನವಲೂರ ಪೇರಳೆ ಹಣ್ಣನ್ನೂ ಜಿಐ ಪಟ್ಟಿಗೆ ಶಿಫಾರಸ್ಸು ಮಾಡಿ ಎಂದು ಪ್ರತಿಕ್ರಿಯಿಸಿದ್ದಾರೆ.

ಶಾಮನೂರು ಶಿವಶಂಕರಪ್ಪ
1931-2025

ದಾವಣಗೆರೆ ಧಣಿ ಇನ್ನಿಲ್ಲ

ಶಾಮನೂರು ಶಿವಶಂಕರಪ್ಪ ಯುಗಾಂತ್ಯ | ಅನಾರೋಗ್ಯದಿಂದ 95ನೇ ವಯಸ್ಸಿನಲ್ಲಿ ನಿಧನ | ಧಣಿ ಕಳೆದುಕೊಂಡ ದಾವಣಗೆರೆ ನೀರವ

ಬದುಕಿನ ಲೆಕ್ಕ ಮುಗಿಸಿದ ಕೊಡುಗೈ ದಾನಿ

ಶಾಮನೂರು ಜೀವನ ಹಾದಿ

- ಕಲ್ಲಪ್ಪ-ಸಾವಿತ್ರಮ್ಮ ದಂಪತಿಗೆ 1931ರ ಜೂ.16ರಂದು ಜನನ
- ಕೃಷಿ, ವ್ಯಾಪಾರ ಹಿನ್ನೆಲೆ ಕುಟುಂಬದಲ್ಲಿ ಬೆಳೆದ ಶಾಮನೂರು
- ಹುಟ್ಟೂರು ದಾವಣಗೆರೆಯಲ್ಲಿಯೇ ಪ್ರಾಥಮಿಕ, ಕಾಲೇಜು ಶಿಕ್ಷಣ
- ವ್ಯಾಪಾರ, ಉದ್ಯಮ ಆರಂಭಿಸಿ 1969ರಲ್ಲಿ ರಾಜಕೀಯ ಪ್ರವೇಶ
- ಪಾರ್ವತಮ್ಮ ಎಂಬುವವರನ್ನು ವರಿಸಿದ ಶಾಮನೂರು ಶಿವಶಂಕರಪ್ಪ
- ದಂಪತಿಗೆ ಮೂವರು ಗಂಡು, ನಾಲ್ವರು ಹೆಣ್ಣುಮಕ್ಕಳ ಜನನ
- 1972ರಲ್ಲಿ ದಾವಣಗೆರೆ ನಗರಸಭಾ ಸದಸ್ಯರಾಗಿ ಆಯ್ಕೆ
- 1980ರಲ್ಲಿ ಕಾಂಗ್ರೆಸ್‌ನಿಂದ ಲೋಕಸಭೆಗೆ ಸ್ಪರ್ಧೆ, ಸೋಲು
- 1994ರಲ್ಲಿ ದಾವಣಗೆರೆ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆ
- 1997ರಲ್ಲಿ ದಾವಣಗೆರೆ ಲೋಕಸಭಾ ಕ್ಷೇತ್ರದಿಂದ ಸಂಸದರು
- 1999ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಸೋಲು
- 2004 ರಿಂದ 2023ರ ವರೆಗೆ ಸತತ 4ನೇ ಬಾರಿ ಶಾಸಕರಾಗಿ ಆಯ್ಕೆ

ಪ್ರಶಸ್ತಿಗಳು

- ಪೌಲ್ ಹ್ಯಾರೀಸ್ ಫೆಲೊ (ರೋಟರಿ ಇಂಟರ್‌ನ್ಯಾಷನಲ್) 1985
- ಶಿರೋಮಣಿ ವಿಕಾಸ- 1987, ಇಂದಿರಾ ಪ್ರಿಯದರ್ಶಿನಿ -1990
- ವಿದ್ಯಾಶ್ರೀ ಬಿರುದು- 1990, ಬಿಸಿನೆಸ್ ಎಕ್ಸ್‌ಲೆನ್ಸ್ ಅವಾರ್ಡ್ ದೆಹಲಿ-1992
- ಸಮಾಜಶ್ರೀ- ಇಂಡಿಯನ್ ಕೌನ್ಸಿಲ್ ಆಫ್ ಮ್ಯಾನೇಜ್‌ಮೆಂಟ್ ಎಕ್ಸಿಕ್ಯೂಟಿವ್ಸ್ ಮುಂಬೈ- 1993
- ದಿ.ಇಂಟರ್‌ನ್ಯಾಷನಲ್ ಬಿಸಿನೆಸ್ ಅಕ್ಯುಮನ್ ಅವಾರ್ಡ್- ದೆಹಲಿ-1993
- ಕುವೆಂಪು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ -2008
- ವಾಣಿಜ್ಯ ರತ್ನ ಅವಾರ್ಡ್-ಚೇಂಬರ್ ಆಫ್ ಕಾಮರ್ಸ್, ಹುಬ್ಬಳ್ಳಿ
- ಧರ್ಮ ಚೂಡಾಮಣಿ- ಸಿರಿಗೆರೆ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ
- ಶಿಕ್ಷಣ ಸುಧಾರಕ - ಚಿತ್ರದುರ್ಗ ಶ್ರೀ ಮುರುಘರಾಜೇಂದ್ರ ಬೃಹನ್ಮಠ
- ರೇಣುಕಾಚಾರ್ಯ ಪ್ರಶಸ್ತಿ ಶ್ರೀ ರಂಭಾಪುರಿ ಪೀಠ, ಬಾಳೆಹೊನ್ನೂರು

ದಾವಣಗೆರೆ ಧಣಿ, ಹಿರಿಯ ರಾಜಕಾರಣಿ, ಶಿಕ್ಷಣ ಪ್ರೇಮಿ, ಸಮಾಜ ಸೇವಕ, ಸಮಾಜ ಸುಧಾರಕ, ಆದರ್ಶ ರಾಜಕಾರಣಿ, ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ, ಲಿಂಗಾಯತ ಸಮುದಾಯದ ನಾಯಕ, ಬಾಪೂಜಿ ಸಂಸ್ಥೆ ಸಂಸ್ಥಾಪಕ, ಕೊಡುಗೈ ದಾನಿಯೆಂದೇ ಹೆಸರಾಗಿದ್ದ 95ರ ಇಳಿವಯಸ್ಸಿನ ಶಾಮನೂರು ಶಿವಶಂಕರಪ್ಪ ಅನಾರೋಗ್ಯದಿಂದ ಭಾನುವಾರ ನಿಧನರಾಗಿದ್ದಾರೆ.

ಇವರಿಗೆ ಗಣಿ ಮತ್ತು ಭೂವಿಜ್ಞಾನ ಸಚಿವರೂ ಆಗಿರುವ ಪುತ್ರ ಎಸ್.ಎಸ್. ಮಲ್ಲಿಕಾರ್ಜುನ್, ಎಸ್.ಎಸ್. ಗಣೇಶ್, ಎಸ್.ಎಸ್.ಬಕ್ಕೇಶ್ ಸೇರಿದಂತೆ ಮೂವರು ಪುತ್ರರು. ನಾಲ್ವರು ಪುತ್ರಿಯರು ಹಾಗೂ ಸಂಸದೆ, ಸೊಸೆ ಡಾ.ಪ್ರಭಾ ಮಲ್ಲಿಕಾರ್ಜುನ್ ಇದ್ದಾರೆ. ವಯೋಸಹಜ ಅನಾರೋಗ್ಯಕ್ಕೆ ತುತ್ತಾಗಿ ಬೆಂಗಳೂರಿನ ಸ್ಪರ್ಶ ಆಸ್ಪತ್ರೆಯಲ್ಲಿ ತಿಂಗಳಿಂದ ಚಿಕಿತ್ಸೆ ಪಡೆಯುತ್ತಿದ್ದರು.

ಶಿಕ್ಷಣ, ಆರೋಗ್ಯ, ವ್ಯಾಪಾರ, ರಾಜಕೀಯ ಹೀಗೆ

ಹತ್ತಾರೂ ಕ್ಷೇತ್ರಗಳಲ್ಲಿ ಸೈ ಎನ್ನಿಸಿಕೊಂಡಿದ್ದ ಎಸ್‌ಎಸ್ ಅವರು, ಶಾಮನೂರು ಕಲ್ಲಪ್ಪ-ಸಾವಿತ್ರಮ್ಮ ದಂಪತಿ ಪುತ್ರರಾಗಿ 1931ರ ಜೂನ್ 16ರಂದು ಜನಿಸಿದರು. ಮೂಲತಃ ಉದ್ಯಮಿಯಾಗಿ ನಂತರ ರಾಜಕೀಯ ಕ್ಷೇತ್ರ ಪ್ರವೇಶಿಸಿದ ಇವರು 6 ಬಾರಿ ಶಾಸಕರಾಗಿ, ಸಚಿವರಾಗಿ ಹಾಗೂ ಒಮ್ಮೆ ಸಂಸದರಾಗಿ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ, ಸುದೀರ್ಘ ಅವಧಿಗೆ ಕೆಪಿಸಿಸಿ ಖಜಾಂಚಿಯಾಗಿದ್ದರು.

ರಾಜ್ಯದ ಮಧ್ಯಕರ್ನಾಟದ ದಾವಣಗೆರೆ ಎಂದರೆ ಎಲ್ಲರಿಗೂ ಮೊದಲಿಗೆ ನೆನಪಿಗೆ ಬರುವುದೇ ಶಾಮನೂರು ಮನೆತನ. ಮನೆತನದ ಒಡೆಯ ಶಾಮನೂರು ಶಿವಶಂಕರಪ್ಪ ಅವರ ಬಳಿ ಬೇಡಿ ಬಂದವರಿಗೆ ಇಲ್ಲ ಎಂಬುತ್ತರವೇ ಇಲ್ಲ. 95ರ ಇಳಿವಯಸ್ಸಲ್ಲೂ ಯುವಕರನ್ನೇ ನಾಚಿಸುವಂತ ಲವಲವಿಕೆ, ಖಡಕ್ ಮಾತಿನ ಮೂಲಕ ಹೆಸರಾದವರು ಶಾಮನೂರು ಶಿವಶಂಕರಪ್ಪ.

ಶಾಮನೂರು ಶಿವಶಂಕರಪ್ಪ ಅವರಿಗೆ ಕಾಯಕ ಶ್ರದ್ಧೆ, ಶ್ರಮವಹಿಸಿ ದುಡಿಯುವುದು ತಂದೆ ಶಾಮನೂರು ಕಲ್ಲಪ್ಪ, ತಾಯಿ ಸಾವಿತ್ರಮ್ಮ ಅವರಿಂದ ಪಡೆದ ಬಳುವಳಿ. ತಂದೆ-ತಾಯಿ ಹಾಕಿಕೊಟ್ಟ ಮಾರ್ಗದಲ್ಲಿಯೇ ಕೆಲಸವೇ ದೇವರೆಂದು ಬಗೆದು ಕಷ್ಟಪಟ್ಟು ದುಡಿದವರು.

ಆರಂಭದಲ್ಲಿಯೇ ಚಿಕ್ಕಪ್ಪನವರ ಕಾಳುಕಡಿ ಅಂಗಡಿಯಲ್ಲಿ ಕೆಲಸಕ್ಕಿದ್ದು ಅಪಾರ ಅನುಭವ ಪಡೆದು ವ್ಯಾಪಾರಕ್ಕಾಗಿ ದೂರದೂರುಗಳಿಗೆ ತೆರಳಿ ಲಾಭ ಮಾಡಿಕೊಟ್ಟು ಮೆಚ್ಚುಗೆ ಪಡೆದವರು, ನಂತರ ಸ್ವಂತ ಅಂಗಡಿ ಆರಂಭಿಸಿ ಕ್ರಮೇಣ ಕೈಗಾರಿಕಾ ಕ್ಷೇತ್ರಕ್ಕೆ ಕಾಲಿಟ್ಟು ಅಕ್ಕಿ ಮತ್ತು ಸಕ್ಕರೆ ಉದ್ಯಮದಲ್ಲಿ ಯಶಸ್ಸು ಸಾಧಿಸಿ ತದನಂತರ ರಾಜಕೀಯ ಪ್ರವೇಶಿಸಿ ಯಶಸ್ಸು ಕಂಡವರು.

ಶ್ರೀಮಂತಿಕೆ, ಹಣ, ಸಂಪತ್ತಿನ ಒಡೆಯರಾದರೂ ತಮ್ಮ ಮೂಲಕ ಕಾಯಕ ಮರೆತವರಲ್ಲ, ತೀರಾ ಇತ್ತೀಚೆಗೆ ಅನಾರೋಗ್ಯದ ನಡುವೆಯೂ ನಗರದ ಚೌಕಿಪೇಟೆಯಲ್ಲಿನ ತಮ್ಮ ಅಂಗಡಿಗೆ ಹೋಗಿ ವ್ಯಾಪಾರ ಮಾಡುವುದು ಅವರ ನಿತ್ಯದ ದಿನಚರಿಯಲ್ಲೊಂದಾಗಿತ್ತು. ಮೈಗೆ ವಯಸ್ಸಾದರೂ ಮನಸ್ಸು ಇನ್ನೂ ಹದಿಹರೆಯ ದವರಂತೆ ಇದ್ದ ಕಾರಣ ನಿತ್ಯ ತಮ್ಮ ಸ್ನಾನ-ಪೂಜೆ, ಉಪಾಹಾರದ ನಂತರ ಮನೆಯಲ್ಲಿಯೇ ಸಾರ್ವಜನಿರ ಅಹವಾಲು ಆಲಿಸುತ್ತ, ಪರಿಹಾರ ಕಲ್ಪಿಸುತ್ತಿದ್ದರು.

ದೇಶದ ಹಿರಿಯ ಶಾಸಕ

ಎಸ್‌ಎಸ್ ಅವರು ನಾಲ್ಕು ಬಾರಿ ಶಾಸಕರಾಗಿ, ಸಚಿವರಾಗಿ, ಒಂದು ಬಾರಿ ಸಂಸದರಾಗಿ ದಾವಣಗೆರೆ ಜಿಲ್ಲೆಗೆ ಹಲವು ಕೊಡುಗೆ ನೀಡಿದ್ದಾರೆ. ಅವರ ರಾಜಕೀಯ ಆರಂಭವಾಗಿದ್ದೇ ಕಾಂಗ್ರೆಸ್‌ನಿಂದ. ಅಂದಿನಿಂದ ಕೊನೆಯವರೆಗೂ ಪಕ್ಷ, ಸಿದ್ಧಾಂತ ಬದಲಿಸಲಿಲ್ಲ. ಅಧಿಕಾರಕ್ಕಾಗಿ ದುಂಬಾಲು ಬೀಳುವ, ಯಾರೊಬ್ಬರ ಕಾಲೆಳೆ ಯುವ, ಪಕ್ಷಾಂತರ ಮಾಡುವ ಕೆಲಸಕ್ಕೆ ಕೈ ಹಾಕ ಲಿಲ್ಲ. ಹಾಗೇನಾದರೂ ಮಾಡಿದ್ದರೆ ಅವರು ಎಂದೋ ಮುಖ್ಯಮಂತ್ರಿ ಆಗುತ್ತಿದ್ದರು. ಸರಕಾರ ಯಾವುದೇ ಪಕ್ಷದ್ದಿರಲಿ, ತಮ್ಮ ಕ್ಷೇತ್ರಕ್ಕೆ ಕೆಲಸ ಮಾಡಿಸಿಕೊಳ್ಳುವ ಛಾತಿ ಅವರದು. ಈ ಕಾರಣ ಕ್ಕಾಗಿಯೇ ಎಲ್ಲ ಪಕ್ಷದವರೂ ಅವರನ್ನು ಗೌರವಿಸು ತ್ತಾರೆ. 2023ರಲ್ಲಿ ದಾವಣಗೆರೆ ದಕ್ಷಿಣ ವಿಧಾನ ಸಭಾ ಕ್ಷೇತ್ರದಿಂದ 28 ಸಾವಿರಕ್ಕೂ ಅಧಿಕ ಮತ ಗಳಿಂದ ಮರು ಆಯ್ಕೆಯಾಗಿ, ದೇಶದ ಅತ್ಯಂತ (95 ವರ್ಷ) ಹಿರಿಯ ಶಾಸಕ ಎಂಬ ದಾಖಲೆಗೆ ಭಾಜನರಾದ ವರು.. ಹೀಗಾಗಿ, ಅವರೊಬ್ಬ ದಣಿ ವರಿಯದ ಕಾಯಕಯೋಗಿ ಆಗಿದ್ದರು.

ಕುಟುಂಬದ ಹಿನ್ನೆಲೆ

ಪಾರ್ವತಮ್ಮ ಎಂಬುವವರನ್ನು ಬಾಳಸಂಗಾತಿಯಾಗಿ ಪಡೆದಿದ್ದ ಶಾಮನೂರು ಶಿವಶಂಕರಪ್ಪ ಅವರಿಗೆ ಮೂವರು ಗಂಡು ಮತ್ತು ನಾಲ್ಕು ಹೆಣ್ಣುಮಕ್ಕಳಿದ್ದಾರೆ. ಹಿರಿಯ ಪುತ್ರ ಬಕ್ಕೇಶ್ ಮೊದಲಿಗೆ ರಾಜಕೀಯ ಪ್ರವೇಶಿಸಿದರಾದರೂ ಕಾರಣಾಂತರದಿಂದ ಹಿಂದೆ ಸರಿದರು. ಇನ್ನೋರ್ವ ಪುತ್ರ ಎಸ್.ಎಸ್. ಗಣೇಶ್ ಉದ್ಯಮಿಯಾಗಿ ಗುರುತಿಸಿಕೊಂಡಿ ದ್ದಾರೆ. ಮೂರನೇ ಪುತ್ರ ಶಾಸಕ ಎಸ್.ಎಸ್. ಮಲ್ಲಿ ಕಾರ್ಜುನ ತಂದೆಯಂತೆ ಜನಮನ ಗೆದ್ದು ರಾಜಕೀಯದಲ್ಲಿ ಉಳಿದಿದ್ದಾರೆ. ಸೊಸೆ ಪ್ರಭಾ ಮಲ್ಲಿಕಾರ್ಜುನ್ ಸಂಸದೆಯಾಗಿದ್ದಾರೆ. 2008ರ ಹೊತ್ತಿಗಾಗಲೇ ಪತ್ನಿ ವಿಯೋಗದಿಂದ ಕುಸಿದಿದ್ದ ಶಾಮನೂರು ನಂತರ ಸಮಾಜಸೇವೆ, ರಾಜಕೀಯದಲ್ಲಿ ತೊಡಗಿಸಿಕೊಂಡರು. ಈಗ ಮಾಜಿ ಸಿಎಂ ಜಗದೀಶ್ ಶೆಟ್ಟರ್, ಬಸವರಾಜ್ ಬೊಮ್ಮಾಯಿ, ಮಾಜಿ ಸಚಿವ ಎಂ.ಬಿ.ಪಾಟೀಲ್ ಅವರ ಕುಟುಂಬದೊಂದಿಗೆ ನೆಂಟಸ್ಥಿಕೆ ಬೆಳೆಸಿದ್ದಾರೆ.

ವಾಣಿಜ್ಯ ನಗರಿಯಾಗಿದ್ದ ದಾವಣಗೆರೆಯನ್ನು ಭರ್ಜರಿ ವ್ಯಾಪಾರ ನಗರಿಯನ್ನಾಗಿಸಿದ್ದಲ್ಲದೆ, ಮೌಲಿಕ ವಿದ್ಯಾ ನಗರಿಯನ್ನಾಗಿಯೂ ಮಾಡಿದ ಕೀರ್ತಿ ಶಿವಶಂಕರಪ್ಪನವರದು. ವಿದ್ಯಾಕ್ಷೇತ್ರಕ್ಕೆ ಬಹು ದೊಡ್ಡ ಕೊಡುಗೆ ನೀಡಿ ದರು. ಒಂದಷ್ಟು ಕಾಲ ಹಲವು ಪ್ರಮುಖ ರಾಜಕಾರಣಿಗಳನ್ನು ಬೆರಳ ತುದಿಯಲ್ಲಿ ಕುಣಿಸಿದವರು. ಅನೇಕ ಸತ್ಪಾತ್ರರಿಗೆ ಹಣ, ಸೌಲಭ್ಯ ಇತ್ಯಾದಿ ನೆರವು ನೀಡಿದರು. ದಾವಣಗೆರೆಯಲ್ಲಿ ಶಿವಶಂಕರಪ್ಪನವರ ಬಗ್ಗೆ ಒಂದು ಜೋಕ್ ಹರಿದಾಡು ತ್ತಿತ್ತು. ಗೆಳೆಯರೊಡನೆ ಅವರು ತಾಜ್ ಮಹಲ್ ನೋಡಲು ಹೋದರಂತೆ. ಆದರೆ, ತಾಜ್ ಮಹಲ್ ಎದುರಿಗೆ ಕುಳಿತು, ಅದರ ಸೌಂದರ್ಯವನ್ನು ಸವಿಯುವ ಬದಲು ಅಕ್ಕಿ ವ್ಯಾಪಾರದ ಬಗ್ಗೆ ಗೆಳೆಯರೊಡನೆ ಮಾತಾಡತೊಡಗಿದರಂತೆ. ಇಷ್ಟೊಂದು ಅವರ ಅಕ್ಕಿ ವ್ಯಾಪಾರ ಪ್ರಸಿದ್ಧಿ ಆಗಿತ್ತು.

-ಎಚ್.ಆನಂದರಾಮ ಶಾಸ್ತ್ರೀ, ಹಿರಿಯ ಸಾಹಿತಿ

1969ರಲ್ಲಿ ರಾಜಕೀಯ ಇತಿಹಾಸ

1969ರಲ್ಲಿ ರಾಜಕೀಯ ಪ್ರವೇಶಿಸಿದ ಶಾಮನೂರು ಶಿವಶಂಕರಪ್ಪ ಅವರು, ಅವಿಭಜಿತ ಚಿತ್ರದುರ್ಗ ಜಿಲ್ಲೆಯ ದಾವಣಗೆರೆ ನಗರಸಭಾ ಸದಸ್ಯರಾದರು. 1972ರಲ್ಲಿ ನಗರಸಭೆ ಅಧ್ಯಕ್ಷರಾದರು. ನಂತರ ಸುಮಾರು ಎಂಟು ವರ್ಷಗಳ ಕಾಲ ರಾಜಕೀಯದಿಂದ ದೂರ ಉಳಿದಿದ್ದರು. 1980ರಲ್ಲಿ ದೇವರಾಜ್ ಅರಸು ಕಾಂಗ್ರೆಸ್ ಮತ್ತು ಇಂದಿರಾ ಕಾಂಗ್ರೆಸ್ ಎಂದು ಇಬ್ಭಾಗವಾದ ಕಾಲದಲ್ಲಿ ಅರಸು ಅವರಿಗೆ ಪ್ರೇರಿತರಾಗಿದ್ದ ಶಿವಶಂಕರಪ್ಪ ಅರಸು ಕಾಂಗ್ರೆಸ್‌ಗೆ ಸೇರ್ಪಡೆಯಾಗಿ ಚಿತ್ರದುರ್ಗದ ಲೋಕಸಭಾ ಕ್ಷೇತ್ರ ಚುನಾವಣೆಗೆ ನಿಂತು ಸೋಲು ಅನುಭವಿಸಿದ್ದರು.

ಅದಾದ ಬಳಿಕ ಮತ್ತೆ ರಾಜಕೀಯದಿಂದ ವಿಶ್ರಾಂತಿ ಪಡೆದ ಶಾಮನೂರು 1994ರಲ್ಲಿ ದಾವಣಗೆರೆ ಶಾಸಕರಾಗಿ ಗೆಲುವು ಕಂಡು ಅಲ್ಲಿಂದ ಮತ್ತೆ ಹಿಂತಿರುಗಿ ನೋಡದೆ ತಮ್ಮ ರಾಜಕೀಯದ ಯುಗ ಆರಂಭಿಸಿದರು.

1997ರಲ್ಲಿ ಚಿತ್ರದುರ್ಗದಿಂದ ವಿಭಜಿತಗೊಂಡು ದಾವಣಗೆರೆ ಸ್ವತಂತ್ರ ಜಿಲ್ಲೆಯಾಗಿ ಘೋಷಿಸಲ್ಪಟ್ಟಾಗ ಮತ್ತೆ ದಾವಣಗೆರೆ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿ ಸಂಸದರಾಗಿ ಆಯ್ಕೆಯಾಗಿ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದರು.

1999ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಸೋಲುಂಡ ಶಾಮನೂರು 2004ರಲ್ಲಿ ನಡೆದ ವಿಧಾನಸಭಾ ಕ್ಷೇತ್ರ ಚುನಾವಣೆಯಲ್ಲಿ ದಾವಣಗೆರೆಯಿಂದ ಗೆದ್ದು ಗೆಲುವು ಅಪ್ಪಿಕೊಂಡ ನಂತರ ಅಲ್ಲಿಂದ ಕೊನೆಯವರೆಗೆ ಸೋಲಿನ ಕಡೆ ತಿರುಗಿ ನೋಡಿದ್ದೇ ಇಲ್ಲ. 2008ರಲ್ಲಿ ಪ್ರಾದೇಶಿಕವಾರು ದಾವಣಗೆರೆ ದಕ್ಷಿಣ ಮತ್ತು ಉತ್ತರ ಎಂದು ಕ್ಷೇತ್ರ ವಿಂಗಡಣೆಯಾದಾಗ ದಾವಣಗೆರೆ ದಕ್ಷಿಣದಿಂದ ಸತತವಾಗಿ 2023ರ ಇಲ್ಲಿಯವರೆಗೆ 4ನೇ ಬಾರಿ ಶಾಮನೂರು ಶಿವಶಂಕರಪ್ಪ ಗೆಲ್ಲುತ್ತಲೇ ಬಂದಿದ್ದರು. ಮೋದಿ ಅಲೆಯೂ ಕೂಡ ಅವರಿಗೆ ಬಾಧಿತವಾಗಿಲ್ಲ. ದಾವಣಗೆರೆ ದಕ್ಷಿಣದಲ್ಲಿ ಅವರ ಮುಂದೆ ಎಂಥ ಎದುರಾಳಿಯೇ ಬಂದರೂ ಅವರನ್ನು ಧೂಳಿಪಟ ಮಾಡುವಷ್ಟು ಸಾಮರ್ಥ್ಯವಿರುವ ಅಭ್ಯರ್ಥಿ ಎಂದೇ ಶಾಮನೂರು ಹೆಸರು ಮಾಡಿದ್ದರು. ಅಲ್ಲದೇ, ಅನ್ಯ ಪಕ್ಷಗಳಿಗೆ ಜಿಗಿಯದೇ ಪಕ್ಷ ನಿಷ್ಠೆತೋರಿರುವ ಕಾರಣಕ್ಕಾಗಿಯೇ ಪಕ್ಷ ಅವರನ್ನು ಕೈಬಿಡದೆ 92 ರ ವಯಸ್ಸಿನಲ್ಲೂ ಟಿಕೆಟ್ ನೀಡಿ ಗೌರವ ನೀಡಿದ್ದು, ಆ ವಯಸ್ಸಲ್ಲೂ ಶಾಮನೂರು ಗೆದ್ದು ಬೀಗಿದ್ದು, ಅವರು ಗಳಿಸಿರುವ ಜನಶಕ್ತಿ ಎಷ್ಟೆಂಬುದಕ್ಕೆ ಸಾಕ್ಷಿ.

30 ವರ್ಷ ಖಜಾಂಚಿಯಾಗಿ ದಾಖಲೆ

ಕಾಯಕ ತಪಸ್ವಿ ಡಾ.ಶಾಮನೂರು ಶಿವಶಂಕರಪ್ಪ ಅವರದು ವಿಶಿಷ್ಟ ವ್ಯಕ್ತಿತ್ವ, ಅವರು ಸರ್ವ ಜನಾಂಗದ ನಾಯಕರಾಗಿ ದ್ದವರು. ಅವರ ವಿಶಿಷ್ಟ ಗುಣ ಎಂದರೆ ಯಾವುದನ್ನೂ ಮೇಲು-ಕೀಳು ಎಂದು ಪರಿಗಣಿಸದೆ ಸಮಭಾವ ಚಿತ್ರದಿಂದ ನೋಡುವ ದೃಷ್ಟಿಕೋನ. ಸ್ಥಾನ ಯಾವುದೇ ಇರಲಿ, ಆ ಸ್ಥಾನಕ್ಕೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುವುದು ಅವರ ವ್ಯಕ್ತಿತ್ವದ ಗುಣ. ಈ ಕಾರಣದಿಂದಲೇ ಅವರು ದಾಖಲೆಯ 30 ವರ್ಷಗಳ ಕಾಲ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಖಜಾಂಚಿಯಾಗಿ ಸೇವೆ ಸಲ್ಲಿಸಿದವರು.

ದಾವಣಗೆರೆಗೆ ವಿದ್ಯಾಕಾಶಿ

ಕೊಡುಗೈ ದಾನಿ, ಸರಳ ವ್ಯಕ್ತಿತ್ವದ ರಾಜಕೀಯ ಧುರೀಣ ಶಾಮನೂರು ಶಿವಶಂಕರಪ್ಪ ರಾಜಕೀಯ ಮಾತ್ರ ವಲ್ಲದೇ ವ್ಯಾಪಾರೋದ್ಯಮದಲ್ಲೂ ಸೈ ಎನ್ನಿಸಿ ಕೊಂಡವರು. ಧಾರವಾಡಕ್ಕಷ್ಟೇ ಸೀಮಿತ ವಾಗಿದ್ದ ವಿದ್ಯಾಕಾಶಿ ಬಿರುದನ್ನು ದಾವಣಗೆರೆಯಾ ದ್ಯಂತ ಶಿಕ್ಷಣ ಸಂಸ್ಥೆಗಳನ್ನು ತೆರೆದು ದಾವಣಗೆರೆಗೆ 'ವಿದ್ಯಾಕಾಶಿ' ಎಂಬ ಹೆಸರು ಬರಲು ಶಾಮನೂರು ಕೊಡುಗೆ ಅಪಾರ. ಶಾಮನೂರು ಶಿವಶಂಕರಪ್ಪ ಕೇವಲ ರಾಜಕೀಯ ಮಾತ್ರವಲ್ಲದೇ ವಿದ್ಯಾದಾನ ಮಾಡುವಲ್ಲಿಯೂ ಮಹತ್ವದ ಪಾತ್ರ ವಹಿಸಿದ್ದು, ಬಾಪೂಜಿ ವಿದ್ಯಾಸಂಸ್ಥೆಗೆ ಕಾರ್ಯದರ್ಶಿಯಾದ ನಂತರ ಸುಮಾರು 60 ಶಾಲೆ-ಕಾಲೇಜು, ಜೆಜೆಎಂಎಂ ಮತ್ತುಎಸ್ ಎಸ್ ಐಎಂಎಸ್ ಎಂಬ ಎರಡು ಮೆಡಿಕಲ್ ಕಾಲೇಜು ತೆರೆದು ವೈದ್ಯಕೀಯ ಶಿಕ್ಷಣ ಪಡೆಯಬೇಕೆಂಬ ವಿದ್ಯಾ ರ್ಥಿಗಳ ಹಂಬಲಕ್ಕೆ ಆಸರೆಯಾದರು. ಮಧ್ಯಕರ್ನಾಟಕ ದಲ್ಲಿ ಮೆಡಿಕಲ್ ಕಾಲೇಜು ತೆರೆದಿರುವುದರಿಂದ ವಿವಿಧ ಜಿಲ್ಲೆಯ ಮತ್ತು ವಿದೇಶದಿಂದಲೂ ಬಂದ ವಿದ್ಯಾರ್ಥಿ ಗಳಿಗೆ ಇಲ್ಲಿವೈದ್ಯಕೀಯ ಶಿಕ್ಷಣದ ಕನಸಿಗೆ ರೆಕ್ಕೆ ಮೂಡಿಸಿದ್ದಾರೆ. ಶಾಮನೂರು ಶಿವಶಂಕರಪ್ಪ ಅವರು ಹಲ ವಾರು ದೇವಸ್ಥಾನಗಳ ಟ್ರಸ್ಟ್‌ನ ಅಧ್ಯಕ್ಷರಾಗಿ ಅನೇಕ ದೇವಾಲಯಗಳ ಜೀರ್ಣೋದ್ಧಾರ ಮಾಡಿ ದ್ದಾರೆ. ಕಷ್ಟ ಹೇಳಿಕೊಂಡು ಬಂದ ಬಡಜನರಿಗೆ ನೆರವಿನ ಹಸ್ತ ಚಾಚುವ ಶಾಮನೂರು ಶತಮಾನದ ವ್ಯಕ್ತಿ, ಅಮೃತ ಪುರುಷನೆಂದೇ ಜನಜನಿತವಾಗಿದ್ದರು.

ಕಾಯಕವೇ ಕೈಲಾಸ ತತ್ವ

ಜೂನ್ 16, 2025ಕ್ಕೆ 95ನೇ ವರ್ಷಕ್ಕೆ ಕಾಲಿಟ್ಟಿದ್ದರು. ಶಾಮನೂರು ಶಿವಶಂಕರಪ್ಪ ಅವರ ಜೀವನವೇ ರೋಚಕ. ಅಪ್ಪ ಕಷ್ಟಪಟ್ಟು ಆರಂಭಿಸಿದ ವ್ಯವಹಾರವನ್ನೇ ತಮ್ಮ ಶಿಕ್ಷಣದ ನಂತರ ಮುಂದುವರೆಸಿ, ಬಸವಣ್ಣನವರ 'ಕಾಯಕವೇ ಕೈಲಾಸ' ತತ್ವದಿಂದ ಹಂತಹಂತವಾಗಿ ಒಂದೊಂದೇ ಮೆಟ್ಟಿಲೇರುತ್ತ ರಾಜ್ಯದ ಪ್ರತಿಷ್ಠಿತ ಉದ್ಯಮಿಗಳ ಪಟ್ಟಿಗೆ ಸೇರ್ಪಡೆಯಾದವರು, ಇಂದಿನ ಯುವ ಉದ್ಯಮಿದಾರರಿಗೆ ಆದರ್ಶವಷ್ಟೇ ಅಲ್ಲ, ವ್ಯವಹಾರ ನಿರ್ವಹಣೆ ವಿದ್ಯಾರ್ಥಿಗಳಿಗೆ ಅವರ ಜೀವನ ಪಠ್ಯವಸ್ತುವೂ ಆಗಬಲ್ಲದು. ತಮ್ಮ ವ್ಯವಹಾರದ ಜತೆಗೆ ಸಾಮಾಜಿಕ ಸೇವಾ ಕಾರ್ಯಗಳಲ್ಲೂ ಅವರ ಹೆಸರು ಮುಂಚೂಣಿಯಲ್ಲಿದೆ. ಹತ್ತಾರೂ ಶಿಕ್ಷಣ ಸಂಸ್ಥೆ ಸ್ಥಾಪಿಸಿ ಶಿಕ್ಷಣ ಸುಧಾರಕರೆನ್ನಿಸಿಕೊಂಡಿದ್ದಾರೆ.

ಶಾಮನೂರು ಶಿವಶಂಕರಪ್ಪನವರ ಅಗಲಿಕೆಯ ಸುದ್ದಿ ಅತೀವ ಆಘಾತ ತಂದಿದೆ. ಅಖಿಲಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿ ಇಡೀ ಸಮಾಜಕ್ಕೆ ಅವರ ನೇತೃತ್ವ, ಮಾರ್ಗದರ್ಶನ, ಕೊಡುಗೆ ಅಸಾಧಾರಣವಾದದ್ದು. ತಮ್ಮ ಸುದೀರ್ಘ ರಾಜಕೀಯ ಜೀವನದಲ್ಲಿ ಪಕ್ಷಾತೀತವಾಗಿ ಅವರು ಎಲ್ಲರ ಗೌರವಕ್ಕೆ ಪಾತ್ರರಾಗಿದ್ದರು.

ಬಿ.ವೈ.ರಾಘವೇಂದ್ರ ಸಂಸದ

ಶಾಮನೂರು ಶಿವಶಂಕರಪ್ಪ ಅವರ ನಿಧನದ ಸುದ್ದಿ ಕೇಳಿ ಅತೀವ ದುಃಖವಾಯಿತು. ಸಮಾಜ ಸೇವೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಶಿವಶಂಕರಪ್ಪನವರು ಶೈಕ್ಷಣಿಕ ಕ್ಷೇತ್ರಕ್ಕೆ ವಿಶೇಷ ಕೊಡುಗೆ ನೀಡಿದ್ದರು. ಅವರ ಅಗಲಿಕೆಯು ನಾಡಿಗೆ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ತುಂಬಲಾರದ ನಷ್ಟವುಂಟು ಮಾಡಿದೆ. ಭಗವಂತ ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ.

ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರು, ನಮ್ಮ ಸಂಬಂಧಿಕರೂ ಶಾಮನೂರು ಶಿವಶಂಕರಪ್ಪ ಅವರ ನಿಧನದ ಸುದ್ದಿ ತಿಳಿದು ಅತೀವ ದುಃಖವಾಗಿದೆ. ಅವರ ಸೇವೆ ಕೊಡುಗೆಗಳು ಸದಾ ಸ್ಮರಣೀಯ. ಅವರ ಅಗಲಿಕೆಯಿಂದ ರಾಜ್ಯಕ್ಕೆ ಅಪಾರ.

ಎಂ.ಬಿ.ಪಾಟೀಲ್ ಸಚಿವ

ನಾಡಿನ ಹಿರಿಯ ರಾಜಕಾರಣಿಗಳು, ಮಾಜಿ ಮಂತ್ರಿಗಳು, ಉದ್ಯಮಿಗಳು ಆಗಿದ್ದ ಸರಳ ಸಜ್ಜನಿಕೆಯ ನಾಯಕ ಶ್ಯಾಮನೂರು ಶಿವಶಂಕರಪ್ಪನವರ ನಿಧನದ ಸುದ್ದಿ ಕೇಳಿ ಬಹಳ ದುಃಖವಾಯಿತು. ವೈಯಕ್ತಿಕವಾಗಿ ನಾನು ಬಹಳ ಗೌರವಿಸುತ್ತಿದ್ದ ನಾಯಕರು.

ಎಚ್.ಡಿ.ಕುಮಾರಸ್ವಾಮಿ,ಕೇಂದ್ರ ಸಚಿವ

ದಾನ ಧರ್ಮಕ್ಕೆ ಎತ್ತಿದ ಕೈ

ದಾವಣಗೆರೆ ಹಿಂದಿನಿಂದಲೂ ದಾನ ಧರ್ಮಕ್ಕೆ ಹೆಸರುವಾಸಿ. ಇಲ್ಲಿನ ಚಿಗಟೇರಿ ಕುಟುಂಬ, ರಾಜನಹಳ್ಳಿ ಕುಟುಂಬಗಳಂತೆ ಶಾಮನೂರು ಶಿವಶಂಕರಪ್ಪ ಅವರ ಕುಟುಂಬವೂ ದಾನಿಗಳ ಸಾಲಿಗೆ ಸೇರಿದೆ. ದಾವಣಗೆರೆ ದಣಿ, ಕೊಡುಗೈ ದಾನಿ ಎಂದೆಲ್ಲಾ ಬಿರುದಾಂಕಿತ ಶಾಮನೂರು ಶಿವಶಂಕರಪ್ಪ ಅವರು, ತಮ್ಮ ರಾಜಕೀಯ, ಉದ್ಯಮದ ಒಂದು ಭಾಗವನ್ನು ಜನಸಾಮಾನ್ಯರ ಕಲ್ಯಾಣಕ್ಕೆ ವ್ಯಯ ಮಾಡುತ್ತ ಬಂದವರು. ದಾನ-ಧರ್ಮಗಳಿಗೆ ಅವರದು ಎತ್ತಿದ ಕೈ. ಉಚಿತ ಕಲ್ಯಾಣ ಮಂಟಪ, ಮುಂಟಪ, ಸ್ಕಾಲರ್‌ಶಿಪ್ ಜತೆಗೆ, ನಗರದಲ್ಲಿ ಬಡವರ ಶುಭ ಕಾರ್ಯ ನೆರವೇರಿಸಲು ಎರಡು ಉಚಿತ ಕಲ್ಯಾಣ ಮಂಟಪ ನಿರ್ಮಿಸಿದ್ದಾರೆ. ಜತೆಗೆ, ಜನ ಕಲ್ಯಾಣ ಟ್ರಸ್ಟ್' ಸ್ಥಾಪಿಸಿ 5 ಕೋಟಿ ರು. ಠೇವಣಿ ಇರಿಸಿ ಅದರಿಂದ ಬರುವ ಬಡ್ಡಿ ಹಣದಲ್ಲಿ ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳಿಗೆ ಪ್ರತಿವರ್ಷ ಸ್ಕಾಲರ್‌ಶಿಪ್ ನೀಡಿ ಅವರ ಮುಂದಿನ ಶಿಕ್ಷಣಕ್ಕೆ ನೆರವಾಗುತ್ತಿದ್ದಾರೆ. ಅಲ್ಲದೆ, ಪ್ರತ್ಯೇಕವಾಗಿ 1 ಕೋಟಿ ರು.ಠೇವಣಿ ಇರಿಸಿ ಬರುವ ಬಡ್ಡಿ ಹಣದಲ್ಲಿ ಜಿಲ್ಲೆಯ ಪತ್ರಕರ್ತರ ಮಕ್ಕಳ ಶಿಕ್ಷಣ ಮತ್ತು ವೈದ್ಯಕೀಯ ವೆಚ್ಚಕ್ಕೆ ನೀಡುತ್ತಿದ್ದರು.

ಪ್ರತ್ಯೇಕ ಧರ್ಮದ ಕೂಗು

ಶಾಮನೂರು ಶಿವಶಂಕರಪ್ಪ 2012ರಿಂದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ರಾಗಿದ್ದರು. ಲಿಂಗಾಯತ ಪ್ರತ್ಯೇಕ ಧರ್ಮದ ಕೂಗು ಎದ್ದಾಗ 'ವೀರಶೈವ ಲಿಂಗಾಯತ' ಎರಡೂ ಒಂದೇ ಎಂದು ಪ್ರಬಲವಾಗಿ ಪ್ರತಿಪಾದಿಸಿದರು. ಇವರ ಅವಧಿಯಲ್ಲಿ ವೀರಶೈವ ಮಹಾಸಭಾ ವೀರಶೈವ ಲಿಂಗಾಯತ ಮಹಾಸಭಾ ಎಂಬುದಾಗಿ ಪರಿವರ್ತನೆಯಾಯಿತು. ವೀರಶೈವ ಲಿಂಗಾಯತ ಮಠಾಧೀಶರನ್ನು ಒಗ್ಗೂಡಿಸಲು ಶಿವಶಂಕರಪ್ಪ ಮುಂದಾಗಿದ್ದರು. ಪಂಚಪೀಠ ಮಠಾಧೀಶರ ಸಮ್ಮೇಳವನ್ನು ಆಯೋಜಿಸಿ ಯಶಸ್ಸು ಕಂಡಿದ್ದರು. ವಿರಕ್ತ ಮತ್ತು ಗುರುಪರಂಪರೆ ಒಗ್ಗೂಡಿದರೆ ಸಮಾಜ ಇನ್ನಷ್ಟು ಬಲವಾಗುತ್ತದೆ ಎಂಬ ಬಲವಾದ ನಂಬಿಕೆ ಅವರದಾಗಿತ್ತು.

ದಾವಣಗೆರೆ ವಿವಿ ಪರೀಕ್ಷೆ ಮುಂದೂಡಿಕೆ

ದಾವಣಗೆರೆ: ಹಿರಿಯ ರಾಜಕೀಯ ಮುತ್ಸದ್ದಿ, ಶಿಕ್ಷಣ ಚಿಂತಕ, ಮಾಜಿ ಸಚಿವ, ಶಾಸಕ ಶಾಮನೂರು ಶಿವಶಂಕರಪ್ಪ ಅವರ ನಿಧನದ ಹಿನ್ನೆಲೆಯಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ಸೋಮವಾರ ರಜೆ ಘೋಷಿಸಲಾಗಿದೆ. ಪಿಎಚ್.ಡಿ. ಕೋರ್ಸ್ ವರ್ಕ್ ಪರೀಕ್ಷೆ, ವಿಶ್ವವಿದ್ಯಾನಿಲಯದ ವ್ಯಾಪ್ತಿಯ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಸೋಮವಾರ ನಡೆಯಬೇಕಿದ್ದ ಎಲ್ಲ ಪರೀಕ್ಷೆಗಳನ್ನು ಮುಂದೂಡಲಾಗಿದೆ. ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಮುಖ್ಯ ಆವರಣ, ಚಿತ್ರದುರ್ಗ ಸ್ನಾತಕೋತ್ತರ ಕೇಂದ್ರ, ಘಟಕ ಕಾಲೇಜುಗಳಾದ ದೃಶ್ಯಕಲಾ ಮಹಾವಿದ್ಯಾಲಯ, ಹರಿಯಬ್ಬೆ ಪದವಿ ಕಾಲೇಜು ಮತ್ತು ತುರವನೂರು ಪದವಿ ಕಾಲೇಜುಗಳಿಗೂ ರಜೆ ನೀಡಲಾಗಿದೆ. ಪರೀಕ್ಷೆಯ ನಂತರ ಪ್ರಕಟಸಲಾಗುವುದು ಎಂದು ತಿಳಿಸಲಾಗಿದೆ.

ಶಾಮನೂರು ಕುಟುಂಬದ ಜತೆಗೆ ಸಿದ್ದರಾಮಯ್ಯ, ಅಂಬರೀಶ್.

ಪಕ್ಷಾತೀತ ನಾಯಕ, ನೇರ ನಿಷ್ಠುರವಾದಿ

ಶಾಮನೂರು ಶಿವಶಂಕರಪ್ಪ ಅವರು ಪಕ್ಷಾತೀತ ನಾಯಕ. ಇದ್ದದ್ದನ್ನು ಇದ್ದಂಗೆ ಹೇಳುವ ನೇರ ಮತ್ತು ನಿಷ್ಠುರವಾದಿ ಆಗಿರುವ ಅವರು ತಮ್ಮದೇ ಕಾಂಗ್ರೆಸ್ ಪಕ್ಷದ ನಾಯಕರು ತಪ್ಪು ಮಾಡಿದಾಗ ಮುಲಾಜಿಲ್ಲದೆ ಖಂಡಿಸಿದವರು. ಅನೇಕ ಬಾರಿ ತಮ್ಮದೇ ಸರ್ಕಾರದ ತೀರ್ಮಾನಗಳನ್ನೇ ಖಂಡಿಸಿದ್ದವರು. ಜನರಿಗೆ ಕೊಟ್ಟ ಮಾತಿನಂತೆ ಪ್ರತಿಯೊಬ್ಬ ರಾಜಕಾರಣಿಯೂ ನಡೆದುಕೊಳ್ಳಬೇಕು ಎಂಬುದು ಅವರ ತತ್ವ. ಬಸವಣ್ಣನವರ ತತ್ವಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಬಂದಿರುವ ಅವರು ಅನುಭವದ ಗಣಿಯೇ ಆಗಿದ್ದರು. ಶಾಮನೂರು ಶಿವಶಂಕರಪ್ಪನವರು ಕಾಂಗ್ರೆಸ್ ಪಕ್ಷದಲ್ಲಿದ್ದರೂ ಎಲ್ಲ ಪಕ್ಷಗಳ ನಾಯಕರೊಂದಿಗೂ ಅವರು ಸ್ನೇಹಹಸ್ತ ಚಾಚಿದೆ.



3ನೇ ಬಾರಿ ಅಧ್ಯಕ್ಷ

ಶಾಮನೂರು ಶಿವಶಂಕರಪ್ಪ ಅವರು ಭಾರತ ವೀರಶೈವ-ಲಿಂಗಾಯತ ಮಹಾಸಭಾದ ಅಧ್ಯಕ್ಷರಾಗಿ ಅವರು ಆಯ್ಕೆಯಾದ ನಂತರ ಸಮಾಜದ ಒಗ್ಗಟ್ಟಿಗೆ ಶ್ರಮಿಸುತ್ತಿದ್ದಾರೆ. ಲಿಂಗಾಯತ-ವೀರಶೈವ ಬೇರೆ ಬೇರೆ ಎಂದವರಿಗೆ ಮಾತಿನ ಛಡಿ ಏಟು ನೀಡಿದ್ದಾರೆ. ಮಠ-ಮಾನ್ಯಗಳು, ಸ್ವಾಮೀಜಿಗಳು ಒಂದಾಗಲು ಶ್ರಮಿಸುತ್ತಿದ್ದರು.

60 ಸಾವಿರ ಡೋಸ್ ಖರೀದಿ

ಈ ಹಿಂದೆ ಒಕ್ಕರಿಸಿದ ಮಹಾಮಾರಿ ಕೊರಾನಾದಿಂದ ಲಕ್ಷಾಂತರ ಜನ ಕೋವಿಡ್‌ನಿಂದ ಸಾವಿಗೀಡಾದರು. ಈ ಮಹಾಮಾರಿಗೆ ಲಸಿಕೆ ಬಂದ ಮೇಲೆ ದಾವಣಗೆರೆ ದಣಿ ಶಾಮನೂರು ಶಿವಶಂಕರಪ್ಪನ ವರು 6 ಕೋಟಿ ರೂ. ವೆಚ್ಚದಲ್ಲಿ ಸ್ವತಃ 60 ಸಾವಿರ ಡೋಸ್ ಲಸಿಕೆ ಖರೀದಿಸಿ ದಾವಣಗೆರೆಯಲ್ಲಿ ಉಚಿತವಾಗಿ ಕೋವಿಡ್ ಕಾಯಿಲೆಗೆ ಲಸಿಕೆ ನೀಡುವ ಮೂಲಕ ಸಾವಿರಾರು ಜನರ ಜೀವ ಉಳಿಸಿ, ಸರ್ಕಾರದ ಕೆಲಸವನ್ನು ಎಸ್‌ಎಸ್ ಮಾಡಿ ತೋರಿಸಿದ್ದರು.

ಸೋನಿಯಾಗಾಂಧಿ ಜತೆ ಶಾಮನೂರು ಶಿವಶಂಕರಪ್ಪ

ವಿಶ್ವವಾಣಿ

ಸಂಪಾದಕೀಯ

ಎಡವಟ್ಟನಿಗೆ ಎದುರೇಟು

ಅಮೆರಿಕದ ಅಧ್ಯಕ್ಷಗಿರಿ ಎಂಬ ಅಧಿಕಾರದ ಗದ್ದುಗೆಗೆ ಎರಡನೇ ಬಾರಿಗೆ ಅಮರಿಕೊಂಡಿರುವ ಡೊನಾಲ್ಡ್ ಟ್ರಂಪ್ ಅವರು ಮತ್ತೊಮ್ಮೆ ಸುದ್ದಿಯಾಗಿದ್ದಾರೆ. ಈ ಬಾರಿ ತಾಯ್ನಾಡಿನಲ್ಲೇ ಅವರಿಗೆ 'ರಾಜಕೀಯ ತಪರಾಕಿ' ಬಿದ್ದಿರುವುದು ಮತ್ತೊಂದು ವಿಶೇಷ. ಭಾರತ ಸೇರಿದಂತೆ ವಿಶ್ವದ ವಿವಿಧ ರಾಷ್ಟ್ರಗಳಿಂದ ಅಮೆರಿಕಕ್ಕೆ ಆಮದಾಗುವ ಸರಕುಗಳ ಮೇಲೆ ಅತಿರೇಕದ ಸುಂಕವನ್ನು ಹೇರಿದಾಗ, ಟ್ರಂಪ್ ಅವರ ವಿರುದ್ಧ ಮೊದಲ ಸುತ್ತಿನ ಅಸಮಾಧಾನದ ಅಲೆ ತೇಲಿಬಂದದ್ದು ಖರೆ. ಅತೀವ ಕುಶಲಿಗಳಾಗಿರುವ ವಿದೇಶಿ ಉದ್ಯೋಗಾರ್ಥಿಗಳನ್ನು ಅಮೆರಿಕಕ್ಕೆ ಕರೆಸಿಕೊಂಡು ನೇಮಕ ಮಾಡಿಕೊಳ್ಳಲು ಅನುವುಮಾಡಿಕೊಡುವ ಎಚ್-1ಬಿ ವೀಸಾದ ವಾರ್ಷಿಕ ಶುಲ್ಕದ ಪ್ರಮಾಣವನ್ನು 1 ಲಕ್ಷ ಡಾಲರ್‌ಗೆ ಏರಿಸಿದಾಗ, ವಿಶ್ವದ ವಿವಿಧೆಡೆ ಮತ್ತೊಮ್ಮೆ ಟ್ರಂಪ್ ವಿರುದ್ಧದ ಹುಯಿಲು ಕೇಳಿಬಂತು ಮತ್ತು ಅದು ಸಹಜವೂ ಆಗಿತ್ತು. ಇತ್ತೀಚಿನ ಬೆಳವಣಿಗೆಯೆಂದರೆ, ಶುಲ್ಕ ಏರಿಕೆಯ ಕ್ರಮದ ವಿರುದ್ಧ ಅಮೆರಿಕದ 20 ರಾಜ್ಯಗಳು ಟ್ರಂಪ್ ಸರಕಾರದ ವಿರುದ್ಧವೇ ತಗಾದೆ ತೆಗೆದಿರುವುದು ಮತ್ತು ಈ ಆದೇಶಕ್ಕೆ ತಡೆಯಾಜ್ಞೆ ನೀಡುವಂತೆ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿರುವುದು! ಕಾರ್ಯಕುಶಲಿ ವಿದೇಶಿ ಉದ್ಯೋಗಿಗಳನ್ನೇ ನೆಚ್ಚಿರುವ ಮಾಹಿತಿ ತಂತ್ರಜ್ಞಾನ ಮೊದಲಾದ ಉದ್ಯಮಗಳಿಗೆ, ಸರಕಾರದ ಈ ಕ್ರಮದಿಂದ ತೊಡಕಾಗುತ್ತದೆ ಎಂಬುದು ಇದಕ್ಕೆ ಕಾರಣ. ಸುಶಾಸನಕ್ಕಾಗಿ ಮತ್ತು ಜನಕಲ್ಯಾಣಕ್ಕಾಗಿ ದಕ್ಕಿರುವ ರಾಜಕೀಯ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳಲು ಹೊರಟರೆ ಏನಾಗುತ್ತದೆ ಎಂಬುದಕ್ಕೆ ಈ ಬೆಳವಣಿಗೆಯೊಂದು ಜ್ವಲಂತಸಾಕ್ಷಿ. ಇಡೀ ಜಗತ್ತೇ ತನ್ನ ಇಶಾರೆಗೆ ತಕ್ಕಂತೆ ನರ್ತಿಸಬೇಕು ಎಂಬ ತಮ್ಮ ಧಾರ್ಷ್ಟ್ಯಭರಿತ ಧೋರಣೆಗೆ ತಮ್ಮವರೇ ಹೀಗೆ ತಪರಾಕಿ ನೀಡಿರುವುದನ್ನು ಟ್ರಂಪ್ ಇನ್ನಾದರೂ ಮನಗಂಡು ಪಾಠ ಕಲಿಯಬೇಕು. ಈ ಜಗತ್ತು ಉಸಿರು ಹಿಡಿದುಕೊಂಡಿರುವುದು ಸಹಬಾಳ್ವೆಯಿಂದ; ತಾನು ಮಾತ್ರವೇ ಬದುಕಬೇಕು ಎಂದುಕೊಳ್ಳುವುದು ಸ್ವಾರ್ಥದ ಪರಮಾವಧಿಯಾದೀತು...

ಸೊಂಪಾದಕೀಯ

ಟೇಕ್ ಇಟ್ ಈಸಿ ಊರ್ವಶಿ!

ಬೆಂಗಳೂರಿನ ಮತ್ತೊಂದು ಐಕಾನಿಕ್ ಚಿತ್ರಮಂದಿರ 'ಊರ್ವಶಿ' ಕಣ್ಣುಮುಚ್ಚುತ್ತಿದೆ. ಸಿಂಗಲ್ ಥಿಯೇಟರ್‌ಗಳು ದಿನಕ್ಕೊಂದರಂತೆ ಮುಚ್ಚುತ್ತಿರುವ ಈ ದಿನಗಳಲ್ಲಿ ಇದೇನೂ ಹೊಸ ಸುದ್ದಿ ಅಲ್ಲ. ಆದರೆ ಬೆಂಗಳೂರಿನ ಜನಪ್ರಿಯ ಮತ್ತು ಆಧುನಿಕ ಸೌಲಭ್ಯ ಒಳಗೊಂಡ ಚಿತ್ರಮಂದಿರಗಳಲ್ಲಿ ಒಂದಾದ ಊರ್ವಶಿ ಚಿತ್ರಮಂದಿರಕ್ಕೂ ಬಾಗಿಲು ಮುಚ್ಚುವ ಪರಿಸ್ಥಿತಿ ಬಂದಿದೆ ಅನ್ನೋದು ಮಾತ್ರ ಆತಂಕದ ವಿಷಯ. ಮಲ್ಟಿಪ್ಲೆಕ್ಸ್‌ಗಳ ಈ ಯುಗದಲ್ಲಿ ಸಿಂಗಲ್ ಥಿಯೇಟರ್‌ಗಳ ಮಾಲೀಕರು ನಷ್ಟದಲ್ಲಿದ್ದೇವೆ ಅಂತ ಸಿಂಗಲ್ ಕಣ್ಣಲ್ಲಿ ಅಳುತ್ತಿರೋದು ಎಲ್ಲರಿಗೂ ಗೊತ್ತು. ಜತೆಗೆ ಎಲ್ಲರಿಗೂ ಈಗ ಮಾಲ್ ಕಟ್ಟಿ ಅದರ ಟಾಪ್ ಫ್ಲೋರಿನಲ್ಲಿ ಸಿನಿಮಾ ಮಂದಿರಗಳನ್ನು ಕಟ್ಟಿ ಅದರಲ್ಲಿ ಪಾಪ್‌ಕಾರ್ನ್ ಮಾರಾಟ ಮಾಡಿ ಹೆಚ್ಚು ಲಾಭ ಗಳಿಸುವ ಆಸೆ. ಅದೇ ಕಾರಣಕ್ಕೆ ಅನೇಕ ಕಡೆ ಸಿಂಗಲ್ ಚಿತ್ರಮಂದಿರಗಳನ್ನು ಮುಚ್ಚಿ ಮಾಲ್‌ಗಳ ನಿರ್ಮಾಣ ಮಾಡಲಾಗುತ್ತಿದೆ. ಹಾಗಾಗಿ ಕೇವಲ ಸಿನಿಮಾ ಪ್ರೇಮದಿಂದ ಬಂದಷ್ಟು ಲಾಭ ಬರಲಿ ಸಾಕು ಎನ್ನುವವರ ಸಂಖ್ಯೆ ಕಡಿಮೆ ಆಗುತ್ತಿದೆ. ಕಮರ್ಷಿಯಲ್ ಮೈಂಡೆಂಡ್ ಜನರಿಂದಾಗಿ ಈ ರೀತಿ ಜನರಿಗೆ 'ನಾಸ್ಟಾಲ್ಜಿಯಾ' ಎನ್ನಿಸುತ್ತಿದ್ದ ಚಿತ್ರಮಂದಿರಗಳು ಇನ್ನು ಕೇವಲ ನೆನಪು ಅನ್ನುವ ಹಂತ ತಲುಪಿವೆ. ಇದರಿಂದಾಗಿ, ತುಂಬಲಾರದ ನಷ್ಟ ಅನ್ನಿಸುತ್ತಿರೋದು ಜನಸಾಮಾನ್ಯರಿಗೆ ಮಾತ್ರ. ಮಲ್ಟಿಪ್ಲೆಕ್ಸ್‌ಗಳಲ್ಲಿ ದುಬಾರಿ ಹಣ ತೆತ್ತು ಸಿನಿಮಾ ನೋಡೋಕಾಗದವರು ಸಿಂಗಲ್ ಚಿತ್ರಮಂದಿರಗಳಲ್ಲಿ ಕೊಂಚ ಕಡಿಮೆ ಇರುವ ಟಿಕೇಟ್ ರೇಟಿನಲ್ಲಿ ಸಿನಿಮಾ ನೋಡುತ್ತಿದ್ದರು. ಈಗ ಅದಕ್ಕೂ ಪ್ರತಿದಿನ ಕಲ್ಲು ಬೀಳುತ್ತಿದೆ. ಈಗ ಅನಿವಾರ್ಯವಾಗಿ ಸಿನಿಮಾ ಟಿಕೆಟ್‌ಗಿಂತ ಪಾಪ್‌ಕಾರ್ನ್‌ಗೇ ಹೆಚ್ಚು ಹಣ ತೆತ್ತು 'ನಾಮ್-ಕೆ-ವಾಸ್ತೆ' ಸಿನಿಮಾ ನೋಡುವ ದೌರ್ಭಾಗ್ಯ ಸಿನಿಪ್ರೇಮಿಗಳಿಗೆ. ಆದರೆ ಹೆಚ್ಚಿನ ದುಡ್ಡು ಮಾಡುವ ದುರಾಸೆಗೆ ಬಿದ್ದ ಮಾಲೀಕರುಗಳಿಗೆ ಇದ್ಯಾವುದರ ಪರಿವೆ ಇಲ್ಲ. ಆದ್ರೆ, ಇದ್ಯಾವುದೂ ಜನರ ಕೈಯಲ್ಲಿ ಇಲ್ಲದಿರೋದ್ರಿಂದ, 'ಮಲ್ಟಿಪ್ಲೆಕ್ಸ್‌ಗಳೇ ನಮ್ಮ ಮನೆದೇವ್ರು' ಅಂದುಕೊಂಡು 'ಟೇಕ್ ಇಟ್ ಈಸಿ ಊರ್ವಶಿ' ಅಂತ ಸಮಾಧಾನ ಮಾಡಿಕೊಳ್ಳಬೇಕಾದ ಅನಿವಾರ್ಯತೆಯಿದೆ.

ಸಂಪಾದಕರ ಸದ್ಯಶೋಧನೆ

ಸಣ್ಣ ಸನ್ನೆ, ಉಳಿದ ಪ್ರಾಣ

(ಶನಿವಾರದ ಸಂಚಿಕೆಯಿಂದ ಮುಂದುವರಿದಿದೆ)

ವಿಮಾನದ ಕ್ಯಾಪ್ಟನ್ ಕೂಡ ಪರಿಸ್ಥಿತಿಯ ಗಂಭೀರತೆಯನ್ನು ಅರ್ಥಮಾಡಿಕೊಂಡ. ಪ್ರಯಾಣಿಕರಿಗೆ ನಿಜವಾದ ವಿಷಯ ತಿಳಿದರೆ ಆತಂಕ ಸೃಷ್ಟಿಯಾಗಬಹುದು ಮತ್ತು ಆ ಅಪಹರಣಕಾರ ವಿಮಾನದಲ್ಲಿ ಏನಾದರೂ ಅನಾಹುತ ಮಾಡಬಹುದು ಎಂಬ ಭಯವಿತ್ತು. ಆದ್ದರಿಂದ, ಪೈಲಟ್ ಜಾಣತನದಿಂದ ಒಂದು ಘೋಷಣೆ ಮಾಡಿದ- ''ವಿಮಾನದಲ್ಲಿ ಸಣ್ಣ ತಾಂತ್ರಿಕ ದೋಷ ಕಂಡುಬಂದಿರುವುದರಿಂದ ನಾವು ಹತ್ತಿರದ ಜಿನೀವಾ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡುತ್ತಿದ್ದೇವೆ''. ಈ ಘೋಷಣೆ ಕೇಳಿ ಆ ಬಾಲಕನ ಪಕ್ಕದಲ್ಲಿದ್ದ ವ್ಯಕ್ತಿ ಸಿಟ್ಟಿಗೆದ್ದ. ಆತ ವಿಚಲಿತನಾಗಿದ್ದ. ಆದರೆ ಅಷ್ಟರಲ್ಲಾಗಲೇ ವಿಮಾನವು ಜಿನೀವಾದ ಕಡೆಗೆ ತಿರುಗಿತ್ತು. ವಿಮಾನ ನಿಲ್ದಾಣದಲ್ಲಿ ಇಳಿಯುತ್ತಿದ್ದಂತೆಯೇ, ಪ್ರಯಾಣಿಕರಿಗೆ ಏನಾಗುತ್ತಿದೆ ಎಂದು ತಿಳಿಯುವ ಮುನ್ನವೇ, ಸಾದಾ ಉಡುಪಿನಲ್ಲಿದ್ದ ವಿಶೇಷ ಭದ್ರತಾ ಸಿಬ್ಬಂದಿ ವಿಮಾನದೊಳಗೆ ಪ್ರವೇಶಿಸಿದರು. ಆ ವ್ಯಕ್ತಿ ಪ್ರತಿರೋಧ ತೋರಲು ಪ್ರಯತ್ನಿಸಿದನಾದರೂ, ಪೊಲೀಸರು ಕ್ಷಣಮಾತ್ರದಲ್ಲಿ ಅವನನ್ನು ಸುತ್ತುವರಿದರು. ಪರಿಶೀಲನೆ ನಡೆಸಿದಾಗ ಅವನ ಬಳಿ ಇದ್ದ ದಾಖಲೆಗಳು ಮತ್ತು ಪಾಸ್‌ಪೋರ್ಟ್ ನಕಲಿ ಎಂದು ತಿಳಿದುಬಂತು. ಅವನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೇಕಾಗಿದ್ದ ಒಬ್ಬ ಕುಖ್ಯಾತ ಮಾನವ ಕಳ್ಳಸಾಗಣೆಗಾರನಾಗಿದ್ದ. ಪೊಲೀಸರು ಆ ಬಾಲಕನನ್ನು ಪ್ರತ್ಯೇಕವಾಗಿ ವಿಚಾರಿಸಿದಾಗ, ಅವನು ಕಣ್ಣೀರು ಹಾಕುತ್ತಾ ನಡುಗುವ ಧ್ವನಿಯಲ್ಲಿ ಸತ್ಯವನ್ನು ಬಾಯಿಬಿಟ್ಟ. ಅವನನ್ನು ಕೆಲವು ವಾರಗಳ ಹಿಂದೆಯೇ ಅಪಹರಿಸಲಾಗಿತ್ತು. ಅವನ ಪೋಷಕರು ಅವನನ್ನು ಹುಡುಕುತ್ತಿದ್ದರು ಮತ್ತು ಇಂಟರ್‌ಪೋಲ್ ಕೂಡ ಈ ಬಾಲಕನಿಗಾಗಿ ಬಲೆ ಬೀಸಿತ್ತು. ಆ ವ್ಯಕ್ತಿ ಬಾಲಕನನ್ನು ಬೇರೊಂದು ದೇಶಕ್ಕೆ ಸಾಗಿಸಲು ಕರೆದೊಯ್ಯುತ್ತಿದ್ದ. ಬಾಲಕನಿಗೆ ತಾನು ಮಾಡುವ ಆ 'ಕೈಸನ್ನೆ' ಯಾರಾದರೂ ಅರ್ಥಮಾಡಿಕೊಳ್ಳುತ್ತಾರೆ ಎಂಬ ಸಣ್ಣ ಆಸೆಯಷ್ಟೇ ಉಳಿದಿತ್ತು. ಅಂದು ಇಸಾಬೆಲಾ ಅವರ ಆ ಒಂದು ಸೂಕ್ಷ್ಮ ದೃಷ್ಟಿ, ಆ ಬಾಲಕನ ಪಾಲಿಗೆ ದೇವರ ದೃಷ್ಟಿಯಾಗಿ ಪರಿಣಮಿಸಿತ್ತು. ಆ ಕ್ಷಣದಲ್ಲಿ ಇಸಾಬೆಲಾ ಅವರಿಗೆ ಅರ್ಥವಾಯಿತು; ತಾನು ಕೇವಲ ಊಟ ಬಡಿಸುವ ಸಿಬ್ಬಂದಿಯಲ್ಲ, ಬದಲಿಗೆ ಒಂದು ಜೀವವನ್ನು ಉಳಿಸಿದ ರಕ್ಷಕಿ ಎಂದು. ಪೊಲೀಸರು ಆ ಬಾಲಕನನ್ನು ಕರೆದೊಯ್ಯುವಾಗ, ಅವನು ಬಾಗಿಲ ಬಳಿ ನಿಂತು ಹಿಂದೆ ತಿರುಗಿ ನೋಡಿದನು. ಕಣ್ಣೀರಿನ ನಡುವೆಯೂ ಅವನ ಮುಖದಲ್ಲಿ ಮುಗ್ಧ ನಗು ಮೂಡಿತ್ತು. ಅವನು ಇಸಾಬೆಲಾ ಅವರ ಕಡೆಗೆ ಕೈಬೀಸಿ, ಮೌನವಾಗಿ ವಿದಾಯ ಹೇಳಿದನು. ಈ ಘಟನೆ ನಡೆದು ಕೆಲವು ದಿನಗಳು ಕಳೆದಿದ್ದವು. ಇಸಾಬೆಲಾ ಎಂದಿನಂತೆ ತಮ್ಮ ಕೆಲಸದಲ್ಲಿ ಮಗ್ನರಾಗಿದ್ದರು. ಆಗ ಅವರಿಗೆ ಇಂಟರ್‌ಪೋಲ್‌ನಿಂದ ಒಂದು ಪತ್ರ ಬಂತು. ಆ ಲಕೋಟೆಯನ್ನು ತೆರೆದಾಗ ಅದರಲ್ಲಿ ಬಾಲಕ ಬರೆದ ಒಂದು ಚಿತ್ರವಿತ್ತು. ಆ ಚಿತ್ರದಲ್ಲಿ ಮೋಡಗಳ ನಡುವೆ ಹಾರುತ್ತಿರುವ ಒಂದು ವಿಮಾನವಿತ್ತು. ವಿಮಾನದ ಪಕ್ಕದಲ್ಲಿ ನಗುತ್ತಿರುವ ಒಬ್ಬ ಫ್ಲೈಟ್ ಅಟೆಂಡೆಂಟ್ ಚಿತ್ರವಿತ್ತು. ಚಿತ್ರದ ಕೆಳಭಾಗದಲ್ಲಿ, ಬಾಲಕನ ಕೈಬರಹದಲ್ಲಿ ಸರಳವಾದ ಆದರೆ ಅತ್ಯಂತ ಆಳವಾದ ಅರ್ಥವುಳ್ಳ ಒಂದು ಸಾಲಿತ್ತು- ''ಅಂದು ನನ್ನನ್ನು ನೋಡಿದ್ದಕ್ಕೆ ಧನ್ಯವಾದಗಳು''. ಈ ಸಾಲು ಇಸಾಬೆಲಾ ಅವರ ಕಣ್ಣಲ್ಲಿ ನೀರು ತರಿಸಿತು. ಜಗತ್ತಿನ ಎಷ್ಟೋ ಜನ ಕೇವಲ ನೋಡುತ್ತಾರೆ, ಆದರೆ ಗಮನಿಸುವುದಿಲ್ಲ. ಆದರೆ ಇಸಾಬೆಲಾ ಅಂದು ಕೇವಲ ನೋಡಲಿಲ್ಲ, ಆ ಬಾಲಕನ ಮೂಕವೇದನೆಯನ್ನು ಗಮನಿಸಿದರು. ಈ ಸತ್ಯ ಘಟನೆಯು ನಮಗೆ ಒಂದು ದೊಡ್ಡ ಪಾಠವನ್ನು ಕಲಿಸುತ್ತದೆ. ನಮ್ಮ ಸುತ್ತಮುತ್ತಲಿನ ಜಗತ್ತಿನಲ್ಲಿ ಎಷ್ಟೋ ಬಾರಿ ಜನರು, ವಿಶೇಷವಾಗಿ ಮಕ್ಕಳು ಮತ್ತು ಮಹಿಳೆಯರು ಸಂಕಷ್ಟದಲ್ಲಿದ್ದಾಗ ಬಾಯಿಬಿಟ್ಟು ಸಹಾಯ ಕೇಳಲಾಗದ ಪರಿಸ್ಥಿತಿಯಲ್ಲಿರುತ್ತಾರೆ. ಅಂಥ ಸಮಯದಲ್ಲಿ ಅವರು ನೀಡುವ ಸಣ್ಣ ಸುಳಿವುಗಳು, ಕಣ್ಣಿನ ಭಾಷೆ ಅಥವಾ ಕೈಸನ್ನೆಗಳು ಅವರ ಪ್ರಾಣ ಉಳಿಸಲು ಇರುವ ಏಕೈಕ ದಾರಿಯಾಗಿರುತ್ತವೆ. ನಾವು ನಮ್ಮ ಮೊಬೈಲ್ ಫೋನ್‌ಗಳಲ್ಲಿ ಅಥವಾ ನಮ್ಮದೇ ಪ್ರಪಂಚದಲ್ಲಿ ಮುಳುಗಿಹೋಗುವ ಬದಲು, ನಮ್ಮ ಸುತ್ತಮುತ್ತ ಏನಾಗುತ್ತಿದೆ ಎಂಬುದರ ಬಗ್ಗೆ ಸ್ವಲ್ಪ ಜಾಗರೂಕತೆ ವಹಿಸಿದರೆ, ನಾವು ಕೂಡ ಯಾರದೋ ಪಾಲಿನ ರಕ್ಷಕರಾಗಬಹುದು. ಇಸಾಬೆಲಾ ಮೊರೊ ಅವರ ಸಮಯಪ್ರಜ್ಞೆ ಮತ್ತು ಮಾನವೀಯತೆಯು ವಿಮಾನಯಾನ ಜಗತ್ತಿನಲ್ಲಿ ಒಂದು ಮಾದರಿಯಾಗಿ ಉಳಿಯಿತು. ಕೆಲವೊಮ್ಮೆ, ಒಂದು ಅದೃಶ್ಯವೆನಿಸುವ ಸನ್ನೆ, ಇಡೀ ಜೀವವನ್ನೇ ಉಳಿಸಬಲ್ಲದು ಎಂಬುದಕ್ಕೆ ಈ ಕಥೆಯೇ ಸಾಕ್ಷಿ.

ನಿಖಿಲ್ ಪತ್ತೆ ಮಾಡಿದ ಚಿದಂಬರ ರಹಸ್ಯ ಯಾವುದು?

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಇತ್ತೀಚೆಗೆ ದಿಲ್ಲಿಯ ಎಐಸಿಸಿ ಪಡಸಾಲೆಯಿಂದ ಬರುತ್ತಿರುವ ಒಂದು ವರ್ತಮಾನವು ಸಿಎಂ ಸಿದ್ದರಾಮಯ್ಯ ಅವರ ಪಾಳಯದವರಿಗೆ ಹಿತಕರವಾಗಿ ಕೇಳಿಸುತ್ತಿಲ್ಲ. ಹಾಗಂತ ಸಿಎಂ ಬದಲಾವಣೆ ಆಗಿಬಿಡುತ್ತದೆ ಅಂತಲೂ ಅವರು ಭಾವಿಸಿಲ್ಲ. ಯಾಕೆಂದರೆ ಪಕ್ಷದ ವರಿಷ್ಠ ರಾಹುಲ್ ಗಾಂಧಿ ಅವರ ಇದುವರೆಗಿನ ಹೆಜ್ಜೆಗಳಲ್ಲಿ ಸಣ್ಣ ಅನುಮಾನವೂ ಅವರಿಗೆ ಗೋಚರಿಸಿಲ್ಲ.

ಎಲ್ಲಕ್ಕಿಂತ ಮುಖ್ಯವಾಗಿ, ಕೆಲ ಕಾಲದ ಹಿಂದೆ ದಿಲ್ಲಿಯಲ್ಲಿ ನಡೆದ ಪಕ್ಷದ ಸಮಾವೇಶವೊಂದರಲ್ಲಿ ಸಿಎಂ ಸಿದ್ದರಾಮಯ್ಯ ಅವರ ಬಗ್ಗೆ ರಾಹುಲ್ ಗಾಂಧಿ ಅವರಾಡಿದ ಮಾತು ನೆಪ ಮಾತ್ರದ್ದಾಗಿರಲಿಲ್ಲ. ಅವತ್ತು ವೇದಿಕೆಯ ಮೇಲಿದ್ದ ಸಿದ್ದರಾಮಯ್ಯ ಅವರ ಕಡೆ ಕೈ ಮಾಡುತ್ತಾ, ''ಇಲ್ಲಿ ಹಿಂದುಳಿದ ವರ್ಗಗಳ ಚಾಂಪಿಯನ್ ಅನ್ನಿಸಿಕೊಂಡ ಸಿದ್ದರಾಮಯ್ಯ ಅವರಿದ್ದಾರೆ. ಅಶೋಕ್ ಗೆಹ್ಲೋಟ್ ಅವರಿದ್ದಾರೆ. ಇಂಥ ಕೆಲ ನಾಯಕರಿದ್ದರೆ ನಾವು ದಿಲ್ಲಿ ಗದ್ದುಗೆಯನ್ನು ಮರಳಿ ವಶಕ್ಕೆ ಪಡೆಯುತ್ತೇವೆ'' ಅಂತ ರಾಹುಲ್ ಗಾಂಧಿ ಅವರಾಡಿದ ಮಾತೇನಿತ್ತು, ಅದು ಪಕ್ಷದ ಎಲ್ಲ ಕೇಡರುಗಳಿಗೆ ಒಂದು ಸ್ಪಷ್ಟ ಸಂದೇಶ ರವಾನಿಸಿತ್ತು. ಅರ್ಥಾತ್, ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ ಪಕ್ಷವನ್ನು ಕಟ್ಟಲು ಸಿದ್ದರಾಮಯ್ಯ ಅವರಂಥ ನಾಯಕರ ವರ್ಚಸ್ಸನ್ನು ಬಳಸಿಕೊಳ್ಳಲು ರಾಹುಲ್ ಗಾಂಧಿ ಬಯಸಿದ್ದಾರೆ ಎಂಬ ಸಂದೇಶ ಎಲ್ಲರಿಗೂ ರವಾನೆಯಾಗಿತ್ತು.

ಈ ಮಧ್ಯೆ, ಅಹಿಂದ ವರ್ಗಗಳ ಮತದಾರರೇ ಹೆಚ್ಚಿರುವ ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳದಂಥ ರಾಜ್ಯಗಳ ವಿಧಾನಸಭೆ ಚುನಾವಣೆ ಹತ್ತಿರವಿರುವಾಗ ಕರ್ನಾಟಕದಲ್ಲಿ ಸಿದ್ದರಾಮಯ್ಯ ಅವರನ್ನು ಬದಲಿಸಲು ರಾಹುಲ್ ಗಾಂಧಿ ತಪ್ಪಿಯೂ ಯೋಚಿಸುವುದಿಲ್ಲ ಎಂಬುದು ಸಿದ್ದರಾಮಯ್ಯ ಪಾಳಯದ ಖಚಿತ ವಿಶ್ವಾಸ. ಇಷ್ಟಾದರೂ ದಿಲ್ಲಿಯಿಂದ ಹಾರಿ ಬರುತ್ತಿರುವ ಒಂದು ವರ್ತಮಾನ ಸಿದ್ದರಾಮಯ್ಯ ಪಾಳಯದ ಕಸಿವಿಸಿಗೆ ಕಾರಣವಾಗಿದೆ. ಅದರ ಪ್ರಕಾರ, ಇತ್ತೀಚೆಗೆ ರಾಹುಲ್ ಗಾಂಧಿಯವರು ಓದುತ್ತಿರುವ ಬಹುತೇಕ ಪತ್ರಿಕೆಗಳಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನಾಯಕತ್ವವನ್ನು ಹೊಗಳುವ, ಅವರು ಕರ್ನಾಟಕದ ಮುಖ್ಯಮಂತ್ರಿಯಾಗುವ ಅನಿವಾರ್ಯತೆಯನ್ನು ಎತ್ತಿ ತೋರಿಸುವ ವರದಿಗಳು, ಸ್ಟೋರಿಗಳು ದಂಡಿಯಾಗಿರುತ್ತವೆ. ಕರ್ನಾಟಕದಲ್ಲಿ ಪಕ್ಷ ಅಧಿಕಾರಹೀನ ಸ್ಥಿತಿಯಲ್ಲಿದ್ದಾಗ ಕೆಪಿಸಿಸಿಯ ಅಧ್ಯಕ್ಷರಾದ ಡಿ.ಕೆ.ಶಿವಕುಮಾರ್ ಎಂಥ ರಣತಂತ್ರಗಳನ್ನು ರೂಪಿಸಿದರು ಮತ್ತು ಯಾವ್ಯಾವ ಸಂದರ್ಭಗಳಲ್ಲಿ ಪಕ್ಷಕ್ಕಾಗಿ ತ್ಯಾಗ ಮಾಡಿದರು ಎಂಬಲ್ಲಿಯ ತನಕ ಒಂದಿಲ್ಲೊಂದು ವರದಿಗಳು ಪ್ರತಿ ದಿನ ರಾಹುಲ್ ಗಾಂಧಿಯವರ ಕಣ್ಣಿಗೆ ಬೀಳುತ್ತಿವೆ.

ಕುತೂಹಲದ ಸಂಗತಿ ಎಂದರೆ ಎಐಸಿಸಿಯ ಮಾಧ್ಯಮ ವಿಭಾಗದ ಪ್ರಮುಖರಾದ ಜೈರಾಮ್ ರಮೇಶ್, ಪವನ್ ಖೇರ್ ಅವರೇ ಪತ್ರಿಕೆಗಳಲ್ಲಿ ಬರುತ್ತಿರುವ ಈ ಸುದ್ದಿಗಳನ್ನು ರಾಹುಲ್ ಗಾಂಧಿಯವರ ಗಮನಕ್ಕೆ ತರುತ್ತಾರೆ. ಅಂದ ಹಾಗೆ, ಇಂಥ ವರದಿಗಳನ್ನು ನೋಡಿದ ಕೂಡಲೇ ರಾಹುಲ್ ಗಾಂಧಿ ಅವರ ಮನಃಪರಿವರ್ತನೆ ಆಗಿಬಿಡುತ್ತದೆ, ಅವರು ಡಿ.ಕೆ.ಶಿವಕುಮಾರ್ ಅವರ ಪರವಾಗಿ ನಿಂತುಬಿಡುತ್ತಾರೆ ಅಂತೇನೂ ಅಲ್ಲ. ಆದರೆ ಈ ಎಪಿಸೋಡು ಪ್ರತಿದಿನ ರಿಪೀಟ್ ಆಗುತ್ತಾ ಹೋದರೆ, ಮತ್ತೊಂದು ಕಡೆಯಿಂದ ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ ಅವರಿಂದ ಒತ್ತಡ ಹೆಚ್ಚತೊಡಗಿದರೆ ರಾಹುಲ್ ಗಾಂಧಿ ವಿವಶರಾಗಿಬಿಡುತ್ತಾರೆಯೇ? ಎಂಬುದು ಸಿದ್ದರಾಮಯ್ಯ ಪಾಳಯದ ಶಂಕೆ. ಇದೇ ರೀತಿ ದಿನ ಬೆಳಗಾದರೆ ಪತ್ರಿಕೆಗಳಲ್ಲಿ ಇಂಥ ವರದಿಗಳು ಪ್ರಕಟವಾಗಲು ಮತ್ತು ರಾಹುಲ್ ಗಾಂಧಿಯವರ ಕಣ್ಣಿಗೆ ಬೀಳಲು ಡಿ.ಕೆ.ಶಿವಕುಮಾರ್ ಅವರ ಟೆಕ್ನಿಕ್ಕೇ ಕಾರಣ ಎಂಬುದು ಅದರ ಅನುಮಾನ.

ಇಂಥ ಅನುಮಾನಕ್ಕೆ ಪೂರಕವಾಗಿ ಸಿದ್ದರಾಮಯ್ಯ ಪಾಳಯ ಆಪರೇಷನ್ 'ಎ' ಮತ್ತು ಆಪರೇಷನ್ 'ಬಿ' ಕಾರ್ಯಾಚರಣೆಗೆ ರೆಡಿಯೂ ಆಗಿದೆ. ಅರ್ಥಾತ್, ಇವತ್ತಿನ ಸ್ಥಿತಿಯಲ್ಲಿ ಸರಕಾರ ಸುಭದ್ರವಾಗಿರಬೇಕು ಎಂದರೆ ಯಾವ ಕಾರಣಕ್ಕೂ ಸಿದ್ದರಾಮಯ್ಯ ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಯಬಾರದು. ಒಂದು ವೇಳೆ ಅವರನ್ನು ಬದಲಿಸುವುದೇ ಆದರೆ ಗೃಹ ಸಚಿವ, ದಲಿತ ನಾಯಕ ಡಾ.ಜಿ.ಪರಮೇಶ್ವರ್ ಅವರನ್ನು ಮುಖ್ಯಮಂತ್ರಿ ಹುದ್ದೆಗೆ ತರಬೇಕು ಎಂಬುದು ಆಪರೇಷನ್ 'ಎ' ಪ್ಲಾನು. ಒಂದು ವೇಳೆ ವರಿಷ್ಠರು ಇದನ್ನು ಒಪ್ಪದೇ ಹೋದರೆ ಸಿದ್ದರಾಮಯ್ಯ ಅವರಿಲ್ಲದ ಆಪರೇಷನ್ 'ಬಿ' ಪ್ಲಾನ್ ಅನ್ನು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಜಾರಿಗೆ ತರಲು ಸಜ್ಜಾಗುತ್ತಾರೆ. ಅಂದರೆ? ಡಿ.ಕೆ.ಶಿವಕುಮಾರ್ ಅವರ ನೇತೃತ್ವದ ಸರಕಾರದಲ್ಲಿ ಇರಲು ಇಚ್ಛಿಸದ ಸಚಿವರು, ಶಾಸಕರ ಪಡೆ ವಲಸೆಗೆ ಸಜ್ಜಾಗುತ್ತದೆ. ಹೀಗೆ ಆಪರೇಷನ್ 'ಬಿ' ಪ್ಲಾನು ಜಾರಿಯಾಗುವ ಸಂದರ್ಭ ಬರುತ್ತದಾ? ಗೊತ್ತಿಲ್ಲ. ಆದರೆ ದಿಲ್ಲಿಯಿಂದ ಈಗ ಹಾರಿ ಬರುತ್ತಿರುವ ವರ್ತಮಾನ ಸಿದ್ದರಾಮಯ್ಯ ಪಾಳಯವನ್ನು ಕಸಿವಿಸಿಗೆ ತಳ್ಳಿರುವುದಂತೂ ನಿಜ.

ಬಿಜೆಪಿ ಭಿನ್ನರನ್ನು ಕಾಡುತ್ತಿರುವುದೇನು?

ಈ ಮಧ್ಯೆ, ಬಿಜೆಪಿಯ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಟಾವೋ ಚಳವಳಿಗೆ ಕೈ ಹಾಕಿರುವ ಪಕ್ಷದ ಭಿನ್ನರಿಗೆ ಚಿಂತೆ ಕಾಡತೊಡಗಿದೆ. ಅದೆಂದರೆ, ವಿಜಯೇಂದ್ರ ಅವರು ಅಧ್ಯಕ್ಷರಾಗಿರುವಾಗಲೇ ರಾಜ್ಯದಲ್ಲಿರುವ ಕಾಂಗ್ರೆಸ್ ಸರಕಾರ ಉರುಳಿ ಬಿಟ್ಟರೇ? ಅನ್ನುವುದು.

ಅಂದ ಹಾಗೆ, 'ವಿಜಯೇಂದ್ರ ಅವರನ್ನು ಸದ್ಯಕ್ಕೆ ಕೆಳಗಿಳಿಸುವುದು ಬೇಡ. ಬದಲಿಗೆ ಮುಂದಿನ ವರ್ಷದ ನವೆಂಬರ್ ತನಕ ಅವರು ಮುಂದುವರಿಯಲಿ. ಆಗ ಸಹಜವಾಗಿಯೇ ನಿಮ್ಮ ಅವಧಿ ಮುಗಿಯಿತು ಅಂತ ಅವರನ್ನು ಕೆಳಗಿಳಿಸಬಹುದು. ಆದರೆ ಅಧಿಕಾರದ ಅವಧಿ ಮುಗಿಯುವುದಕ್ಕಿಂತ ಮುಂಚೆ ಅವರನ್ನು ಕೆಳಗಿಳಿಸಿದರೆ ರಾಂಗ್ ಮೆಸೇಜು ಹೋಗುತ್ತದೆ' ಎಂಬುದು ವರಿಷ್ಠರಿಂದ ಭಿನ್ನರಿಗೆ ಬಂದಿರುವ ಸಂದೇಶ.

ಹೀಗೆ ವರಿಷ್ಠರಿಂದ ಬಂದ ಸಂದೇಶದ ಬಗ್ಗೆ ಭಿನ್ನರಿಗೂ ತಕರಾರಿಲ್ಲ. ಆದರೆ ಇದರ ಬೆನ್ನಲ್ಲೇ ಅವರಿಗೆ ಅಂಟಿಕೊಂಡ ಚಿಂತೆಯೆಂದರೆ ಕರ್ನಾಟಕದಲ್ಲಿರುವ ಕಾಂಗ್ರೆಸ್ ಸರಕಾರ ಉರುಳಿದರೇ? ಎಂಬುದು. ಇವತ್ತು ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ಕ್ಯಾಂಪುಗಳ ಮಧ್ಯೆ ನಡೆಯುತ್ತಿರುವ ಕದನವನ್ನು ನೋಡಿದರೆ, ಅಧಿಕಾರ ಹಸ್ತಾಂತರವಾಗದಿದ್ದರೂ ಕಷ್ಟ, ಆದರೂ ಕಷ್ಟ ಎಂಬ ಪರಿಸ್ಥಿತಿ ಇದೆ. ಯಾಕೆಂದರೆ ಡಿಕೆಶಿ ಮುಖ್ಯಮಂತ್ರಿಯಾಗುವುದನ್ನು ಸಿದ್ದರಾಮಯ್ಯ ಬೆಂಬಲಿಗರು ಒಪ್ಪಲು ತಯಾರಿಲ್ಲ. ಅದೇ ರೀತಿ ತಮಗೆ ಮುಖ್ಯಮಂತ್ರಿ ಪಟ್ಟ ಸಿಗಬೇಕು ಎಂಬ ವಿಷಯದಲ್ಲಿ ರಾಜಿ ಮಾಡಿಕೊಳ್ಳಲು ಡಿ.ಕೆ.ಶಿವಕುಮಾರ್ ಕೂಡಾ ಬಿಲ್‌ಕುಲ್ ತಯಾರಿಲ್ಲ. ಹೀಗಾಗಿ ಅಧಿಕಾರ ಹಸ್ತಾಂತರದ ಎಪಿಸೋಡು ಯಾವ ರೂಪಕ್ಕೆ ತಿರುಗಿದರೂ ರಾಜ್ಯ ಸರಕಾರದ ಪತನ ನಿಶ್ಚಿತ.

ಆದರೆ ಸರಕಾರ ಪತನವಾಗುವುದು ಖಚಿತವಾದರೆ ವಿಧಾನಸಭೆಗೆ ಮಧ್ಯಂತರ ಚುನಾವಣೆ ನಡೆಯುವುದು ನಿಶ್ಚಿತವಾಗುತ್ತದೆ. ಹೀಗೆ ಮಧ್ಯಂತರ ಚುನಾವಣೆ ನಿಶ್ಚಿತ ಎಂಬ ವಾತಾವರಣ ಕಾಣಿಸಿಕೊಂಡರೆ ವಿಜಯೇಂದ್ರ ಅವರ ಕುರ್ಚಿ ಮತ್ತಷ್ಟು ಗಟ್ಟಿಯಾಗುತ್ತದೆ. ಯಾಕೆಂದರೆ ಈ ಸಂದರ್ಭದಲ್ಲಿ ಅವರನ್ನು ಇಳಿಸುವುದು ಡೇಂಜರ್ ಅಂತ ವರಿಷ್ಠರೇ ಹೇಳುತ್ತಾರೆ. ಅಲ್ಲಿಗೆ ವಿಜಯೇಂದ್ರ ಅವರ ನಾಯಕತ್ವದಡಿಯಲ್ಲೇ ತಾವು ಮಧ್ಯಂತರ ಚುನಾವಣೆಗೆ ಅಣಿಯಾಗಬೇಕಾಗುತ್ತದೆ. ಹೀಗೆ ಅವರ ನಾಯಕತ್ವದಲ್ಲಿ ಚುನಾವಣೆಗೆ ಹೋದರೆ ಮುಂದೆ ಅವರೇ ಶಾಸಕಾಂಗ ಪಕ್ಷದ ನಾಯಕರಾಗುವುದು ನಿಕ್ಕಿಯಾಗುತ್ತದೆ. ಅಷ್ಟಾದ ಮೇಲೆ ತಮಗೆ ಉಳಿಯುವುದೇನು? ಎಂಬುದು ಭಿನ್ನರ ಲೇಟೆಸ್ಟು ಚಿಂತೆ

ನಡ್ಡಾಗೆ ತಲುಪಿದ ಕಂಪ್ಲೇಂಟು ಪಟ್ಟಿ

ಈ ಮಧ್ಯೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜಗತ್ ಪ್ರಕಾಶ್ ನಡ್ಡಾ ಅವರಿಗೆ ರಾಜ್ಯ ಬಿಜೆಪಿಯ ಹಲ ಕಾರ್ಯಕರ್ತರು ಕಂಪ್ಲೇಂಟು ಪಟ್ಟಿಯದನ್ನು ರವಾನಿಸಿದ್ದಾರಂತೆ. 'ಬೆಳಗಾವಿಯಲ್ಲಿ ನಡೆಯುತ್ತಿರುವ ವಿಧಾನಮಂಡಲ ಅಧಿವೇಶನದಲ್ಲಿ

ನಮ್ಮ ಪಕ್ಷದ ನಾಯಕರು ಕಾಂಗ್ರೆಸ್ ಸರಕಾರದ ಹಗರಣಗಳನ್ನು ಬಯಲುಮಾಡಲು ಆಸಕ್ತಿಯನ್ನೇ ತೋರುತ್ತಿಲ್ಲ. ಬದಲಿಗೆ ಸೈಲೆಂಟಾಗಿ ಅದನ್ನು ಮರೆಮಾಚುತ್ತಿದ್ದಾರೆ' ಎಂಬುದು ಈ ಕಂಪ್ಲೇಂಟು ಪಟ್ಟಿಯ ಮುಖ್ಯ ಅಂಶ.

ಇವತ್ತು ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಮಗಾರಿ ಇರಬಹುದು, ಭದ್ರಾ ಮೇಲ್ದಂಡೆ ಯೋಜನೆಯ ಕಾಮಗಾರಿ ಇರಬಹುದು, ಕೆಲವೇ ಗುತ್ತಿಗೆದಾರರು ಇಲ್ಲಿ ಬಂಪರ್ ಬೆಳೆ ತೆಗೆಯುತ್ತಿದ್ದರೆ, ಅ ಬಗ್ಗೆ ನಮ್ಮವರು ಚಕಾರ ಎತ್ತುತ್ತಿಲ್ಲ. ಇನ್ನು ರಾಜಧಾನಿಯ ಹಲವು ಕಾಮಗಾರಿಗಳ ಗುತ್ತಿಗೆ ಪಡೆದ ಮಂಗಳೂರು ಮೂಲದ ಗುತ್ತಿಗೆದಾರರೊಬ್ಬರು ಕೆಲಸ ಮಾಡದೆ ಬಿಲ್ ಸುತ್ತುತ್ತಿದ್ದರೂ, ಅಧಿವೇಶನದಲ್ಲಿ ನಮ್ಮವರು ಅದನ್ನು ಹೇಳುವ ಧೈರ್ಯ ಮಾಡುತ್ತಿಲ್ಲ. ಇದೆಲ್ಲ ಹೋಗಲಿ, ದೊಡ್ಡ ದೊಡ್ಡ ವಿಷಯಗಳನ್ನು ಹಿಡಿದು ಹೋರಾಡುವುದು ನಮ್ಮವರಿಗೆ ಕಷ್ಟ ಎಂದರೆ, ಅಸಹಾಯಕರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆಯೂ ಪ್ರಸ್ತಾಪಿಸಲು ಇವರಿಗೆ ಪುರುಸೊತ್ತಿಲ್ಲ. ಉದಾಹರಣೆಗೆ ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲರ ವೇತನಗಳು ಸಕಾಲಕ್ಕೆ ಫಲಾನುಭವಿಗಳಿಗೆ ತಲುಪುತ್ತಿಲ್ಲ. ಇದರಿಂದ ಆ ಜೀವಗಳಿಗೆ ಆಗುತ್ತಿರುವ ನೋವು ಅಪಾರ. ಆದರೆ ನಮ್ಮವರಿಗೆ ಕನಿಷ್ಠಪಕ್ಷ ಇಂಥ ಸಮಸ್ಯೆಗಳ ಕುರಿತು ಸರಕಾರಕ್ಕೆ ಚಾಟಿ ಬೀಸಲು ವ್ಯವಧಾನವಿಲ್ಲ ಎಂಬುದು ಬಿಜೆಪಿ ಕಾರ್ಯಕರ್ತರ ಕಂಪ್ಲೇಂಟು ಪಟ್ಟಿ.

ಬಿಜೆಪಿ ಮೂಲಗಳ ಪ್ರಕಾರ, ನಡ್ಡಾಗೆ ರವಾನೆಯಾಗುತ್ತಿರುವ ಈ ಕಂಪ್ಲೇಂಟುಗಳ ಪಟ್ಟಿ ಮುಂದಿನ ದಿನಗಳಲ್ಲಿ ಇನ್ನಷ್ಟು ಹೆಚ್ಚಲಿದೆ.

ನಿಖಿಲ್ ಪತ್ತೆಮಾಡಿದ ರಹಸ್ಯ

ಇನ್ನು, ಯುವ ಜನತಾದಳದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಪತ್ತೆಮಾಡಿದ ರಹಸ್ಯವೊಂದು ದೊಡ್ಡ ಗೌಡರು ಮತ್ತು ಕುಮಾರಸ್ವಾಮಿಯವರ ಗಮನ ಸೆಳೆದಿದೆ. ಪಕ್ಷಕ್ಕೆ ದೊಡ್ಡ ಯಶಸ್ಸು ಸಿಗಬೇಕೆಂದರೆ 'ಲೀಡರ್-ಟು-ಲೀಡರ್' ಬದಲು 'ಲೀಡರ್-ಟು-ಕೇಡರ್' ಸೂತ್ರವನ್ನು ಅನುಸರಿಸುವುದು ಅನಿವಾರ್ಯ ಎಂಬುದು ನಿಖಿಲ್ ಅವರು ಕಂಡುಹಿಡಿದ ಸತ್ಯ.

ಇದುವರೆಗೆ ಒಂದು ಕ್ಷೇತ್ರದಲ್ಲಿ ಗೆಲುವು ಗಳಿಸಲು ನಾವು 'ಲೀಡರ್-ಟು-ಲೀಡರ್' ಸೂತ್ರವನ್ನು ಅನುಸರಿಸುತ್ತಾ ಬಂದಿದ್ದೇವೆ. ಅಂದರೆ? ರಾಜ್ಯದ ನಾಯಕರು ಕ್ಷೇತ್ರದ ಪ್ರತಿಯೊಂದು ವಿಷಯಗಳಿಗೂ ಸ್ಥಳೀಯ ನಾಯಕರನ್ನು ಅವಲಂಬಿಸುವ ಕೆಲಸವಾಗುತ್ತಿತ್ತು. ಅದೇ ರೀತಿ ನಮ್ಮ ಹಿಂದೆ ಇಷ್ಟು ಜನರಿದ್ದಾರೆ ಎಂಬುದರಿಂದ ಹಿಡಿದು ಎಲ್ಲದಕ್ಕೂ ಆ ಸ್ಥಳೀಯ ನಾಯಕರನ್ನೇ ನಂಬುವ ಕೆಲಸವಾಗುತ್ತಿತ್ತು. ಇದರ ಮಧ್ಯೆ ಕ್ಷೇತ್ರದ ಕಾರ್ಯಕರ್ತರಿಗೆ ಕಡಿಮೆ ಪ್ರಾತಿನಿಧ್ಯ ಸಿಗುತ್ತಿತ್ತು. ಅಂದ ಹಾಗೆ, ರಣಾಂಗಣದಲ್ಲಿ ಹೋರಾಡುವಾಗ ದಂಡನಾಯಕನಿಗೆ ಮಾತ್ರವಲ್ಲ, ಸೈನಿಕರಿಗೂ ಹೆಚ್ಚಿನ ಕೆಚ್ಚಿರಬೇಕು. ಆದರೆ ನಾವು ಆ ಕಡೆ ಗಮನ ಕೊಡದ ಪರಿಣಾಮವಾಗಿ ದಂಡನಾಯಕನ ಕೆಚ್ಚಿನ ಮೇಲೆ ಪಕ್ಷದ ಸೈನ್ಯ ಹೋರಾಡಬೇಕಿತ್ತು. ಆದರೆ ಹಲವು ಸಂದರ್ಭಗಳಲ್ಲಿ ನಮ್ಮ ಸೈನ್ಯದ ದಂಡನಾಯಕ ಎದುರಾಳಿಯ ಜತೆ ಹೊಂದಾಣಿಕೆ ಮಾಡಿಕೊಂಡು ನಮ್ಮ ಸೈನ್ಯದ ಆತ್ಮವಿಶ್ವಾಸ ಕುಗ್ಗುವಂತೆ ಮಾಡುತ್ತಿದ್ದರು. ಹೀಗಾಗಿ ಈ ದುಃಸ್ಥಿತಿಯನ್ನು ತಡೆಗಟ್ಟಲು 'ಲೀಡರ್-ಟು-ಲೀಡರ್' ಬದಲು 'ಲೀಡರ್-ಟು-ಕೇಡರ್' ತಂತ್ರವನ್ನು ಅನುಸರಿಸಬೇಕು. ಅರ್ಥಾತ್, ಒಂದು ಕ್ಷೇತ್ರದ ಆಗುಹೋಗುಗಳ ಬಗ್ಗೆ ಕಾರ್ಯಕರ್ತರ ವಿಶ್ವಾಸವನ್ನು ಗಳಿಸಿ ಮುಂದುವರಿಯಬೇಕು ಎಂಬುದು ನಿಖಿಲ್ ಕುಮಾರಸ್ವಾಮಿಯವರ ವಾದ. ಅಂದ ಹಾಗೆ, ಅವರು ಈ 'ಲೀಡರ್-ಟು-ಕೇಡರ್' ಸೂತ್ರವನ್ನು ಕಂಡುಹಿಡಿದಿದ್ದು ಸ್ವಂತ ಅನುಭವದಿಂದ. ಈ ಹಿಂದೆ ಮೂರು ಬಾರಿ ಚುನಾವಣೆಯಲ್ಲಿ ಸ್ಪರ್ಧಿಸಿದರೂ, ಪಕ್ಷದ ಘಟಾನುಘಟಿ ನಾಯಕರೇ ಬಂದು ತಮ್ಮ ಪರವಾಗಿ ಹೋರಾಡಿದರೂ ತಮಗೆ ಏಕೆ ಸೋಲಾಯಿತು? ಅಂತ ನಿಖಿಲ್ ಆತ್ಮವಿಮರ್ಶೆ ಮಾಡಿಕೊಂಡಿದ್ದರಂತೆ. ಈ ಸಂದರ್ಭದಲ್ಲಿ ಅವರಿಗೆ ಹೊಳೆದ ಸತ್ಯವೇ ಇದು. ಅವತ್ತು ನಾವು 'ಲೀಡರ್-ಟು-ಲೀಡರ್' ಸೂತ್ರದ ಬದಲು 'ಲೀಡರ್-ಟು-ಕೇಡರ್' ಸೂತ್ರವನ್ನು ಅನುಸರಿಸಿದ್ದಿದ್ದರೆ, ಸೋಲುವ ಪ್ರಮೇಯ ಎದುರಾಗುತ್ತಿರಲಿಲ್ಲ ಎಂಬುದು ಅವರ ಲೆಕ್ಕಾಚಾರ. ಈ ಲೆಕ್ಕಾಚಾರದ ಬಗ್ಗೆ ಅವರು ತಮ್ಮ ತಂದೆ ಕುಮಾರಸ್ವಾಮಿಯವರಿಗೆ ಮತ್ತು ಅಜ್ಜ ದೇವೇಗೌಡರಿಗೆ ವಿವರಿಸಿದಾಗ 'ಶಬ್ಬಾಸ್' ಎಂಬ ಮೆಚ್ಚುಗೆ ಸಿಕ್ಕಿದೆಯಂತೆ...

ರಾಜ್ಯ ಕ್ರಿಕೆಟ್‌ಗೆ ಕಾಯಕಲ್ಪ ಅನಿವಾರ್ಯವಾಗಿದೆ..

ವೆಂಕಟೇಶ್ ಪ್ರಸಾದರು ಗೆದ್ದ ಮಾತ್ರಕ್ಕೆ ಅವರ ಕೆಲಸ ಮುಗಿಯುವುದಿಲ್ಲ; ಏಕೆಂದರೆ, ಅವರನ್ನು ಗೆಲ್ಲಿಸಿರುವುದೇ 'ಹೊಣೆಗಾರಿಕೆಯನ್ನು ಸಮರ್ಥವಾಗಿ ನಿಭಾಯಿಸಬೇಕು' ಎಂಬ ನಿರೀಕ್ಷೆಯೊಂದಿಗೆ. ಈ ಹಿಂದಿದ್ದ ಆಡಳಿತ ಮಂಡಳಿಯು ಮಾಡಿರುವ ಅಕ್ರಮಗಳು, ಅನ್ಯಾಯದ ನಿರ್ಧಾರಗಳು ಇವೆಲ್ಲದರ ಒಟ್ಟು ಪರಿಣಾಮಗಳು ಕೂಡ ಪ್ರಸಾದರ ಗೆಲುವಿಗೆ ಪೂರಕವಾಗಿವೆ.

ಪಿಚ್ ರಿಪೋರ್ಟ್

ಮರಿಲಿಂಗಗೌಡ ಮಾಲಿ ಪಾಟೀಲ್
vveditoped@gmail.com

ಭಾರತದ ಅತ್ಯಂತ ಜನಪ್ರಿಯ ಕ್ರೀಡೆ 'ಕ್ರಿಕೆಟ್'. ಇದು ಕೇವಲ ಆಟವಲ್ಲ, ಬದಲಿಗೆ ಭಾವನೆ, ಸಂಸ್ಕೃತಿಗಳು ಮಿಳಿತಗೊಂಡು ಕೋಟ್ಯಂತರ ಅಭಿಮಾನಿಗಳ ಹೃದಯದಲ್ಲಿ ಅಸ್ತಿತ್ವವನ್ನು ಕಂಡುಕೊಂಡಿರುವ ಒಂದು ಹಿತಾನುಭವ. ಈ ಹಿನ್ನೆಲೆಯಲ್ಲಿ ರಾಜ್ಯ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷಗಿರಿಯು ಅತೀವ ಹೊಣೆಗಾರಿಕೆಯಿಂದ ಕೂಡಿದ ಪ್ರಮುಖ ಸ್ಥಾನವಾಗಿದೆ. ಇಂಥ ಹೊಣೆಯನ್ನು ಹೊತ್ತಿರುವುದು ದೇಶದ ಮಾಜಿ ಅಂತಾರಾಷ್ಟ್ರೀಯ ವೇಗದ ಬೌಲರ್, ಕಠಿಣ ಪರಿಶ್ರಮ ಮತ್ತು ಶಿಸ್ತುಪಾಲನೆಯ ಪ್ರತೀಕವಾದ ವೆಂಕಟೇಶ್ ಪ್ರಸಾದ್. ಇವರ ನೇತೃತ್ವವು ರಾಜ್ಯ ಕ್ರಿಕೆಟ್‌ಗೆ ಹೊಸ ದಿಕ್ಕು, ಹೊಸ ಶಕ್ತಿ ಮತ್ತು ಹೊಸ ದೃಷ್ಟಿಕೋನವನ್ನು ನೀಡಲಿದೆ ಎಂಬ ನಿರೀಕ್ಷೆ ಕ್ರೀಡಾಭಿಮಾನಿಗಳದು.

ವೆಂಕಟೇಶ್ ಪ್ರಸಾದರ ಗೆಲುವು ಕ್ರೀಡಾಭಿಮಾನಿಗಳಿಗೆ ಹರ್ಷೋಲ್ಲಾಸಗಳನ್ನು ಉಂಟುಮಾಡಿದೆ. ಅವರಿಗಿಂತ ಮೊದಲಿದ್ದ ಆಡಳಿತ ಮಂಡಳಿಯ ಬೇಜವಾಬ್ದಾರಿಯಿಂದಾಗಿ ಕರ್ನಾಟಕ ಕ್ರಿಕೆಟ್ ಹಳ್ಳಹಿಡಿದು ಹೋಗಿದೆ. ಪಂದ್ಯಗಳಲ್ಲಿ ಕರ್ನಾಟಕ ತಂಡ ಗೆಲ್ಲುವುದಕ್ಕಿಂತ ಸೋಲುತ್ತಿರುವುದೇ ಹೆಚ್ಚು. ನಮ್ಮವರು ರಣಜಿ ಟ್ರೋಫಿ ಗೆದ್ದು ಯಾವುದೋ ಕಾಲವಾಗಿದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಕಾಲ್ತುಳಿತ ಪ್ರಕರಣದ ಪರಿಣಾಮವಾಗಿ ಐಪಿಎಲ್ ಪಂದ್ಯಾವಳಿಯಲ್ಲಿ ಆರ್‌ಸಿಬಿ ತಂಡದ ಪಂದ್ಯಗಳನ್ನು ಅಲ್ಲಿ ನಡೆಸಲು ಅವಕಾಶ ಕೊಡುವುದಿಲ್ಲ ಎಂದು ಬಿಸಿಸಿಐ ಹೇಳಿದ್ದು, ಇದು ಆರ್‌ಸಿಬಿ ಅಭಿಮಾನಿಗಳಿಗೆ ಆಘಾತವನ್ನೇ ಉಂಟುಮಾಡಿದೆ. ಇವೆಲ್ಲವೂ ಕರ್ನಾಟಕ ಕ್ರಿಕೆಟ್ ಸಂಸ್ಥೆಯ ಆಡಳಿತ ಮಂಡಳಿಯನ್ನು ದೋಷಿಯ ಸ್ಥಾನದಲ್ಲಿ ನಿಲ್ಲಿಸುತ್ತವೆ. ಹೀಗಾಗಿ ರಾಜ್ಯ ಕ್ರಿಕೆಟ್‌ಗೆ ಕಾಯಕಲ್ಪ ಅನಿವಾರ್ಯವಾಗಿತ್ತು.

ಕ್ರೀಡಾಭಿಮಾನಿಗಳಿಗೆ ಮಾತ್ರವಲ್ಲ, ರಾಜ್ಯ ಕ್ರಿಕೆಟ್ ಸಂಸ್ಥೆಯ ಸದಸ್ಯರಿಗೂ ಒಂದು ಬದಲಾವಣೆ ಬೇಕಿತ್ತು. ಅದು ಚುನಾವಣಾ ಫಲಿತಾಂಶದಲ್ಲೇ ಸ್ಪಷ್ಟವಾಗಿ ಗೋಚರಿಸಿದೆ. ವಿರೋಧಿ ಬಣದ ಶಾಂತಕುಮಾರ್‌ರ ನಾಮಪತ್ರ ತಿರಸ್ಕೃತವಾದ ಕಾರಣ ಅವರು ಕೋರ್ಟ್ ಮೆಟ್ಟಿಲೇರಿ ಸ್ಪರ್ಧೆಗೆ ಅವಕಾಶ ಪಡೆದರೂ ಸದಸ್ಯರ ಮನವನ್ನು ಗೆಲ್ಲಲಾಗಲಿಲ್ಲ. ವೆಂಕಟೇಶ್ ಪ್ರಸಾದ್ 749 ಮತಗಳನ್ನು ಪಡೆದರೆ, ಶಾಂತ್ ಕುಮಾರ್‌ರಿಗೆ ದಕ್ಕಿದ್ದು 558 ಮಾತ್ರವೇ. ವೆಂಕಟೇಶ್ ಪ್ರಸಾದ್‌ರನ್ನು ಬೆಂಬಲಿಸಿದವರಲ್ಲಿ, ಭಾರತೀಯ ಕ್ರಿಕೆಟ್‌ನ ಗೌರವವನ್ನು ಜಾಗತಿಕ ಮಟ್ಟದಲ್ಲಿ ಎತ್ತಿಹಿಡಿದ ಅನಿಲ್ ಕುಂಬ್ಳೆ, ಜಾವಗಲ್ ಶ್ರೀನಾಥ್ ಸೇರಿದಂತೆ ಬಹಳಷ್ಟು ಆಟಗಾರರಿದ್ದಾರೆ. ಹೀಗಾಗಿ ಹೊಸ ಆಡಳಿತ ಮಂಡಳಿಯ ಬಗ್ಗೆ ಭರವಸೆ ಹೆಚ್ಚಿದೆ.

ಈ ಭರವಸೆಯನ್ನು ಉಳಿಸಿಕೊಳ್ಳುವ ವಿಷಯದಲ್ಲಿ ವೆಂಕಟೇಶ್ ಪ್ರಸಾದ್ ಕೂಡಲೇ ಕಾರ್ಯೋನ್ಮುಖರಾಗಬೇಕಿದೆ. ಅವರು ಎದುರಿಸುತ್ತಿರುವ ಮೊದಲ ಸವಾಲೆಂದರೆ, ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮತ್ತೆ ಪಂದ್ಯಗಳು ನಡೆಯುವ ವ್ಯವಸ್ಥೆ ಮಾಡುವುದು. ಇದು ನಿಜಕ್ಕೂ ಒಂದು 'ಹರ್ಕ್ಯುಲಿಯನ್ ಟಾಸ್ಕ್'. ಏಕೆಂದರೆ, ಕಾಲ್ತುಳಿತದಲ್ಲಿ ಅಭಿಮಾನಿಗಳು ಜೀವ ಕಳೆದುಕೊಳ್ಳುವಂತಾದ ಕರಾಳ ಘಟನೆಯಿಂದಾಗಿ ಚಿನ್ನಸ್ವಾಮಿ ಕ್ರೀಡಾಂಗಣವು ಬಿಸಿಸಿಐನ 'ಬ್ಲ್ಯಾಕ್ ಲಿಸ್ಟ್'ನಲ್ಲಿದೆ. ಬಿಸಿಸಿಐ, ಕೇಂದ್ರ ಸರಕಾರ ಇವೆಲ್ಲದರ ಜತೆ ಮಾತನಾಡಿ, ಐಪಿಎಲ್ ಪಂದ್ಯಗಳನ್ನು ಮತ್ತೆ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ತಂದು, ಅಭಿಮಾನಿಗಳ ಮುಖದಲ್ಲಿ ನಗು ಮೂಡಿಸುವ ಹೊಣೆ ವೆಂಕಟೇಶ್ ಪ್ರಸಾದ್ ಅವರ ಮೇಲಿದೆ.

ಕರ್ನಾಟಕವನ್ನು ಗೆಲುವಿನ ಹಳಿಗೆ ಮತ್ತೆ ತರುವುದು ಪ್ರಸಾದ್‌ರ ಹೆಗಲೇರಿರುವ ಇನ್ನೊಂದು ಹೊಣೆ. ವಿನಯ್ ಕುಮಾರ್ ನಾಯಕತ್ವದಲ್ಲಿ ರಾಜ್ಯ ತಂಡವು ರಣಜಿ ಟ್ರೋಫಿಯನ್ನು ಗೆದ್ದಿದ್ದಷ್ಟೇ, ಇದಾಗಿ ದಶಕವೇ ಕಳೆದಿದೆ. ಹೀಗಾಗಿ, ಮೊದಲಿಗೆ ನೈಜಪ್ರತಿಭೆಗಳನ್ನು ತಂಡಕ್ಕೆ ಆಯ್ಕೆ ಮಾಡಿ, ಅವರಲ್ಲಿ ಗೆಲುವಿನ ಹಸಿವನ್ನು ಹುಟ್ಟಿಸಿ, ಸರಿಯಾದ ತರಬೇತಿ ನೀಡಿ, ರಣತಂತ್ರಗಳನ್ನು ಹೆಣೆದು, ತಂಡಕ್ಕೆ ಗೆಲುವಿನ ಕಿರೀಟ ತೊಡಿಸುವುದು ಅಂದುಕೊಂಡಷ್ಟು ಸಣ್ಣ ಮತ್ತು ಸುಲಭದ ಕೆಲಸವಲ್ಲ. ಆದರೆ ಈ ಹೊಣೆಯ ಭಾರವನ್ನು ತಗ್ಗಿಸಲು ಪ್ರಸಾದ್ ಅವರಿಗೆ ಜಾವಗಲ್ ಶ್ರೀನಾಥ್, ಅನಿಲ್ ಕುಂಬ್ಳೆಯವರಂಥ ದಿಗ್ಗಜರ ನೆರವಿದೆ. ''ನಾವು ಕ್ರಿಕೆಟ್‌ನಿಂದ ದೂರಹೋಗುವುದಿಲ್ಲ, ನನಗೆ ಪದವಿ ಬೇಕಿಲ್ಲ. ವಾತಾವರಣ ಸರಿಯಿದ್ದರೆ ನಾನು ಬೆಂಬಲ ನೀಡುತ್ತೇನೆ. ಈಗ ವಾತಾವರಣ ಸರಿಯಾಗಿದೆ'' ಎಂದವರು ಅನಿಲ್ ಕುಂಬ್ಳೆ; ಯುವಪೀಳಿಗೆಗೆ ಆದರ್ಶವಾಗಿರುವ ಇಂಥವರು ಮಾರ್ಗದರ್ಶನ ಮಾಡಿದರೆ ರಾಜ್ಯ ತಂಡ ಮತ್ತೊಮ್ಮೆ ಚಾಂಪಿಯನ್ ಆಗುವುದರಲ್ಲಿ ಅನುಮಾನವಿಲ್ಲ.

ನೂತನ ಅಧ್ಯಕ್ಷ ವೆಂಕಟೇಶ್ ಪ್ರಸಾದ್‌ರಿಗೆ ಶುಭ ಕೋರಿರುವ 'ಮೈಸೂರು ಎಕ್ಸ್‌ಪ್ರೆಸ್' ಜಾವಗಲ್ ಶ್ರೀನಾಥ್ ಅವರು, ''ಹಿಂದಿನ ಮ್ಯಾನೇಜ್‌ಮೆಂಟ್ ಕರ್ನಾಟಕ ಕ್ರಿಕೆಟ್ ಅನ್ನು ಹಾಳುಮಾಡಿದೆ. ಆ ಆಡಳಿತ ಮಂಡಳಿಯಿಂದಾಗಿ ಕ್ರಿಕೆಟ್ ಆಟಗಾರರು ನಿರಾಶರಾಗಿದ್ದಾರೆ. ರಾಜ್ಯದಲ್ಲಿ ಕ್ರಿಕೆಟ್ ನಿಂತುಹೋಗಿದೆ. ಪಂದ್ಯಾವಳಿಗಳು ಕಾಲಕ್ಕೆ ಸರಿಯಾಗಿ ನಡೆಯಬೇಕು, ಕನಿಷ್ಠ ಸಾವಿರ ಜನರಿಗೆ ಕ್ರಿಕೆಟಿಂಗ್ ಅವಕಾಶ ಕೊಡಿಸಬೇಕು. ನಾವು 6-7 ಕಡೆ ಅಕಾಡೆಮಿ ಮಾಡಿದ್ದೆವು. ನಾವು ಮಾಡಿದ್ದ ಒಳ್ಳೆಯ ಕೆಲಸಗಳನ್ನು ಬ್ರಿಜೇಶ್ ಪಟೇಲ್ ಬಣ ನಿಲ್ಲಿಸಿತು. ಅವನ್ನೆಲ್ಲಾ ವೆಂಕಿ ಮತ್ತೊಮ್ಮೆ ಆರಂಭಿಸುತ್ತಾರೆ ಎಂಬ ನಂಬಿಕೆ ನನಗಿದೆ'' ಎಂದಿದ್ದಾರೆ.

ಒಂದು ಕಾಲದಲ್ಲಿ ರಾಷ್ಟ್ರೀಯ ತಂಡದಲ್ಲಿ ಕರ್ನಾಟಕದ 6 ಕ್ರಿಕೆಟಿಗರು ಸ್ಥಾನ ಪಡೆದಿದ್ದರು. ಈಗ ಟೆಸ್ಟ್, ಏಕದಿನ, ಟಿ-20ಯಂಥ ವಿವಿಧ ಮಾದರಿಗಳಿದ್ದು ಹೆಚ್ಚಿನ ಆಟಗಾರರ ಅಗತ್ಯವಿದ್ದರೂ, ರಾಷ್ಟ್ರೀಯ ತಂಡದಲ್ಲಿ ಇಬ್ಬರು ಆಟಗಾರರಿಗೆ ಸ್ಥಾನ ಸಿಗುತ್ತದೆ ಎಂಬುದೂ ಖಾತ್ರಿಯಿಲ್ಲ. ರಾಜ್ಯ ತಂಡವನ್ನು ರಾಷ್ಟ್ರ ಮಟ್ಟದಲ್ಲಿ ಶ್ರೇಷ್ಠ ತಂಡವಾಗಿಸಬೇಕಿದೆ. ರಣಜಿ, ವಿಜಯ್ ಹಜಾರೆ, ಮುಷ್ತಾಕ್ ಅಲಿ ಟೂರ್ನಮೆಂಟ್‌ಗಳಲ್ಲಿ ರಾಜ್ಯದ ಪ್ರದರ್ಶನವನ್ನು ಉತ್ತಮ ಮಟ್ಟಕ್ಕೆ ತೆಗೆದುಕೊಂಡು ಹೋಗಬೇಕು. ಆಗ ಆಟಗಾರರಿಗೆ ಸಹಜವಾಗಿಯೇ ರಾಷ್ಟ್ರೀಯ ತಂಡದಲ್ಲಿ ಅವಕಾಶ ದೊರೆಯುತ್ತದೆ. ಆದರೆ ಹಿಂದಿನ ಆಡಳಿತ ಮಂಡಳಿಯು ಕರ್ನಾಟಕ ಕ್ರಿಕೆಟ್‌ನ ಅಭಿವೃದ್ಧಿಗೆ ಯಾವುದೇ ಆಸಕ್ತಿ ತೋರಲಿಲ್ಲ. ಇದರಿಂದಾಗಿ ಪ್ರತಿಭಾವಂತ ಕ್ರಿಕೆಟಿಗರು ಬೇರೆ ರಾಜ್ಯಗಳಿಗೆ ವಲಸೆ ಹೋಗಿದ್ದಾರೆ. ಇಂಥ ಬೆಳವಣಿಗೆಗಳನ್ನು ತಡೆಗಟ್ಟಬೇಕಿದೆ.

ಕ್ರಿಕೆಟ್ ನಗರಗಳಿಗೇ ಸೀಮಿತವಾಗಿಬಿಡಬಾರದು; ಹಳ್ಳಿಗಳು ಮತ್ತು ತಾಲೂಕು ಮಟ್ಟಗಳಲ್ಲಿ ಉತ್ತಮ ಕೋಚ್‌ಗಳನ್ನು ನಿಯೋಜಿಸಿ ತರಬೇತಿ ಸೌಲಭ್ಯಗಳನ್ನು ನೀಡಬೇಕು. ಕ್ರಿಕೆಟ್ ಸಂಸ್ಥೆಗಳಿಗೆ ಹರಿದುಬರುವ ನಿಧಿಗಳನ್ನು ಆಟಗಾರರ ರೂಪಣೆಗೆ ಬಳಸುವಂತಾಗಬೇಕು. ಪ್ರಸಾದ್ ಅವರು 'ಅಕೌಂಟೆಬಿಲಿಟಿ'ಗೆ ಮಹತ್ವ ನೀಡುವ ವ್ಯಕ್ತಿ. ಕಳೆದ ಕೆಲವು ವರ್ಷಗಳಿಂದ ಮಹಿಳಾ ಕ್ರಿಕೆಟ್‌ಗೆ ಮಹತ್ವ ಹೆಚ್ಚಾಗಿದ್ದು, ಇದನ್ನು ಮುನ್ನಡೆಸುವಲ್ಲಿ ಪ್ರಸಾದ್ ಪ್ರಮುಖ ಪಾತ್ರವನ್ನು ವಹಿಸಬಹುದು. ಮಹಿಳೆಯರಿಗಾಗಿ ಪ್ರತ್ಯೇಕ ಕೋಚ್‌ಗಳು, ಹೆಚ್ಚಿನ ಲೀಗ್ ಪಂದ್ಯಗಳು, ಸುರಕ್ಷಿತ ಮತ್ತು ಪ್ರೋತ್ಸಾಹಕಾರಿ ಪರಿಸರ ಒದಗಿಸುವುದರ ಮೂಲಕ ಮಹಿಳಾ ಕ್ರಿಕೆಟಿಗರಿಗೆ ಹೆಚ್ಚಿನ ಅವಕಾಶ ನೀಡಬಹುದು.

ಆಟಗಾರರ ಆಯ್ಕೆಯಲ್ಲಿ ಪಕ್ಷಪಾತವಿದೆ ಎಂಬ ದೂರು ಸಾಮಾನ್ಯವಾಗಿ ಕೇಳಿಬರುತ್ತಿದ್ದು, ಪ್ರಸಾದ್ ಇದನ್ನು ಶಾಶ್ವತವಾಗಿ ನಿವಾರಿಸಬಹುದು ಮತ್ತು ಗ್ರಾಮೀಣ ಪ್ರದೇಶಗಳಲ್ಲಿರುವ ಕ್ರೀಡಾ ಮೂಲಸೌಕರ್ಯದ ಕೊರತೆಯನ್ನು ತುಂಬಬಹುದು. ಅಧ್ಯಕ್ಷೀಯ ಅವಧಿಯಲ್ಲಿ ನಿಷ್ಪಕ್ಷಪಾತಿ ವರ್ತನೆ, ದಿಟ್ಟ ನಿರ್ಧಾರಗಳನ್ನು ತಳೆಯುವಿಕೆ, ಆಟಗಾರರ ಕ್ಷೇಮಾಭಿವೃದ್ಧಿಗೆ ಆದ್ಯತೆ ನೀಡುವಿಕೆ, ಸಂಸ್ಥೆಯ ಒಳಜಗಳಗಳನ್ನು ನಿವಾರಿಸುವಿಕೆ, ಮಾಧ್ಯಮದವರೊಂದಿಗೆ ಪಾರದರ್ಶಕತೆ ಕಾಯ್ದುಕೊಳ್ಳುವಿಕೆ, ಅಭಿಮಾನಿಗಳೊಂದಿಗೆ ಸ್ನೇಹಪೂರ್ಣ

ಸಂವಹನ ಇಂಥ ನಡೆಗಳಿಗೆ ವೆಂಕಟೇಶ ಪ್ರಸಾದ್ ಅವರು ಮುಂದಾದರೆ, ರಾಜ್ಯ ಕ್ರಿಕೆಟ್ ಶ್ರೇಷ್ಠ ಮಟ್ಟವನ್ನು ಮುಟ್ಟುವುದರಲ್ಲಿ ಸಂದೇಹವಿಲ್ಲ.

ವೆಂಕಟೇಶ್ ಪ್ರಸಾದ್ ಅವರು ಗೆದ್ದ ಮಾತ್ರಕ್ಕೆ ಅವರ ಕೆಲಸ ಮುಗಿಯುವುದಿಲ್ಲ; ಏಕೆಂದರೆ, ಅವರನ್ನು ಗೆಲ್ಲಿಸಿರುವುದೇ 'ಹೊಣೆಗಾರಿಕೆಯನ್ನು ಸಮರ್ಥವಾಗಿ ನಿಭಾಯಿಸಬೇಕು' ಎಂಬ ನಿರೀಕ್ಷೆಯೊಂದಿಗೆ. ಪ್ರಸಾದ್ ಅವರಿಗೆ ದಕ್ಕಿರುವ ಗೆಲುವಿಗೆ, ಅವರ ಸಾಮರ್ಥ್ಯವೇ ಮುಖ್ಯ ಕಾರಣವಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಅದರ ಜತೆಗೆ, ಈ ಹಿಂದೆ ಇದ್ದ ಆಡಳಿತ ಮಂಡಳಿಯು ಮಾಡಿರುವ ಅಕ್ರಮಗಳು, ಅನ್ಯಾಯದ ನಿರ್ಧಾರಗಳು, 'ಕೆಎಸ್‌ಸಿಎ'ಯ ಸದಸ್ಯರನ್ನು ಅಗೌರವಯುತವಾಗಿ ನಡೆಸಿಕೊಂಡಿದ್ದು ಇವೆಲ್ಲದರ ಒಟ್ಟು ಪರಿಣಾಮಗಳು ಕೂಡ ಪ್ರಸಾದ್ ಅವರ ಗೆಲುವಿಗೆ ಪೂರಕವಾಗಿವೆ ಎನ್ನಲಡ್ಡಿಯಿಲ್ಲ.

ಈ ಹಿಂದಿನ ಮಂಡಳಿಯವರು ಸಂಸ್ಥೆಯ ಸದಸ್ಯರಿಗೆ ಕವಡೆಕಾಸಿನ ಕಿಮ್ಮತ್ತು ನೀಡದೆ ದಬ್ಬಾಳಿಕೆಯಿಂದ ನಡೆಸಿಕೊಂಡಿದ್ದಾರೆ. ಪ್ರಸಾದ್ ತಮ್ಮ ಅಧಿಕಾರಾವಧಿಯಲ್ಲಿ ಅಂಥ ಸಣ್ಣ ಅಚಾತುರ್ಯಕ್ಕೂ ಆಸ್ಪದ ನೀಡದೆ ಸದಸ್ಯರನ್ನು ಗೌರವಯುತವಾಗಿ ಕಾಣಬೇಕಿದೆ. ಮ್ಯಾನೇಜಿಂಗ್ ಕಮಿಟಿ, ಟೂರ್ನಮೆಂಟ್ ಕಮಿಟಿ, ಆಯ್ಕೆ ಸಮಿತಿ, ತರಬೇತುದಾರರ ಸಮಿತಿ, ಸಪೋರ್ಟಿಂಗ್ ಸ್ಟಾಫ್ ವಿರುದ್ಧ ಕೇಳಿಬಂದಿರುವ ಆರೋಪಗಳ ಬಗ್ಗೆಯೂ ಅವರು ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕಿದೆ. 'ಹೊರ ರಾಜ್ಯದವರು ಕರ್ನಾಟಕವನ್ನು ಅಕ್ರಮವಾಗಿ ಪ್ರತಿನಿಧಿಸುತ್ತಿದ್ದಾರೆ' ಎಂಬುದು ಕೆಎಸ್‌ಸಿಎ ವಿರುದ್ಧ ಸಾಕಷ್ಟು ಸಮಯದಿಂದ ಕೇಳಿಬರುತ್ತಿರುವ ದೊಡ್ಡ ಆರೋಪ. ಈ ಕೆಟ್ಟ ಹಣೆಪಟ್ಟಿಯನ್ನು ಕಳಚುವಂತಾಗಬೇಕು ಮತ್ತು ಕನ್ನಡಿಗರೇ ಕರ್ನಾಟಕ ತಂಡವನ್ನು ಪ್ರತಿನಿಧಿಸುವಂತಾಗಬೇಕು. ವೆಂಕಟೇಶ್ ಪ್ರಸಾದರು ಈ ನಿಟ್ಟಿನಲ್ಲಿ ಹೊಸ ನಿಯಮ ತಂದು, ಹೊಸ ಮನ್ವಂತರಕ್ಕೆ ನಾಂದಿ ಹಾಡಲಿ.

ವಿನಯ್ ಎಂಬ ಗೆಲುವಿನ ಸಾರಥಿ

ಬ್ರಿಜೇಶ್ ಬಣದ ವಿರುದ್ಧ ತಂಡವನ್ನು ಕಟ್ಟಿ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲ್ಲಬಹುದು ಎಂಬುದನ್ನು ರಣತಂತ್ರಗಾರ ಶ್ರೀಕೃಷ್ಣನಂತೆ ಲೆಕ್ಕಹಾಕಿದ್ದು ವೃತ್ತಿಯಲ್ಲಿ ಲೆಕ್ಕ ಪರಿಶೋಧಕರಾಗಿರುವ ವಿನಯ್ ಮೃತ್ಯುಂಜಯ ಅವರು. ಹೌದು, ''ವೆಂಕಟೇಶ್ ಪ್ರಸಾದರಂಥ ಲೆಜೆಂಡರಿ ಕ್ರಿಕೆಟರ್ ಮುಂದೆ ಬಂದು 'ಅಧ್ಯಕ್ಷನಾಗುತ್ತೇನೆ' ಎಂದಾಗ, ಅವರನ್ನು ಅವಿರೋಧವಾಗಿ ಆಯ್ಕೆ ಮಾಡಬೇಕಿತ್ತು'' ಎಂಬ ವಾದವನ್ನು ಮುಂದಿಟ್ಟು, ಪ್ರಸಾದ್ ಮತ್ತವರ ತಂಡದ ವಿಜಯದಲ್ಲಿ ಪ್ರಮುಖ ಪಾತ್ರ ವಹಿಸಿದವರು ವಿನಯ್ ಮೃತ್ಯುಂಜಯ ಅವರು. ಚುನಾವಣೆಯನ್ನು ಮುಂದೂಡಲು ಬ್ರಿಜೇಶ್ ಬಣ ಇನ್ನಿಲ್ಲದ ಪ್ರಯತ್ನಗಳನ್ನು ನಡೆಸಿತು, ಯಾಕೆಂದರೆ ಅದಕ್ಕೆ ಸೋಲಿನ ಭಯವಿತ್ತು. ಜೂನ್ 4ರಂದು ಸಂಭವಿಸಿದ ಕಾಲ್ತುಳಿತದ ಪ್ರಕರಣದಲ್ಲಿ 11 ಮಂದಿ ಜೀವತೆತ್ತ ಬಳಿಕ, ನೈತಿಕ ಹೊಣೆ ಹೊತ್ತು ಅಂದಿನ ಆಡಳಿತ ಮಂಡಳಿ ರಾಜೀನಾಮೆ ನೀಡಿತ್ತು. ಯಾವ ನೈತಿಕತೆಯ ಮೇಲೆ ಮತ್ತೆ ಅದೇ ತಂಡದವರು ಚುನಾವಣೆಗೆ ನಿಲ್ಲುತ್ತಾರೆ ಎಂದು ಪ್ರಶ್ನಿಸಿ ಅಸ್ತ್ರ ಬಿಟ್ಟವರು ವಿನಯ್ ಮೃತ್ಯುಂಜಯ.

ವಾಸ್ತವವಾಗಿ, ಅಂದಿನ ಆಡಳಿತ ಮಂಡಳಿಯು ರಾಜೀನಾಮೆ ನೀಡಿದ ಬಳಿಕ, ಸೆಪ್ಟೆಂಬರ್ 30ರ ಒಳಗೆ ಚುನಾವಣೆ ನಡೆಯಬೇಕಿತ್ತು. ಆದರೆ ಸೋಲಿನ ಭಯದಿಂದ ಸಲ್ಲದ ನೆಪಗಳನ್ನು ಹೇಳುತ್ತಾ, 'ಡಿಸೆಂಬರ್ ನಂತರ ನೋಡೋಣ' ಎನ್ನುತ್ತಾ, ಚುನಾವಣೆಯನ್ನು ಮುಂದೂಡುವಲ್ಲಿ ಬ್ರಿಜೇಶ್ ಬಣ ಯಶಸ್ವಿಯಾಯಿತು. ವಿನಯ್ ಮೃತ್ಯುಂಜಯ್ ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸಿದ್ದರು; ತಮ್ಮ ನಾಮಪತ್ರ ತಿರಸ್ಕೃತವಾದರೂ ಯಾವ ಸ್ವಾರ್ಥ ಬಯಸದೆ, ಕೆಎಸ್‌ಸಿಎ ಸಂಸ್ಥೆಯ ಹಿತಕ್ಕಾಗಿ ಸಂಪೂರ್ಣ ಚುನಾವಣಾ ಪ್ರಕ್ರಿಯೆಯನ್ನು ಮುನ್ನಡೆಸಿ, ಪ್ರಸಾದ್ ಬಣಕ್ಕೆ ಗೆಲುವು ತಂದುಕೊಡುವಲ್ಲಿ ಅವರು ಶ್ರಮಿಸಿದರು. ಅಂದರೆ, ಪ್ರಸಾದ್ ಬಣಕ್ಕೆ ಗೆಲುವು ಸಿಗುವಂತಾಗುವಲ್ಲಿ ವಿನಯ್ ಮೃತ್ಯುಂಜಯರ ಪಾತ್ರ ಬಹಳ ದೊಡ್ಡದಿದೆ. ಒಂದು ರೀತಿಯಲ್ಲಿದು, ಮಹಾಭಾರತದಲ್ಲಿ ಪಾಂಡವರ ಬಳಗಕ್ಕೆ ಗೆಲುವು ಒದಗಿಸುವಲ್ಲಿ ಶ್ರೀಕೃಷ್ಣವಹಿಸಿದ 'ರೂವಾರಿ ಪಾತ್ರ'ವನ್ನು ನೆನಪಿಸುವಂತಿತ್ತು; ಪ್ರಸಾದ್‌ರ ಪಾಲಿಗೆ ತಂತ್ರಗಾರ ಚಾಣಕ್ಯನಂತೆ ಕಾರ್ಯನಿರ್ವಹಿಸಿದ್ದರ ಜತೆಗೆ, ಅವರ ಚುನಾವಣಾ ರಥಕ್ಕೆ ಕೃಷ್ಣನಂತೆ ಸಾರಥಿಯಾದವರು ವಿನಯ್ ಮೃತ್ಯುಂಜಯ ಅವರು. ಹೀಗಾಗಿ ಗೆಲುವಿನ ನಂತರ ಅವರನ್ನು ಭುಜದ ಮೇಲೆ ಕೂರಿಸಿ ಮೆರೆಸುವ ಮೂಲಕ ಪ್ರಸಾದ್ ಬಣವು ಸಂಭ್ರಮಾಚರಣೆ ಮಾಡಿದ್ದು ಸಹಜವಾಗೇ ಇತ್ತು.

ಆಟಗಾರರಾಗಿದ್ದಾಗ ವೆಂಕಟೇಶ್ ಪ್ರಸಾದ್ ಅವರು ತಾವು ತೋರಿದ್ದ ಶಿಸ್ತು ಮತ್ತು ಹೋರಾಟದ ಮನೋಭಾವವನ್ನು ಈಗಿನ ಹೊಸ ಹೊಣೆಗಾರಿಕೆಯಲ್ಲೂ ತೋರಿಸಲಿ, ವಿನಯ್ ಮೃತ್ಯುಂಜಯರ ಮಾರ್ಗದರ್ಶನದಲ್ಲಿ ಕೆಎಸ್‌ಸಿಎ ಸಂಸ್ಥೆಗೆ ಹೊಸ ದಿಕ್ಕನ್ನು ತೋರಲಿ ಎಂಬುದು ಕ್ರೀಡಾಭಿಮಾನಿಗಳ ಆಶಯ ಮತ್ತು ನಿರೀಕ್ಷೆ. ಸಮಸ್ತ ಕ್ರೀಡಾಭಿಮಾನಿಗಳ ಪರವಾಗಿ- 'Congratulations Venki...'!

(ಲೇಖಕರು ಸಾಮಾಜಿಕ ಹೋರಾಟಗಾರರು)

ಭಟ್ಟರ್ ಸ್ಕಾಚ್

● **ಎಂ.ನಿತೀಶ್ ರಾವ್, (ಇಮೇಲ್ ಮೂಲಕ)**
ಭಟ್ರೇ, ಪ್ರಭಾಕರ ಜೋಶಿ ಅವರಿಗೆ ಕ್ಷಮೆ ಕೇಳಬೇಕು ಎಂದು ಅನೇಕರು ನಿಮ್ಮನ್ನು ಆಗ್ರಹಿಸಿದ್ದಾರಲ್ಲ?
– **ಅಸಲಿಗೆ ಜೋಶಿಯವರ ಬಗ್ಗೆ ಹಾಗೆ ಬರೆದಿದ್ದು ಯಾಕೆ ಎಂದು ಯಾರೂ ಕೇಳಲಿಲ್ಲವಲ್ಲ!**

● **ಕೃಷ್ಣ ಆಚಾರ್ಯ, ಉಡುಪಿ**
ಭಟ್ರೇ, ನಿಮ್ಮ ಒಂದು ವಾಕ್ಯದ ಉತ್ತರ ಅನೇಕರ ಹುಬ್ಬೇರುವಂತೆ ಮಾಡಿದೆಯಲ್ಲಾ?
– **ಒಂದು ವಾಕ್ಯ ಅನ್ನುವುದಕ್ಕಿಂತ, ನಾಲ್ಕು ಪದಗಳ ಉತ್ತರ ಅನ್ನಿ!**

● **ಸುಮಾ ಗಣೇಶ, ಮಂಗಳೂರು**
ಭಟ್ರೇ, ಪ್ರಭಾಕರ ಜೋಶಿ ಅವರ ಜತೆ ಕಾದಾಟ ಯಾಕೆ ಸ್ವಾಮಿ?
– **ಮೊದಲು ಕಾದಾಟ ಶುರು ಮಾಡಿದವರು ಯಾರು ಎಂಬುದನ್ನು ಹೇಳಿದ್ದರೆ ಚೆನ್ನಾಗಿತ್ತು!**

● **ಮಹೇಶ ಕೋಟ್ಯಾನ, ಕುಂದಾಪುರ**
ಭಟ್ರೇ, ನಿಮ್ಮ ಸ್ಕಾಚ್ ಭಾರಿ ಕೆಲಸ ಮಾಡುತ್ತದೆ ಅಂತ ಈ ಕಡೆ ಹೇಳ್ತಾರಲ್ಲ?
– **ಒಂದೇ 'ಶಾಟ್'ಗೆ ಪ್ರಭಾಕರ ಜೋಶಿ ಅಭಿಮಾನಿಗಳ ತಲೆ 'ಧಿಮ್' ಅನ್ನುತ್ತಿದೆಯಂತೆ!**

● **ನಾರಾಯಣ ಹೆಗಡೆ, ಶಿರಸಿ**
ಭಟ್ರೇ, ಕೆಲವು ಯಕ್ಷಗಾನ ಅರ್ಥಧಾರಿಗಳ ಸಮಸ್ಯೆ ಏನು?
– **ಸದಾ ಗುಣಗಾನ ಮಾಡುತ್ತಿರಬೇಕು ಎಂದು ಬಯಸೋದು!**

● **ಹರಿ ಓಂ ಶಾಸ್ತ್ರೀ, ಶಂಕರಪುರ**
ಭಟ್ರೇ, ಚಿನ್ನಸ್ವಾಮಿ ಕ್ರೀಡಾಂಗಣ ಕಾಲ್ತುಳಿತ, ಕೊಲ್ಕತ್ತಾ ಫುಟ್ಬಾಲ್ ಗಲಾಟೆ ನಡೆದ ಮೇಲೆ ಯೂನಿವರ್ಸಿಟಿಗಳಲ್ಲಿ ಬೇಡಿಕೆ ಹೆಚ್ಚಿರುವ ಕೋರ್ಸ್ ಯಾವುದು?
– **ಕ್ರೌಡ್ ಮ್ಯಾನೇಜ್‌ಮೆಂಟ್!**

● **ರಘು, ಮೈಸೂರು**
ಮೆಸ್ಸಿ ಅಭಿಮಾನಿಗಳ ರಂಪಾಟಕ್ಕೆ ನೀವು ಕರೆಯುವ ಪದ?
– **ಮೆಸ್ಸಪ್!**

● **ನಿರಂಜನ ಶರ್ಮ, ಸಿದ್ದಾಪುರ**
ಭಟ್ರೇ, ಮದುವೆಯಾದ ಮೇಲೆ ಗಂಡಂದಿರು ಯಾಕೆ ಕಡಿಮೆ ಮಾತಾಡ್ತಾರೆ?
– **ಮಾತಾಡೋರು (ಹೆಂಡತಿ) ಸಿಕ್ಕ ಮೇಲೆ, ತಲೆ ಆಡಿಸೋರು (ಗಂಡ) ಒಬ್ಬರು ಇರಲೇಬೇಕಲ್ಲ!**

● **ಕೆ.ವಿ.ಸುಭಾಷ್, ಕೆಂಗೇರಿ**
ಭಟ್ರೇ, ಪ್ರೀತಿ ಕುರುಡು ಅಂತಾರೆ, ಹಾಗಾದ್ರೆ ಮದುವೆ ಅಂದ್ರೆ ಏನು?
– **ಮದುವೆ ಅನ್ನೋದು ಆ ಕುರುಡುತನಕ್ಕೆ ಮಾಡಿಸೋ 'ಕಣ್ಣಿನ ಆಪರೇಷನ್'!**

ಅತಿ ಆಸೆಯ ಭಾವ, ಒಲೆ ಮೇಲೆ ಜೀವ...

ವಿಪರ್ಯಾಸ ಎಂದರೆ ಮನುಷ್ಯ ತನ್ನ ಆಸೆಯನ್ನು ಪೂರೈಸಿಕೊಂಡರೆ ತಾನು ಸಂತುಷ್ಟನಾಗಿರುತ್ತೇನೆ ಎಂಬ ಭ್ರಮೆಯಲ್ಲಿಯೇ ಇರುತ್ತಾನೆ. ಅದು ಸತ್ಯಕ್ಕೆ ಬಹಳ ದೂರ. ಮನುಷ್ಯನ ಮನಸ್ಸು ಬಹಳ ಚಂಚಲ. ಅದು ನಿಂತಲ್ಲಿ ನಿಲ್ಲುವುದೇ ಇಲ್ಲ. ಎಲ್ಲಾ ಕಡೆ ಸುತ್ತಾಡಿ, ಬೇಕಾದ, ಬೇಡಾದ ಕಡೆಗೆಲ್ಲ ತಿರುಗಾಡುತ್ತಿರುತ್ತದೆ. ಇತ್ತಲಿಂದ ಅತ್ತ, ಅತ್ತಲಿಂದ ಇತ್ತ ಅಲೆದಾಡುತ್ತಿರುತ್ತದೆ.

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ನಮ್ಮ ಬಾಲ್ಯದ ದಿನಗಳಲ್ಲಿ ಹಾಡಿಗೆ ಹಾಡು ಕಟ್ಟುವುದು ಸಾಮಾನ್ಯವಾಗಿತ್ತು. ಯಾವುದೇ ಒಂದು ಜನಪ್ರಿಯ ಹಾಡು ಬಂತೆಂದರೆ ಸಾಕು, ಆ ಹಾಡಿನ ಕೆಲವು ಪದಗಳನ್ನು ಬದಲಾಯಿಸಿ, ಮೂಲ ಹಾಡನ್ನು ತಿರುಚಿ, ಬೇರೆಯ ಅರ್ಥ ಬರುವ ರೀತಿಯಲ್ಲಿ ಹಾಡು ಕಟ್ಟುವುದು. ಮನರಂಜನೆಗೆ ಮಾತ್ರವೇ ವಿನಾ, ಅದರಲ್ಲಿ ಮೂಲ ರಚನೆಕಾರರಿಗೆ ಅವಮಾನ ಮಾಡಬೇಕು ಎಂದಾಗಲೀ ಅಥವಾ ಇನ್ಯಾವುದೋ ಕಾರಣಕ್ಕಾಗಲೀ ಅಲ್ಲ. ಅದು ಇಂದಿಗೂ ಇದೆ. ಹಾಸ್ಯ ಸಮ್ಮೇಳನಗಳಲ್ಲಿ, ಸ್ಟ್ಯಾಂಡ್ ಅಪ್ ಕಾಮಿಡಿಗಳಲ್ಲಿ ಅಥವಾ ಕೆಲವು ಮಿತ್ರರು ಸೇರಿದಾಗ ಇಂಥ ಹಾಡುಗಳು ಹಾಡುಹೋಗುತ್ತವೆ.

'ಆಸೆಯ ಭಾವ, ಒಲವಿನ ಜೀವ, ಒಂದಾಗಿ ಬಂದಿದೆ...' ಎಪ್ಪತ್ತರ ದಶಕದ ಒಂದು ಜನಪ್ರಿಯ ಹಾಡು. 'ಮಾಂಗಲ್ಯ ಭಾಗ್ಯ' ಚಿತ್ರದ, ದಿ. ಎಸ್.ಪಿ. ಬಾಲಸುಬ್ರಹ್ಮಣ್ಯಮ್ ಹಾಡಿದ, ವಿಜಯನಾರಸಿಂಹ ಸಾಹಿತ್ಯ ರಚಿಸಿದ, ರಾಜನ್-ನಾಗೇಂದ್ರ ಸಂಗೀತ ನಿರ್ದೇಶನದಲ್ಲಿ ಮೂಡಿಬಂದ ಈ ಹಾಡು ಇಂದಿಗೂ ಜನಪ್ರಿಯ. ಅಂದು ಹಾಡಿನ ಸಾಹಿತ್ಯವನ್ನು ಸ್ವಲ್ಪ ತಿರುಚಿ, ಹಾಡಿನ ಆರಂಭದಲ್ಲಿ 'ಅತಿ' ಪದ ಸೇರಿಸಿ, 'ಒಲವಿನ' ಪದದ ಬದಲು 'ಒಲೆ ಮೇಲೆ' ಎಂದು ಜೋಡಿಸಿ, ತಮಾಷೆಗಾಗಿ ಹಾಡುತ್ತಿದ್ದರು. ಆದರೆ, ಸ್ವಲ್ಪ ಗಾಢವಾಗಿ ಆಲೋಚಿಸಿದರೆ, ಅದು ತಮಾಷೆಗೆ ಮಾಡಿದ್ದಾದರೂ, ಅದರಲ್ಲೂ ತತ್ತ್ವವಿದೆ ಎಂದು ಕಾಲಾನಂತರ ತಿಳಿಯಿತು.

ನಾವೆಲ್ಲ 'ಅತಿ ಆಸೆ ಗತಿ ಕೆಡಿಸಿತು' ಎಂಬ ಗಾದೆ ಮಾತು ಕೇಳಿದ್ದೇವೆ. 'ಆಸೆಯೇ ದುಃಖಕ್ಕೆ ಮೂಲ ಕಾರಣ' ಎಂದು ಬುದ್ಧ ಹೇಳಿದ್ದನ್ನೂ ತಿಳಿದಿದ್ದೇವೆ. ಅತಿ ಆಸೆಯಿಂದ ಆಗುವ ಪರಿಣಾಮಗಳ ಕುರಿತು ಸಾಕಷ್ಟು ಕಥೆ ಕೇಳಿದ್ದೇವೆ. ರೈತನೊಬ್ಬನು, ಪ್ರತಿನಿತ್ಯ ಚಿನ್ನದ ಮೊಟ್ಟೆ ಇಡುತ್ತಿದ್ದ ತನ್ನ ಕೋಳಿಯ ಹೊಟ್ಟೆ ಕೊಯ್ದ ಕಥೆಯಾಗಲಿ, ತಾನು ಮುಟ್ಟಿದ್ದೆಲ್ಲ ಚಿನ್ನವಾಗಬೇಕು ಎಂದು ವರ ಪಡೆದ ಮೈದಾಸ ತನ್ನ ಮಗಳನ್ನು ಮುಟ್ಟಿದಾಗ ಆಕೆ ಗೊಂಬೆಯಾದ ಕಥೆಯಾಗಲಿ, ಮರ ಕಡಿಯಲು ಹೋದ ಪಕ್ಕದ ಮನೆಯವನ ಕೊಡಲಿ ನೀರಿನಲ್ಲಿ ಬಿದ್ದಾಗ ದೇವರು ಪ್ರತ್ಯಕ್ಷನಾಗಿ ಬಂಗಾರದ ಕೊಡಲಿ ನೀಡಿದ ಎಂಬ ದೃಷ್ಟಾಂತ ಕೇಳಿ, ತಾನೂ ಬಂಗಾರದ ಕೊಡಲಿ ಪಡೆಯಬೇಕೆಂದು ಇದ್ದ ಕಬ್ಬಿಣದ ಕೊಡಲಿಯನ್ನೂ ಕಳೆದುಕೊಂಡವನ ಕಥೆಯಾಗಲಿ- ಇವೆಲ್ಲ ಅತಿ ಆಸೆಯಿಂದ ಆಗುವ ಪರಿಣಾಮಗಳ ಕುರಿತು ಇರುವ ಕಥೆಗಳು. ಆದರೆ ಈಗ ನಾನು ಹೇಳಲು ಹೊರಟಿರುವುದು ಅತಿ ಆಸೆಯ ಕುರಿತಾಗಿ ಅಲ್ಲ. ಲಾವುತ್ಸು ಅಥವಾ ಬುದ್ಧನಂಥ ಸಾಧಕರು ಹೇಳಿರುವ ಸಾಮಾನ್ಯ ಆಸೆಯ ವಿಷಯ. ಅತಿ ಆಸೆ ಹುಟ್ಟುವುದಕ್ಕಿಂತ ಮೊದಲು ಆಸೆ ಹುಟ್ಟಿಕೊಳ್ಳುತ್ತದೆ. ಯಾರಲ್ಲಿಯೇ ಆದರೂ ಆಸೆ ಎಂಬ ಬೀಜ ಮೊಳಕೆ ಒಡೆಯದೇ ಇರುವುದು ಕಷ್ಟ. ಆಸೆಯ ಬೀಜವೇ ಮುಂದೊಂದು ದಿನ ಅತಿ ಆಸೆಯ ವೃಕ್ಷವಾಗಿ ಬೆಳೆದು ನಿಲ್ಲುತ್ತದೆ. ಹಾಗಾಗಿ, ಅತಿ ಆಸೆಗೆ ಮೂಲ ಕಾರಣ ಸಣ್ಣ ಆಸೆ.

ಮನುಷ್ಯ ತನ್ನ ಜೀವನದಲ್ಲಿ ಅದೆಷ್ಟೋ ತಪ್ಪುಗಳನ್ನು ಮಾಡಿ ಪಶ್ಚಾತ್ತಾಪಪಡುತ್ತಾನೆ. ಒಂದು ಚಿಕ್ಕ ಮಗುವನ್ನೇ ನೋಡಿ, ತಾನು ಆಡಲು ಬಯಸಿದ ಆಟಿಕೆ ವಸ್ತುವನ್ನೋ, ಗೊಂಬೆಯನ್ನೋ ಪಡೆಯಲು ಅದು ಏನೆಲ್ಲ ಕಸರತ್ತು ಮಾಡುತ್ತದೆ. ಶಾಪಿಂಗ್ ಮಾಲ್‌ನಲ್ಲಿ ಅಥವಾ ಸೂಪರ್ ಮಾರ್ಕೆಟ್‌ನಲ್ಲಿ ಮಕ್ಕಳು ಆಟಿಕೆ ಕೊಡಿಸುವಂತೆ ಅಳುವುದು, ರಚ್ಚೆ ಹಿಡಿಯುವುದು, ನೆಲದಲ್ಲಿ ಬಿದ್ದು ಹೊರಳಾಡುವುದನ್ನೂ ನಾವು ನೋಡುತ್ತೇವೆ. ಒಮ್ಮೆ ಆ ಆಟಿಕೆ ಕೊಡಿಸಿದರೆನ್ನಿ, ಮಗು ಇನ್ನೊಂದು ಆಟಿಕೆಯ ಕಡೆಗೆ ಆಕರ್ಷಿತವಾಗುತ್ತದೆ. ಮೊದಲಿನ ಆಟಿಕೆಯ ವಸ್ತು ತನ್ನ ಬಳಿ ಇದ್ದರೂ ಅಥವಾ ಅದನ್ನು ಬಿಟ್ಟಾದರೂ ಇನ್ನೊಂದು ವಸ್ತುವಿನ ಕಡೆಗೆ ಅದರ ಗಮನ ಹರಿಯುತ್ತದೆ. ಒಂದೇ ಕ್ಷಣದಲ್ಲಿ ಬಯಕೆ ಬದಲಾಗುತ್ತದೆ. ತಾನು ಕಂಡ ಇನ್ನೊಂದು ವಸ್ತುವನ್ನು ಪಡೆದುಕೊಳ್ಳುವುದು ಹೇಗೆ ಎನ್ನುವುದರ ಕುರಿತು ಅಲ್ಲಿಯೇ ಯೋಚನೆ ಆರಂಭವಾಗುತ್ತದೆ. ಮೊದಲು ಕೊಂಡ ವಸ್ತುವಿನೊಂದಿಗೆ ಸರಿಯಾಗಿ ಐದು ನಿಮಿಷವೂ ಆಟ ಆಡಿರುವುದಿಲ್ಲ, ಸಮಯ ಕಳೆದಿರುವುದಿಲ್ಲ. ಅದು ಕೈಯಲ್ಲಿ ಇರುವಾಗಲೇ ಮಗು ಇನ್ನೊಂದು ವಸ್ತುವಿನ ಹಿಂದೆ ಓಡುತ್ತದೆ.

ಕ್ರಮೇಣ ಮಗು ಬೆಳೆದು ದೊಡ್ಡದಾಗುತ್ತದೆ. ದೊಡ್ಡದಾದಂತೆ ಅದರ ಮನಃಸ್ಥಿತಿ ಬದಲಾಗುತ್ತದೆ. ಒಂದೇ ಒಂದು ವ್ಯತ್ಯಾಸವೆಂದರೆ, ಬದಲಾದ ಮನಃಸ್ಥಿತಿಯಲ್ಲಿ ಆಟಿಕೆ ವಸ್ತುಗಳ ಸ್ಥಾನವನ್ನು ನಿಜವಾದ ವಸ್ತುಗಳು ಆಕ್ರಮಿಸಿಕೊಳ್ಳುತ್ತವೆ. ಸಣ್ಣ ಪೀಪಿ ಅಥವಾ ತುತ್ತೂರಿಯ ಜಾಗದಲ್ಲಿ ನಿಜವಾದ ಸ್ಯಾಕ್ಸೊಫೋನ್, ಪಿಯಾನೊ, ಗಿಟಾರ್ ಬಂದು ಕುಳಿತುಕೊಳ್ಳುತ್ತದೆ. ಸಣ್ಣ ಬ್ಲಾಕ್‌ನಿಂದ ಕಟ್ಟುವ ಮನೆಯ ಬದಲು ಇಟ್ಟಿಗೆ, ಸಿಮೆಂಟ್‌ನಿಂದ ಕಟ್ಟಿದ ಮನೆ, ಜತೆಗೆ ಇಂಟೀರಿಯರ್ಸ್, ಪೀಠೋಪಕರಣಗಳು, ಪುಟ್ಟ ಪುಟ್ಟ ಅಡುಗೆ ಮನೆಯ ಆಟಿಕೆಯ ಬದಲು ವಿದ್ಯುತ್ ಅಥವಾ ಗ್ಯಾಸ್ ಒಲೆ, ಫ್ರಿಜ್, ಮೈಕ್ರೊವೇವ್, ದೊಡ್ಡ ಕಟ್ಟೆ ಇರುವ ಅಡುಗೆ ಮನೆ. ಸಣ್ಣ ಬೈಸಿಕಲ್ ಬದಲು ನಿಜವಾದ ಬೈಸಿಕಲ್ ಅಥವಾ ಮೋಟರ್ ಸೈಕಲ್, ಪ್ಲಾಸ್ಟಿಕ್ ಕಾರಿನ ಬದಲು ಝೆನ್, ಸ್ವಿಫ್ಟ್, ಐ-10, ಇನ್ನೋವಾ ಕಾರುಗಳು ಅಥವಾ ಇನ್ನೂ ಒಂದು ಹೆಜ್ಜೆ ಮುಂದೆ ಹೋದರೆ, ಮರ್ಸಿಡಿಸ್, ಬಿಎಂಡಬ್ಲ್ಯು, ರೇಂಜ್ ರೋವರ್, ಫೆರಾರಿ ಇತ್ಯಾದಿ. ಅದೂ ಸಾಲದಿದ್ದಾಗ ಖಾಸಗಿ ವಿಮಾನ, ಪುಟ್ಟ ಹಡಗು. ಈ ಆಸೆಯ ಪಯಣ ನಿರಂತರ ಸಾಗುತ್ತಲೇ ಇರುತ್ತದೆ.

ಅದು ಅಲ್ಲಿಗೇ ನಿಲ್ಲುವುದಿಲ್ಲ. ಹಳ್ಳಿಯಲ್ಲಿರುವವನಿಗೆ ಪಟ್ಟಣದಲ್ಲಿ, ನಂತರ ಪಟ್ಟಣದಿಂದ ನಗರ, ನಗರದಿಂದ ಮಹಾನಗರ, ನಂತರ ವಿದೇಶದಲ್ಲಿ ನಮ್ಮದೊಂದು ಮನೆ ಇರಬೇಕು ಎಂಬ ಬಯಕೆ ಆರಂಭವಾಗುತ್ತದೆ. ನಾಳೆ ಚಂದ್ರ ಅಥವಾ ಮಂಗಳ ಗ್ರಹಗಳು ಮನುಷ್ಯ ಉಳಿಯಲು ಯೋಗ್ಯ ಎಂದು ತಿಳಿದರೆ ಅಲ್ಲಿಯೂ ಒಂದು ಮನೆ ಕಟ್ಟಲು ಮನುಷ್ಯ ತುದಿಗಾಲಲ್ಲಿ ನಿಂತಿದ್ದಾನೆ. ಒಂದು ವೇಳೆ ಅದನ್ನೆಲ್ಲ ಪಡೆದರೂ ಮನುಷ್ಯ ಸಂತೋಷದಿಂದ ಇರುತ್ತಾನೆ ಎಂಬ ಯಾವ ಭರವಸೆಯೂ ಇಲ್ಲ. ತಾನು ಎಷ್ಟೆಲ್ಲ ಕಷ್ಟ ಪಟ್ಟು, ಹಣ ಖರ್ಚು ಮಾಡಿ, ಸಮಯ ವ್ಯಯಿಸಿ ಸಂತೋಷದಿಂದ ಇರುತ್ತೇನೆ ಅಂದುಕೊಂಡಿದ್ದವನ ನೆಮ್ಮದಿ ಹಾಳು ಮಾಡಲು ಪಕ್ಕದ ಮನೆಯವರೊಂದಿಗಿನ ಜಗಳ, ಪಕ್ಕದ ಮನೆಯಿಂದ ಬರುವ ವಾಸನೆ, ಮಗುವಿನ ಅಳು, ಬಾಲಕರ ಪೋಕರಿತನ ಏನಾದರೂ ಒಂದು ಸಾಕು. ಆತನ ನಿದ್ದೆಗೆಡಿಸಲು ರಸ್ತೆಯಲ್ಲಿ ಓಡಾಡುವ ವಾಹನಗಳ ಸದ್ದೇ ಸಾಕು.

ವಿಪರ್ಯಾಸ ಎಂದರೆ ಮನುಷ್ಯ ತನ್ನ ಆಸೆಯನ್ನು ಪೂರೈಸಿಕೊಂಡರೆ ತಾನು ಸಂತುಷ್ಟನಾಗಿರುತ್ತೇನೆ ಎಂಬ ಭ್ರಮೆಯಲ್ಲಿಯೇ ಇರುತ್ತಾನೆ. ಅದು ಸತ್ಯಕ್ಕೆ ಬಹಳ ದೂರ. ಮನುಷ್ಯನ ಮನಸ್ಸು ಬಹಳ ಚಂಚಲ. ಅದು ನಿಂತಲ್ಲಿ ನಿಲ್ಲುವುದೇ ಇಲ್ಲ. ಎಲ್ಲಾ ಕಡೆ ಸುತ್ತಾಡಿ, ಬೇಕಾದ, ಬೇಡಾದ ಕಡೆಗೆಲ್ಲ ತಿರುಗಾಡುತ್ತಿರುತ್ತದೆ. ಇತ್ತಲಿಂದ ಅತ್ತ, ಅತ್ತಲಿಂದ ಇತ್ತ ಅಲೆದಾಡುತ್ತಿರುತ್ತದೆ. ಒಂದು ಕಡೆ ಸ್ಥಿರವಾಗಿ ನಿಲ್ಲದ ವಸ್ತುವಿಗೆ ಹೆಸರು ಏನೆಂದು ಕೇಳಿದರೆ, ಬಹುಶಃ ಮನಸ್ಸು ಎಂಬ ಉತ್ತರವೇ ಸರಿಹೋಗಬಹುದು. ಮನಸ್ಸು ಮನುಷ್ಯನ ಸ್ವಾಧೀನದಲ್ಲಿರುವುದು ತೀರಾ ಎಂದರೆ ತೀರಾ ಕಮ್ಮಿ. ಎಲ್ಲೋ ಲಕ್ಷಕ್ಕೆ, ಕೋಟಿಗೆ ಒಂದೋ ಎರಡೊ ಸಿಕ್ಕಿದರೆ ದೊಡ್ಡದು. ಮನಸ್ಸಿನ ವಿಶೇಷತೆ ಎಂದರೆ, ಅದು ಪೂರ್ವಗ್ರಹಪೀಡಿತವಾಗಿ ಅಲೆದಾಡುತ್ತಿರುತ್ತದೆ. ತನಗೆ ಬೇಕಾದದ್ದು ಸಿಕ್ಕಿದ ಕೂಡಲೇ ಬೇರೆ ಏನನ್ನೋ ಆಶಿಸುತ್ತದೆ. ಪುನಃ ಆ ಆಸೆಯ ಬೆನ್ನು ಹತ್ತಿ ಓಡಲಾರಂಭಿಸುತ್ತದೆ. ಬಯಸಿದ್ದನ್ನು ಪಡೆದ ಮರುಕ್ಷಣದಿಂದಲೇ ಸುಪ್ತವಾಗಿ ಅಡಗಿ ಕುಳಿತಿದ್ದ ಇತರ ಆಸೆಗಳು ಮನಸ್ಸನ್ನು ಆವರಿಸಿಕೊಳ್ಳುತ್ತವೆ. ಪರಿಣಾಮವಾಗಿ, ಮನುಷ್ಯ ತಾನು ಗಳಿಸಿದ್ದನ್ನು ಅನುಭವಿಸದೇ, ಸುಖ ಪಡದೆ, ಇನ್ನುಳಿದ ಬೇಕುಗಳ ಬೆನ್ನು ಹತ್ತುತ್ತಾನೆ. ಒಟ್ಟಿನಲ್ಲಿ ಮನಸ್ಸು ತಾನೇ ಕಷ್ಟಪಟ್ಟು ಗಳಿಸಿದ್ದನ್ನು ಸಂಪೂರ್ಣ ಅನುಭವಿಸುವುದೂ ಇಲ್ಲ, ಇನ್ನೂ ಬೇಕೆಂಬ ಆಸೆಯಿಂದ ಹೊರಗೆ ಬರುವುದೂ ಇಲ್ಲ.

ಮನುಷ್ಯ ತನ್ನ ಬಯಕೆ ಪೂರ್ಣಗೊಳ್ಳದಿದ್ದಾಗ ಅಥವಾ ತಾನು ಬಯಸಿದ್ದನ್ನು ಪಡೆಯಬೇಕೆಂದು ಹಾತೊರೆಯುತ್ತಿರುವಾಗ, ಸುತ್ತಮುತ್ತ ನಡೆಯುವ ವರ್ತಮಾನದ ಕಡೆ ಗಮನ ಹರಿಸುವುದಿಲ್ಲ, ಅಕ್ಕಪಕ್ಕದ ಆಗುಹೋಗುಗಳ ಕಡೆಗೆ ಲಕ್ಷ್ಯ ಕೊಡುವುದಿಲ್ಲ. ತನ್ನ ಅಪೂರ್ಣವಾದ ಬಯಕೆಯ ಕುರಿತೇ ಯೋಚಿಸುತ್ತಿರುತ್ತಾನೆ. ಅನೇಕ ಬಾರಿ ಸಂಪೂರ್ಣ ಲಕ್ಷ್ಯವು ಮುಂದೆ ಗಳಿಸಬೇಕಾದುದರ ಕಡೆಗೇ ಇರುವುದರಿಂದ, ಹಿಂದೆ ಗಳಿಸಿದ್ದರ ಕಡೆ ಗಮನವಿಲ್ಲದೇ ಅರ್ಥಹೀನವಾಗುತ್ತದೆ. ಪೂರ್ಣಗೊಳ್ಳದ ಆಸೆಗಳು ದೇಹದಲ್ಲಿ ಆದ ಒಂದು ಸಣ್ಣ ಗಾಯದಂತೆ. ಆ ಸಣ್ಣ ಗಾಯದ ಕಡೆಗೇ ಹೆಚ್ಚಿನ ಗಮನ ಇರುತ್ತದೆಯೇ ವಿನಾ, ಆರೋಗ್ಯದಿಂದ ಇರುವ ದೇಹದ ಉಳಿದ ಭಾಗದ ಕಡೆಗಲ್ಲ. ನೀವು ಗಮನಿಸಿ, ಒಂದು ಹಲ್ಲು ನೋವಾದರೆ ಇಡೀ ದಿನ ನಮ್ಮ ಲಕ್ಷ್ಯವೆಲ್ಲ ಹಲ್ಲಿನ ಕಡೆಗೆ, ತಲೆನೋವಾದರೆ ಗಮನ ಎಲ್ಲ ತಲೆಯ ಕಡೆಗೆ ಇರುತ್ತದೆಯೇ ವಿನಾ, ಆರೋಗ್ಯದಿಂದ ಇರುವ, ಸಧೃಢವಾಗಿರುವ ಇತರ ಭಾಗಗಳ ಕಡೆ ಗಮನ ಇರುವುದಿಲ್ಲ. ಇದನ್ನೇ ಭೌತಿಕ ಜಗತ್ತಿಗೆ ಹೋಲಿಸಿದರೆ, ಮನುಷ್ಯನು ಈಡೇರದ ಬಯಕೆಯ ಬೆನ್ನು ಹತ್ತಿ, ಅದುವರೆಗೆ ಗಳಿಸಿದ್ದರೆಡೆಗೆ ಸಂಪೂರ್ಣ ಗಮನ ಹರಿಸುವುದಿಲ್ಲ. ಅದುವರೆಗೆ ಗಳಿಸಿದ ಯಾವುದೇ ರೀತಿಯ ಶ್ರೀಮಂತಿಕೆಯನ್ನು ಪರಿಪೂರ್ಣ ಅನುಭವಿಸುವುದಿಲ್ಲ. ಪ್ರತಿಯೊಬ್ಬನೂ ತಾನು ಹೆಚ್ಚಿನದ್ದು ಏನನ್ನಾದರೂ ಸಾಧಿಸಬೇಕು ಎಂಬ ಆಸೆಯ ಬೆನ್ನೇರಿ ಹೋಗುತ್ತಾನೆ. ಬಹುತೇಕ ಬಾರಿ ಅದು ಈಡೇರದೇ ನಿರಾಶನೂ ಆಗುತ್ತಾನೆ. ನಿರಂತರವಾಗಿ ಈಡೇರದ ಆಸೆಯಲ್ಲಿ ಬಂದಿಯಾಗಿರುವುದರಿಂದ ವರ್ತಮಾನವನ್ನು ಆಸ್ವಾದಿಸದೆಯೇ ಕಳೆಯುತ್ತಾನೆ.

ಆಸೆಯ ಉಪಶಮನವೆಂಬ ತಂಗುದಾಣ ತಲುಪಲು ಇರುವುದು ಎರಡೇ ದಾರಿ. ಒಂದು, ಆಸೆಯನ್ನು ಈಡೇರಿಸಿಕೊಳ್ಳುವುದು. ಇನ್ನೊಂದು ಆಸೆಯನ್ನೇ ಕಿತ್ತು ಹಾಕುವುದು. ಆಸೆಯ ಪ್ರಾಮುಖ್ಯ, ಪರಿಣಾಮಗಳನ್ನು ಮನಗಂಡು ಅದರಿಂದ ದೂರವಿರುವುದು ಆಸೆಯನ್ನು ಈಡೇರಿಸಿಕೊಳ್ಳುವುದಕ್ಕಿಂತ ಸುಲಭ. ತನ್ನಲ್ಲಿ ಇಲ್ಲವಾದದ್ದೆಲ್ಲ ಬೇಕು ಎಂದು ಬಯಸುವುದರ ಬದಲಾಗಿ ಯಾವುದು ಅತಿ ಅವಶ್ಯವೋ ಅದನ್ನು ಪಡೆಯುವುದಕ್ಕೆ ಪ್ರಯತ್ನಿಸಬೇಕು. ಬಹಳಷ್ಟು ಸಲ ಮನುಷ್ಯನಿಗೆ 'ಬೇಕು' ಎಂದು ಅನಿಸುವ ವಸ್ತುವಿನ 'ಅವಶ್ಯಕತೆ'ಯೇ ಇರುವುದಿಲ್ಲ. ಉದಾಹರಣೆಗೆ, ಗುಡ್ಡಗಾಡು ಪ್ರದೇಶದ, ರಸ್ತೆ ಸರಿ ಇಲ್ಲದ ಹಳ್ಳಿಯಲ್ಲಿರುವ ಒಬ್ಬನಿಗೆ ತಿರುಗಾಟಕ್ಕೆ ಒಂದು ವಾಹನ ಬೇಕು. ಅಂಥ ರಸ್ತೆಯಲ್ಲಿ ಓಡಾಡಲು ಮಾರುತಿ ಒಮ್ನಿ ಸಾಕಾದರೂ, ಗುಣಮಟ್ಟದಲ್ಲಿ ಇನ್ನೂ ಚೆನ್ನಾಗಿರುವ, ಸ್ವಲ್ಪ ದೊಡ್ಡ ಜೀಪ್ ಬೇಕು ಎಂದರೆ ಅದೂ ಸಾಧುವೇ. ಆದರೆ ಮನೆಯಲ್ಲಿರುವ ಎಲ್ಲಾ ಐಷಾರಾಮಿ ವಸ್ತುಗಳು, ವ್ಯವಸ್ಥೆಗಳನ್ನು ಹೊಂದಿದ ಹಡಗಿನಂಥ ರೋಲ್ಸ್‌ರಾಯ್ಸ್ ಲಿಮೋಸಿನ್ ಬೇಕು ಎಂದರೆ? ಅದು ಅತಿಯಾಯಿತು ಎಂದೆನಿಸುವುದಿಲ್ಲವೇ? ಅಷ್ಟಕ್ಕೂ ಗುಡ್ಡ ಹತ್ತಲು ಜೀಪ್ ಒಳ್ಳೆಯದೇ ವಿನಾ ಲಿಮೋ ಅಲ್ಲವಲ್ಲ. ಮನುಷ್ಯನಲ್ಲಿ ಇಂಥ ಅದೆಷ್ಟೋ ಶೋಕಿಗಳು ಮೂಡುವುದುಂಟು. ಇದು ಒಂದು ಉದಾಹರಣೆ ಮಾತ್ರ. ಮನೆಗೆ ಬರುವ ನೀರು ಪುರಸಭೆಯ ಜಂಗು ಹಿಡಿದ ತೊಟ್ಟಿಯಿಂದ ಎಂದಾದರೆ, ಮನೆಯ ನಲ್ಲಿ ಹಿತ್ತಾಳೆಯದ್ದಾದರೇನು, ಚಿನ್ನದ್ದಾದರೇನು?

ಹಾಗಾದರೆ ಬಯಕೆಗಳೇ ಇಲ್ಲದೆ ಬದುಕಲು ಸಾಧ್ಯವೇ? ಮನುಷ್ಯ ಎಂದಮೇಲೆ ಬಯಕೆಗಳು ಸಹಜ. ಆದರೆ ಅದೇ ಬಯಕೆ ದುಃಖಕ್ಕೂ ಕಾರಣವಾಗಬಹುದು. ಆದ್ದರಿಂದ ಬೇಕು-ಬೇಡಗಳನ್ನು ನಿರ್ಣಯಿಸಿ, ಆಸೆ-ಅಗತ್ಯತೆಯನ್ನು ತೂಗಿ ನಡೆಯಬೇಕು. ಅನೇಕರು ಆಸೆಯ ಗಿರಿಯ ತುದಿ ತಲುಪುವುದೇ ಪ್ರಮುಖವೆಂದು ಭಾವಿಸುತ್ತಾರೆ. ಬಯಕೆಯ ಪರ್ವತದ ತುದಿ ತಲುಪುವ ತವಕದಲ್ಲಿ, ಆರಂಭ ಮತ್ತು ಅಂತ್ಯದ ನಡುವಿನ ಪ್ರಯಾಣದ ಹಾದಿಯ ಸುಖವನ್ನೇ ಅನುಭವಿಸುವುದಿಲ್ಲ. ಉಳಿದವರಿಗಿಂತ ಮೊದಲು ತಾನು ಶಿಖರದ ತುದಿ ತಲುಪಬೇಕು ಎಂಬುದೇ ಲಕ್ಷ್ಯವಾಗಿರುತ್ತದೆ. ದಾರಿಯುದ್ದಕ್ಕೂ ಸಿಗುವ ಹಣ್ಣಿನ ಸಿಹಿ, ಹೂವಿನ ಸಿರಿಯನ್ನು ಅನುಭವಿಸದೇ ಶಿಖರದ ತುದಿ ತಲುಪಿದರೂ ಪ್ರಯೋಜನವಿಲ್ಲ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ನಮ್ಮ ಪ್ರಯಾಣ ನಮ್ಮದಾಗಿರಬೇಕು. ನಮ್ಮ ಅವಶ್ಯಕತೆ ಪೂರೈಸಿಕೊಳ್ಳಬೇಕೆಂಬುದು ಸರಿ. ಪಕ್ಕದಲ್ಲಿರುವವನನ್ನು ನೋಡಿ ನಾನು ಅವನಂತೆ ಆಗಬೇಕೆನ್ನುವ ಆಸೆ ಎಷ್ಟು ಸರಿ? ನಾನೂ ಒಳ್ಳೆಯ ಉದ್ಯಮಿಯಾಗಬೇಕು, ನಟನಾಗಬೇಕು, ಆಟಗಾರನಾಗಬೇಕು ಎನ್ನುವುದು ಸರಿ. ಇದು ಗುರಿಯಾಗಿ ಇರಬೇಕೇ ವಿನಾ, ಅತಿ ಆಸೆ ಆಗಬಾರದು, ಗುರಿಗೂ ಮತ್ತು ಆಸೆಗೂ ಸ್ವಲ್ಪ ವ್ಯತ್ಯಾಸವಿದೆ. ಗುರಿ ಅಥವಾ ಲಕ್ಷ್ಯ ಇಲ್ಲದಿದ್ದರೆ ಮನುಷ್ಯ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಆದರೆ, ತಾನು ಸಾಧಿಸಬೇಕು ಎನ್ನುವ ಬಯಕೆ ಅತಿ ಆಗಬಾರದು. ಉದಾಹರಣೆಗೆ, ತಾನು ಉದ್ಯಮಿಯಾಗಬೇಕು, ಒಂದಷ್ಟು ಹಣ ಸಂಪಾದಿಸಬೇಕು, ತನ್ನದೇ ಒಂದು ಸಾಮ್ರಾಜ್ಯ ಕಟ್ಟಿಕೊಳ್ಳಬೇಕು ಎನ್ನುವುದರಲ್ಲಿ ತಪ್ಪೇನೂ ಇಲ್ಲ. ಆದರೆ ಇತರರೊಂದಿಗೆ ತನ್ನನ್ನು ಹೋಲಿಸಿಕೊಂಡು, ಮಾರ್ಗದಲ್ಲಿಯೇ ಆದರೂ ಸರಿ, ಇತರರಿಗಿಂತ ತಾನೇ ಶ್ರೇಷ್ಠ ಎಂದು ಕರೆಸಿಕೊಳ್ಳಬೇಕು, ತಾನೊಬ್ಬನೇ ದೊಡ್ಡವನಾಗಬೇಕು, ಅದಕ್ಕೆ ನೀತಿ ತಪ್ಪಿ ಕೆಲಸ ಮಾಡಲೂ ಸಿದ್ಧ ಎನ್ನುವ ಬಯಕೆ ಮನುಷ್ಯನ ಮನಸ್ಸಿನಲ್ಲಿ ಒಮ್ಮೆ ಬಂತು ಎಂದಾದರೆ ಅದು ಅತಿ ಆಸೆಯಾಗುತ್ತದೆ. ತಪ್ಪಿಯೂ ತಾನು ಬಯಸಿದ್ದು ತನಗೆ ದಕ್ಕದೆ ಇದ್ದಾಗ ಒಳಗೊಳಗೇ ಕುದಿಯುತ್ತಾನೆ. ಅತಿ ಆಸೆ ಮನುಷ್ಯನನ್ನು ಸುಟ್ಟುಹಾಕುತ್ತದೆ. ಅಲ್ಲದೆ, ಅತಿಯಾದದ್ದನ್ನು ಸಂಪಾದಿಸುವ ಹುಚ್ಚುತನದಲ್ಲಿ ಮನುಷ್ಯ ಇದ್ದದ್ದನ್ನೂ ಅನುಭವಿಸುವುದಿಲ್ಲ. ಕ್ರಮೇಣ ಅದು ಕೂಡ ಅಸಹನೆಗೆ ಕಾರಣವಾಗುತ್ತದೆ. ಈ ಅಸಹನೆ ಕೂಡ ಬೆಂಕಿಯಂತೆಯೇ, ಸುಡುತ್ತದೆ.

ಈಗ ನೀವೇ ಹೇಳಿ, 'ಅತಿ ಆಸೆಯ ಭಾವ...'

ಪ್ರತ್ಯೇಕ ಧರ್ಮವೆಂಬ ಮೂಗಿನ ಮೇಲಿನ ತುಪ್ಪದ ಹಕೀಕತ್ತು!

ಪ್ರತ್ಯೇಕ ಧರ್ಮ ಶಿಫಾರಸನ್ನು ಕೇಂದ್ರಕ್ಕೆ ಕಳಿಸಿ ಕೇಂದ್ರದ ಮೇಲೆ ಗೂಬೆ ಕೂರಿಸುವ ಪಕ್ಷ ರಾಜಕೀಯ ದಾಳಕ್ಕೆ ಅಖಂಡ ವೀರಶೈವ ಲಿಂಗಾಯತರು ಬಲಿಯಾದರು. ಒಂದು ವೇಳೆ ಈ ನಾಯಕರ ಉದ್ದೇಶ ಅಖಂಡ ವೀರಶೈವ ಲಿಂಗಾಯತರನ್ನು ಉದ್ಧಾರ ಮಾಡುವುದೇ ಆಗಿದ್ದರೆ, ಈಗಲೂ ಯಾವ ಕೇಂದ್ರದ ಒಪ್ಪಿಗೆ ಬೇಕಿಲ್ಲದ ಒಂದು ಕಾರ್ಯವನ್ನು ಇವರು ಮಾಡಬಹುದು.

ಬಸವ ಮಂಟಪ
ರವಿ ಹಂಜ್
vveditoped@gmail.com

ಹಿಂದಿನ ಲೇಖನದಲ್ಲಿ, ಧಾರ್ಮಿಕ ಅಲ್ಪಸಂಖ್ಯಾತರಿಗಾಗಿ ಇರುವ ಕೇಂದ್ರ ಸರಕಾರದ ಕೆಲವು ಯೋಜನೆಗಳನ್ನು ಗಮನಿಸಿದ್ದೇವಷ್ಟೇ. ಅದೇ ರೀತಿ ಇಂದಿನ ಲೇಖನದಲ್ಲಿ, ಕೇಂದ್ರ ಸರಕಾರವು ಧರ್ಮಾತೀತವಾಗಿ ಬಡವರ ಆರ್ಥಿಕ ಸಬಲೀಕರಣಕ್ಕಾಗಿ ಯಾವ ರೀತಿಯ ಯೋಜನೆಗಳನ್ನು ಹಾಕಿಕೊಂಡಿದೆ ಎಂದು ಗಮನಿಸೋಣ.

ಪ್ರಮುಖವಾಗಿ ಕೇಂದ್ರ ಸರಕಾರವು ವಸತಿ, ಆರೋಗ್ಯ, ಹಣಕಾಸು, ಆಹಾರ, ಗ್ರಾಮಾಂತರ ಅಭಿವೃದ್ಧಿ, ಕೌಶಲ ತರಬೇತಿ ಮತ್ತು ಸಾಮಾಜಿಕ ಭದ್ರತೆ ಮೊದಲಾದ ಕ್ಷೇತ್ರಗಳಲ್ಲಿ ಹಲವಾರು ಯೋಜನೆಗಳನ್ನು ಕೈಗೊಂಡಿದೆ. ಇವುಗಳ ಉದ್ದೇಶವೆಂದರೆ ಕೈಗೆಟುಕುವ ವಸತಿ, ಆರೋಗ್ಯ ರಕ್ಷಣೆ, ಹಣಕಾಸು ಸೌಲಭ್ಯ, ಉದ್ಯೋಗವಲ್ಲದೆ ಶುದ್ಧ ಅಡುಗೆ ಅನಿಲ ಮತ್ತು ಶೌಚಾಲಯಗಳಂಥ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು. ಅಂಥ ಕೆಲವು ಯೋಜನೆಗಳು ಹೀಗಿವೆ:

- ವಸತಿ ಮತ್ತು ಸ್ವಚ್ಛತೆಗಾಗಿ, ಪ್ರಧಾನಮಂತ್ರಿ ಆವಾಸ್ ಯೋಜನೆ (ಪಿಎಂಎವೈ) ಅಡಿಯಲ್ಲಿ ನಗರ ಮತ್ತು ಗ್ರಾಮೀಣ ಬಡವರಿಗೆ ಕೈಗೆಟಕುವ ವಸತಿ. 'ಸ್ವಚ್ಛ್ ಭಾರತ್ ಮಿಷನ್' ಅಡಿಯಲ್ಲಿ ಎಲ್ಲರಿಗೂ ಶೌಚಾಲಯಗಳು, ಸ್ವಚ್ಛತೆಯನ್ನು ಉತ್ತೇಜಿಸುವುದು.
- 'ಜಲ್ ಜೀವನ್ ಮಿಷನ್' ಅಡಿಯಲ್ಲಿ ಪ್ರತಿ ಮನೆಗೂ ನೀರು ಸಂಪರ್ಕ.
- ಆರೋಗ್ಯ ಮತ್ತು ಸಾಮಾಜಿಕ ಭದ್ರತೆಗಾಗಿ, 'ಆಯುಷ್ಮಾನ್ ಭಾರತ್' ಅಡಿಯಲ್ಲಿ ದ್ವಿತೀಯಕ ಮತ್ತು ತೃತೀಯಕ ಆರೈಕೆಗಾಗಿ ಆರೋಗ್ಯ ವಿಮೆ.
- ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆ ಅಡಿಯಲ್ಲಿ ಆಯುಷ್ಮಾನ್ ಭಾರತ್‌ನ ಭಾಗವಾಗಿ ಆರೋಗ್ಯ ಸೇವೆಗಳಿಗೆ ಪ್ರವೇಶ.
- ಅಟಲ್ ಪೆನ್ಷನ್ ಯೋಜನೆ ಅಡಿಯಲ್ಲಿ ಅಸಂಘಟಿತ ಕ್ಷೇತ್ರದ ಕಾರ್ಮಿಕರಿಗೆ ವೃದ್ಧಾಪ್ಯ ಪಿಂಚಣಿ.
- ಪ್ರಧಾನಮಂತ್ರಿ ಸುರಕ್ಷಾ ಬಿಮಾ ಯೋಜನೆ ಅಡಿಯಲ್ಲಿ ಆಕಸ್ಮಿಕ ವಿಮೆ.
- ಪ್ರಧಾನಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ ಅಡಿಯಲ್ಲಿ ಜೀವ ವಿಮೆ.
- ಹಣಕಾಸು ಸೇರ್ಪಡೆ ಮತ್ತು ಜೀವನೋಪಾಯಕ್ಕಾಗಿ, ಪ್ರಧಾನಮಂತ್ರಿ ಜನ ಧನ್ ಯೋಜನೆ ಅಡಿಯಲ್ಲಿ ಎಲ್ಲರಿಗೂ ಬ್ಯಾಂಕಿಂಗ್, ಸಾಲ ಮತ್ತು ವಿಮೆಗೆ ಪ್ರವೇಶ.
- ಪ್ರಧಾನಮಂತ್ರಿ ಮುದ್ರಾ ಯೋಜನೆ ಅಡಿಯಲ್ಲಿ ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳಿಗೆ ಸಾಲ; 'ಪಿಎಂ ಸ್ವನಿಧಿ' ಅಡಿಯಲ್ಲಿ ರಸ್ತೆ ವ್ಯಾಪಾರಿಗಳಿಗೆ ಸಾಲ.
- ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಖಾತ್ರಿಯಾದ ಕೂಲಿ ಉದ್ಯೋಗ.
- ಪಿಎಂ ವಿಶ್ವಕರ್ಮಾ ಯೋಜನೆ ಅಡಿಯಲ್ಲಿ ಕುಶಲಕರ್ಮಿಗಳು ಮತ್ತು ಕರಕುಶಲ ಕೆಲಸಗಾರರಿಗೆ ಬೆಂಬಲ.
- ಆಹಾರ ಮತ್ತು ಇಂಧನಕ್ಕಾಗಿ, ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ ಅಡಿಯಲ್ಲಿ ಉಚಿತ ಆಹಾರಧಾನ್ಯ.
- ಪ್ರಧಾನಮಂತ್ರಿ ಉಜ್ವಲಾ ಯೋಜನೆ ಅಡಿಯಲ್ಲಿ ಬಡ ಕುಟುಂಬಗಳಿಗೆ ಎಲ್‌ಪಿಜಿ ಸಂಪರ್ಕ.
- ಒಂದೇ ರಾಷ್ಟ್ರ, ಒಂದೇ ರೇಷನ್ ಕಾರ್ಡ್ ಯೋಜನೆಯ ಅಡಿಯಲ್ಲಿ ಆಹಾರ ಭದ್ರತಾ ಸೌಲಭ್ಯದ ಸುಲಭ ಬದಲಾವಣೆ (ಪೋರ್ಟಬಿಲಿಟಿ).
- ಕೌಶಲಾಭಿವೃದ್ಧಿ ಮತ್ತು ಶಿಕ್ಷಣಕ್ಕಾಗಿ, ಪ್ರಧಾನಮಂತ್ರಿ ಕೌಶಲ ವಿಕಾಸ್ ಯೋಜನೆ ಅಡಿಯಲ್ಲಿ ಯುವಕರಿಗೆ ಕೌಶಲ ತರಬೇತಿ.
- ಸ್ಕಿಲ್ ಇಂಡಿಯಾ ಯೋಜನೆ ಅಡಿಯಲ್ಲಿ ಸಮಗ್ರ ಕೌಶಲಾಭಿವೃದ್ಧಿ ಕಾರ್ಯಕ್ರಮ.
- ಕೃಷಿ ಮತ್ತು ಗ್ರಾಮಾಂತರ ಅಭಿವೃದ್ಧಿಗಾಗಿ, ಪಿಎಂ-ಕಿಸಾನ್ ಯೋಜನೆ ಅಡಿಯಲ್ಲಿ ರೈತರಿಗೆ ಆದಾಯ ಬೆಂಬಲ.
- ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ ಯೋಜನೆ ಅಡಿಯಲ್ಲಿ ಗ್ರಾಮೀಣ ಯುವಕರ ಕೌಶಲ ತರಬೇತಿ.
- ಮಹಿಳಾ ಮತ್ತು ಬಾಲ ಅಭಿವೃದ್ಧಿಗಾಗಿ, ಪಿಎಂ ಮಾತೃತ್ವ ವಂದನಾ ಯೋಜನೆ ಅಡಿಯಲ್ಲಿ ಪ್ರಸೂತಿ ಲಾಭಗಳು.
- ಬೇಟಿ ಬಚಾವೋ ಬೇಟಿ ಪಢಾವೋ ಯೋಜನೆ ಅಡಿಯಲ್ಲಿ ಹೆಣ್ಣು ಮಕ್ಕಳ ಶಿಕ್ಷಣ/ಸಬಲೀಕರಣ.
- ಸುಕನ್ಯಾ ಸಮೃದ್ಧಿ ಯೋಜನೆ ಅಡಿಯಲ್ಲಿ ಹೆಣ್ಣುಮಕ್ಕಳಿಗಾಗಿ ಉಳಿತಾಯ ಯೋಜನೆ.

ಹೀಗೆ ಕೇಂದ್ರ ಸರಕಾರದ ಅನೇಕ ಯೋಜನೆಗಳಿವೆ. ಇದೇ ರೀತಿ ರಾಜ್ಯ ಸರಕಾರಗಳೂ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿವೆ. ಅಸಲಿಗೆ ಈ ಎಲ್ಲಾ ಯೋಜನೆಗಳು ನೇರವಾಗಿ ವೈಯಕ್ತಿಕ ನಾಗರಿಕರನ್ನು ಕುರಿತಾಗಿವೆಯೇ ಹೊರತು ಯಾವುದೇ ಸೀಮಿತ ಜಾತಿ, ಮತದ ಪರಿಮಿತಿಯಲ್ಲಲ್ಲ. ಇನ್ನು ಬಹುಸಂಖ್ಯಾತ ಹಿಂದೂ ಜಾತಿಯಾಧಾರಿತ ಪ್ರವರ್ಗಗಳಿಗೆ ಅನುಗುಣವಾದ ಮೀಸಲಾತಿ ಸೌಲಭ್ಯಗಳಿವೆ.

ಔದ್ಯೋಗಿಕವಾಗಿ ಜಾತಿಯಾಧಾರಿತ ಮೀಸಲಾತಿಯನ್ನು ಸಹಜವಾಗಿ ಜನರು ತಾವಾಗಿಯೇ ಹುಡುಕಿಕೊಂಡು ಪಡೆದುಕೊಳ್ಳುತ್ತಾರೆ. ಜಾತಿ ಪ್ರಮಾಣಪತ್ರ ಎನ್ನುವುದು ಒಂದು ಅತ್ಯಂತ ತುರ್ತಿನ ದಾಖಲೆಯೇ ಎನಿಸಿರುವ ಕಾರಣ ಈ ಕುರಿತಾದ ಸೌಲಭ್ಯಗಳ ಬಗ್ಗೆ ಜನರೇ ಅರಿತುಕೊಂಡಿರುತ್ತಾರೆ. ಈ ಕಾರಣವಾಗಿಯೇ ಸಾಮಾನ್ಯ ಜನರಲ್ಲಿ ಯಾವುದೇ ಸರಕಾರಿ ಸೌಲಭ್ಯ ಪಡೆದುಕೊಳ್ಳಲು ಮೀಸಲಾತಿ ಅತ್ಯವಶ್ಯಕ ಎಂಬ ಸಾಮಾನ್ಯ ಕಲ್ಪನೆಯಿದೆ.

ಆದರೆ ಜಾತಿ ಮೀಸಲಾತಿ ಇರದ ಮೇಲ್ಕಾಣಿಸಿದ ಸರಕಾರಿ ಸೌಲಭ್ಯಗಳ ಬಗ್ಗೆ ಜನಪ್ರತಿನಿಧಿಗಳು ತಮ್ಮ ಕ್ಷೇತ್ರದ ಪ್ರಜೆಗಳಿಗೆ ತಿಳಿವಳಿಕೆ ನೀಡಿ ಆದಷ್ಟು ಈ ಸೌಲಭ್ಯಗಳು ಹೆಚ್ಚು ಹೆಚ್ಚು ಜನರನ್ನು ತಲುಪುವಂತೆ ಮಾಡುವುದು ಅವರ ಸಾಂವಿಧಾನಿಕ ಕರ್ತವ್ಯಗಳಲ್ಲೊಂದಾಗಿದೆ. ಪಕ್ಷಾತೀತವಾಗಿ ಇಂಥ ಕರ್ತವ್ಯನಿಷ್ಠ ಜನಪ್ರತಿನಿಧಿಗಳು ಎಷ್ಟಿದ್ದಾರೆ?! ಈ ಎಲ್ಲ ಸೌಲಭ್ಯಗಳನ್ನು ಜನಪ್ರತಿನಿಧಿಗಳು ಸಮರ್ಪಕವಾಗಿ ಜನರಿಗೆ ತಲುಪಿಸಿದ್ದಿದ್ದರೆ, ಇಂದು ಮೀಸಲಾತಿ ಬಯಸುವವರ ಸಂಖ್ಯೆ ಈ ಮಟ್ಟಿಗಿರುತ್ತಿರಲಿಲ್ಲ. ಅದರಲ್ಲೂ ಪ್ರಮುಖವಾಗಿ ಮೀಸಲಾತಿಯನ್ನು ಬಯಸಿಯೇ ಭುಗಿಲೆದ್ದ ವೀರಶೈವ ಲಿಂಗಾಯತ ಪ್ರತ್ಯೇಕ ಧರ್ಮದ ಬೇಡಿಕೆ ಇರುತ್ತಲೇ ಇರಲಿಲ್ಲ!

ಭಾಗ-1

ಆರ್ಥಿಕವಾಗಿ ಹಿಂದುಳಿದವರಿಗಾಗಿ ಇರುವ ಮೇಲ್ಕಾಣಿಸಿದ ಸರಕಾರಿ ಸೌಲಭ್ಯವನ್ನು ಜನರಿಗೆ ತಿಳಿಸದೆ ಕರ್ತವ್ಯಲೋಪ ಎಸಗಿದ ಅನೇಕ ಶಾಸಕರು, ಮಂತ್ರಿಮಹೋದಯರನೇಕರು ತಮ್ಮ ವಿದ್ಯಾಸಂಸ್ಥೆಗಳ ವೈಯಕ್ತಿಕ ಲಾಭಾಂಶಕ್ಕಾಗಿ ಜನರನ್ನು ಪ್ರಚೋದಿಸಿದರು. ಅಲ್ಪಸಂಖ್ಯೆಗಾಗಿ 'ವೀರಶೈವ ಬೇರೆ, ಲಿಂಗಾಯತ ಬೇರೆ' ಎಂಬ ಧರ್ಮಭಂಜನೆಯ ಭಜನೆ ಮಾಡಿದರು. 2018ರಲ್ಲಿ, ಸಮಸಮಾಜದ ವಕ್ತಾರ, ಜಾತಿಮುಕ್ತ ಸಮಾಜದ ವಕ್ತಾರರೆಂದೇ ಹಕ್ಕೊತ್ತಾಯ ಮಂಡಿಸುವ ರಾಯರೆಡ್ಡಿ ಅವರು, ''ನಾವು ನಾಲ್ಕು ಜನ ಮಂತ್ರಿಗಳು ನಾಲ್ಕು ದಿಕ್ಕಿಗೆ ಹೋಗಿ ಲಿಂಗಾಯತ ಪ್ರತ್ಯೇಕ ಧರ್ಮ ಎಂದು ನೆಲೆ ನಿಲ್ಲಿಸುತ್ತೇವೆ'' ಎಂದು ಚುನಾವಣೆಯಲ್ಲಿ ಸೋತು ತಮ್ಮ ನೆಲೆಯನ್ನು ಕಳೆದುಕೊಂಡರು. ಅವರೊಟ್ಟಿಗೆ 'ನನಗೆ ಜಾತಿ ಜಂಗಮರ ವೋಟುಗಳೇ ಬೇಕಿಲ್ಲ' ಎಂದ ಇನ್ನಿಬ್ಬರು ಪಾಟೀಲರು ನೆಲೆ ಕಳೆದುಕೊಂಡರು. ಈ ಇಡೀ ಪ್ರತ್ಯೇಕವಾದಿ ಗುಂಪಿನಲ್ಲಿ ಗೆದ್ದದ್ದು ಓರ್ವ ಪಾಟೀಲ್ ಮಾತ್ರ. ಅವರ ಗೆಲುವಿಗೆ 'ಇವಿಎಂ' ಕಾರಣ ಎಂಬ ಅಪವಾದದ ಬಗ್ಗೆ ಇಡೀ ರಾಜ್ಯವೇ ಮಾತನಾಡಿಕೊಂಡಿತ್ತಾದರೂ ಅದಕ್ಕೆ ಪ್ರಮುಖ ಕಾರಣ ಇವರು ತಮ್ಮ ಕ್ಷೇತ್ರದ ಪ್ರತಿಯೊಬ್ಬ ಜಂಗಮ ಮತದಾರನಿಗೆ 5,000 ರುಪಾಯಿಗಳ ದಕ್ಷಿಣೆ ಕೊಟ್ಟು ಕೈ ಮುಗಿದಿದ್ದು ಎಂದು ಈ ಕ್ಷೇತ್ರದ ಮತದಾರರು ಮಾತನಾಡಿಕೊಂಡಿದ್ದು ಸುದ್ದಿಯಾಗಿತ್ತು. ಒಟ್ಟಾರೆ ಈ ಮಹೋದಯರ ಸೋಲು ಮತ್ತು ಪ್ರಯಾಸದ ಗೆಲುವು ಅವರ ಧರ್ಮಭಂಜನೆಯ ಕಾರಣವೇ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ, ಅಲ್ಲವೇ!

ಅದರಲ್ಲೂ ಪ್ರಜಾಪ್ರಭುತ್ವದ ಪ್ರತಿನಿಧಿಗಳಾಗಿ ಎಲ್ಲಾ ಸಮುದಾಯವನ್ನು ಪ್ರತಿನಿಧಿಸಬೇಕಾದ ಈ ಜನನಾಯಕರು ತಮ್ಮ ಸಂವಿಧಾನಿಕ ಕರ್ತವ್ಯವನ್ನು ಮರೆತು ಜಾತೀಯತೆಯ ಪಕ್ಷಪಾತವನ್ನು ತೋರಿ ಅದಕ್ಕಾಗಿ ಸರಕಾರಿ ಯಂತ್ರವನ್ನು ಬಳಸಿದ್ದು ಅಕ್ಷಮ್ಯ ಅಪರಾಧವೆಂದು ಪ್ರಜೆಗಳು ಅವರಿಗೆ ತಕ್ಕ ಸ್ಥಾನಮಾನ ನೀಡಿದರು. ಇನ್ನು ಇವರ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕಿ ಐತಿಹಾಸಿಕ ಸಂಶೋಧನೆಯ ಅತ್ಯಂತ ಪ್ರಶ್ನಾರ್ಹ ಸತ್ಯಶೋಧನೆಯ ವರದಿ ನೀಡಿದವರು, ನಾಡಿನ ಸಾಕ್ಷಿಪ್ರಜ್ಞೆಯ ವಾರಸುದಾರರೆನಿಸಿದ ಬುದ್ಧಿಜೀವಿಗಳು!

ಅಂದಿನ ಮುಖ್ಯಮಂತ್ರಿಗಳು ಲಿಂಗಾಯತ ಪ್ರತ್ಯೇಕ ಧರ್ಮ ಸಮಿತಿಯನ್ನು ರಚಿಸಿದರು. ಈ ಸಮಿತಿಯ ಅಧ್ಯಕ್ಷತೆಯನ್ನು ನಿವೃತ್ತ ನ್ಯಾಯಾಧೀಶರಾದ ನಾಗಮೋಹನ ದಾಸ್ ವಹಿಸಿದ್ದರೆ, ಸಾಹಿತಿ-ಚಿಂತಕ-ಸಂಶೋಧಕರಾದ ಪ್ರೊ. ಪುರುಷೋತ್ತಮ ಬಿಳಿಮಲೆ, ವಕೀಲರೂ, ತನಿಖಾ-ಪತ್ರಕರ್ತರೂ, ಚಿಂತಕ ಸಾಹಿತಿಗಳೂ ಆದ ಸಿ.ಎಸ್. ದ್ವಾರಕನಾಥ್, ಪತ್ರಕರ್ತ-ಸಾಹಿತಿ ಸರಜೂ ಕಾಟ್ಕರ್, ಸಾಹಿತಿ ಪ್ರೊ. ರಾಮಕೃಷ್ಣ ಮರಾಠೆ, ಸಂಶೋಧಕ ಸಾಹಿತಿ ಪ್ರೊ. ಎಸ್.ಜಿ. ಸಿದ್ದರಾಮಯ್ಯ, ಸಾಹಿತಿ-ಸಂಶೋಧಕ ಪ್ರೊ. ಮುಜಾಫರ್ ಅಸಾದಿ ಮತ್ತು ಲೇಖಕಿ-ಸಂಶೋಧಕಿ ಹನುಮಾಕ್ಷಿ ಗೋಗಿ ಈ ಸಮಿತಿಯ ಸದಸ್ಯರಾಗಿದ್ದರು.

ಈ ಸಂಶೋಧನೆಗೆ ವಚನಗಳೇ ಬಹುಪಾಲು ಆಧಾರವಾಗಿ ವೀರಶೈವ ಎಂಬ ಪದವಿರುವ ಅಸಂಖ್ಯಾತ ವಚನಗಳನ್ನು ಪರಿಗಣಿಸದೆ ಕೇವಲ ಬೆರಳೆಣಿಕೆಯ ವಚನಗಳನ್ನು ಪರಿಗಣಿಸಿದರು. ಪುಟದಿಂದ ಪುಟಕ್ಕೆ ರದ್ದಾಗುವ ಕಲಬುರ್ಗಿ ಸಂಶೋಧನೆಗಳು ಇವರ ಮೂಲಾಧಾರವಾಯಿತು. ಪೆದ್ದುಪೆದ್ದಾಗಿ ಕ್ಯೂಬಾದ ಕ್ಯಾಸ್ಟ್ರೋ ಬಸವಾದಿ ಶರಣರಂತೆ ಪಣ್ಯಸ್ತ್ರೀಯರಿಗೆ ಬಾಳು ಕೊಡಿಸಿದ ಮಹಾತ್ಮ ಎಂದ ಎಸ್. ಜಿ. ಸಿದ್ದರಾಮಯ್ಯ ಈ ಕಮಿಟಿಯಲ್ಲಿನ ಸದಸ್ಯ ಎಂದರೆ ಉಳಿದಂತೆ ನೀವೇ ಊಹಿಸಿಕೊಳ್ಳಿ. ಹೀಗೆ ವಚನಗಳಲ್ಲಿನ ಅಧಿಕೃತ ಕನಿಷ್ಠ ಅಂಕಿ-ಅಂಶಗಳನ್ನೇ ಕೆದಕದ ಈ ಸಮಿತಿಯಲ್ಲಿದ್ದ ಖ್ಯಾತ ನಿವೃತ್ತ ನ್ಯಾಯಾಧೀಶರು, ಸಂಶೋಧನ ಹಿನ್ನೆಲೆಯ ಪ್ರಾಧ್ಯಾಪಕರು, ತನಿಖಾ ವಿಶ್ಲೇಷಣಾ ವರದಿಗಾರ ತಜ್ಞ ಪತ್ರಕರ್ತರು ಅವರವರ ವೃತ್ತಿಗಳಲ್ಲಿ ಈವರೆಗೆ ಕೈಗೊಂಡ ನ್ಯಾಯ ನಿರ್ಣಯ, ಸಂಶೋಧನೆಗಳು ಮತ್ತು ತನಿಖಾ ವರದಿಗಳು ಎಷ್ಟರ ಮಟ್ಟಿಗೆ ಸತ್ಯನಿಷ್ಠೆಯಿಂದ ಕೂಡಿದ್ದವು ಎಂಬ ಧನಾ(ಋಣಾ)ತ್ಮಕ ಸಂಶಯವನ್ನು ಸಹಜವಾಗಿ ಮೂಡಿಸುತ್ತವೆ! ಓರ್ವ ಅಧಿಕಾರಸ್ಥ ರಾಜಕಾರಣಿ ರಚಿಸಿದ ಸಮಿತಿಯು ಆ ರಾಜಕಾರಣಿಗೆ ಬದ್ಧವಿರುತ್ತದೆಯೇ ಹೊರತು ವಿಷಯಕ್ಕಲ್ಲ ಎಂದು ಈ ಸಮಿತಿಯ ವರದಿ ಸಾಬೀತುಮಾಡಿತು.

ಪ್ರತ್ಯೇಕ ಧರ್ಮವಾಗುವುದು ಸಾಧ್ಯವೇ ಇಲ್ಲ ಎಂದು ತಿಳಿದಿದ್ದೂ ಪ್ರತ್ಯೇಕ ಧರ್ಮ ಶಿಫಾರಸನ್ನು ಕೇಂದ್ರಕ್ಕೆ ಕಳಿಸಿ ಕೇಂದ್ರದ ಮೇಲೆ ಗೂಬೆ ಕೂರಿಸುವ ಪಕ್ಷ ರಾಜಕೀಯ ದಾಳಕ್ಕೆ ಅಖಂಡ ವೀರಶೈವ ಲಿಂಗಾಯತರು ಬಲಿಯಾದರು. ಒಂದು ವೇಳೆ ಈ ರಾಜಕೀಯ ನಾಯಕರ ಉದ್ದೇಶ ಅಖಂಡ ವೀರಶೈವ ಲಿಂಗಾಯತರನ್ನು ಉದ್ಧಾರ ಮಾಡುವುದೇ ಆಗಿದ್ದರೆ, ಈಗಲೂ ಯಾವ ಕೇಂದ್ರದ ಒಪ್ಪಿಗೆ ಬೇಕಿಲ್ಲದ ಒಂದು ಸರಳ ಕಾರ್ಯವನ್ನು ಇವರು ಮಾಡಬಹುದು.

ಯಾವುದು ಆ ಸರಳ ಕಾರ್ಯ?

ಲಿಂಗಾಯತರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅತ್ಯಂತ ಹಿಂದುಳಿದ, ಅತಿ ಹಿಂದುಳಿದ ಮತ್ತು ಹಿಂದುಳಿದ ಜಾತಿಗಳು ಸೇರಿರುತ್ತವೆ. ಈ ಸತ್ಯವನ್ನು ಹಾವನೂರು ಆಯೋಗ, ಚಿನ್ನಪ್ಪರೆಡ್ಡಿ ಆಯೋಗಗಳು ತಮ್ಮ ವರದಿಯಲ್ಲಿ ಒಪ್ಪಿಕೊಂಡು, 'ಲಿಂಗಾಯತ ಒಂದು ಜಾತಿಯಲ್ಲ. ಅದು ಹಿಂದೂ ಧರ್ಮದಂತೆಯೇ ಒಂದು ಜಾತಿಗಳ ಸಮೂಹ. ಲಿಂಗಾಯತರಲ್ಲಿ ಬಹಳಷ್ಟು ಹಿಂದುಳಿದ ಜಾತಿಗಳು ಇದ್ದು, ಈ ಹಿಂದುಳಿದ ಜಾತಿಗಳನ್ನು ವಿವಿಧ ಹಿಂದುಳಿದ ವರ್ಗಗಳ ಪಟ್ಟಿಗಳಲ್ಲಿ ಸೇರಿಸುವುದು ಸೂಕ್ತವಾಗಿದೆ' ಎಂದು ಬಹಳ ಸ್ಪಷ್ಟವಾಗಿ ನಮೂದಿಸಿವೆ. ಆದರೆ ಈ ಪಟ್ಟಿಗಳನ್ನು ಪ್ರಕಟಿಸುವಾಗ ಲಿಂಗಾಯತ ಪರಂಪರೆಯ ವಿವಿಧ ಹಿಂದುಳಿದ ಜಾತಿಗಳನ್ನು, ಅವುಗಳ ಹಿಂದುಳಿವಿಕೆಯ ಪ್ರಮಾಣವನ್ನು ಪರಿಶೀಲಿಸದೆ ಸಾರಾ ಸಗಟಾಗಿ ಒಂದೇ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಅಂದರೆ '3-ಬಿ ಪ್ರವರ್ಗ'ದಲ್ಲಿ ಸೇರಿಸಿದ್ದಾರೆ. ಇದರಿಂದಾಗಿ ಲಿಂಗಾಯತ ಪರಂಪರೆಯ ಅತ್ಯಂತ ಹಿಂದುಳಿದ ಮತ್ತು ಅತಿ ಹಿಂದುಳಿದ ಜಾತಿಗಳಿಗೆ ಕಳೆದ 50 ವರ್ಷಗಳಿಂದ ಘೋರ ಅನ್ಯಾಯವಾಗಿದೆ.

ಅಲ್ಲದೆ ಒಕ್ಕೂಟ ಸರಕಾರದ ಹಿಂದುಳಿದ ಆಯೋಗವು ಲಿಂಗಾಯತ ಜನಾಂಗ ಅತ್ಯಂತ ಹಿಂದುಳಿದ ಮತ್ತು ಅತಿ ಹಿಂದುಳಿದ ಜಾತಿಗಳನ್ನು ಸ್ಪಷ್ಟವಾಗಿ ಲಿಂಗಾಯತ ಜಾತಿಗಳೆಂದು ಗುರುತಿಸಿ, ಅವುಗಳನ್ನು ಒಕ್ಕೂಟ ಸರಕಾರದ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸಿದೆ. ಜಾತಿಗಳನ್ನು ಲಿಂಗಾಯತ ಜಾತಿಗಳೆಂದು ಸ್ಪಷ್ಟವಾಗಿ ನಮೂದಿಸಿದೆ.

(ಲೇಖಕರು ಶಿಕಾಗೊ ನಿವಾಸಿ ಮತ್ತು ಸಾಹಿತಿ)

ಒದುಗರ ಒಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ವಿಶೇಷ ವ್ಯಕ್ತಿ ಇನ್ನಿಲ್ಲ!

ಶಾಮನೂರು ಶಿವಶಂಕರಪ್ಪನವರ ಹಳೆಯ ದಾವಣಗೆರೆ ಮನೆ ಮತ್ತು ಅಂಗಡಿಗಳ ನಡುವಿನ ಚೌಕಿಪೇಟೆಯಲ್ಲಿ ಹುಟ್ಟಿ ಬೆಳೆದವನು ನಾನು. ಅಕ್ಕಿ ವ್ಯಾಪಾರದಿಂದ ಆರಂಭವಾಗಿ, ಕಾರ್ಖಾನೆ, ವಿದ್ಯಾಕ್ಷೇತ್ರ, ರಾಜಕಾರಣ, ಧರ್ಮ, ಮುಂತಾಗಿ ವಿವಿಧ ರಂಗಗಳಲ್ಲಿ, ಅಸಾಮಾನ್ಯ ಎನ್ನಬಹುದಾದ ಸಾಧನೆ ಮಾಡಿದವರು ಶಿವಶಂಕರಪ್ಪ. ಅವರಿಗಿಂತ ಹಿರಿಯರಾದ ನನ್ನ ತಂದೆಯವರಿಂದ ಮೊದಲ್ಗೊಂಡು ದಾವಣಗೆರೆಯ ನನ್ನ ಕುಟುಂಬವು ದಶಕಗಳ ಕಾಲ ಶಿವಶಂಕರಪ್ಪನವರ ಏಳಿಗೆಯನ್ನು ಗಮನಿಸಿರುವುದಲ್ಲದೆ ಪ್ರತ್ಯಕ್ಷ-ಪರೋಕ್ಷ ಸ್ನೇಹ-ಸಂಪರ್ಕಗಳನ್ನೂ ಹೊಂದಿದೆ.

ಒಂದು ಮಟ್ಟದ ವಾಣಿಜ್ಯ ನಗರಿಯಾಗಿದ್ದ ದಾವಣಗೆರೆಯನ್ನು ಭರ್ಜರಿ ವ್ಯಾಪಾರ ನಗರಿಯನ್ನಾಗಿಸಿದ್ದಲ್ಲದೆ ಮೌಲಿಕ ವಿದ್ಯಾನಗರಿಯನ್ನಾಗಿಯೂ ಮಾಡಿದ ಕೀರ್ತಿ ಶಿವಶಂಕರಪ್ಪನವರದು. ಈ ಹಾದಿಯಲ್ಲಿ ಅವರು ಹೆಸರನ್ನು ಗಳಿಸಿದರು, ಅಪಾರ ಹಣವನ್ನೂ ಗಳಿಸಿದರು. ವಿದ್ಯಾಕ್ಷೇತ್ರಕ್ಕೆ ಬಲು ದೊಡ್ಡ ಕೊಡುಗೆಯನ್ನು ನೀಡಿದರು; ಅದೇ ವೇಳೆ, ವೈದ್ಯಕೀಯ ವಿದ್ಯಾಭ್ಯಾಸವು ಅತ್ಯಂತ ದುಬಾರಿ ಆಗುವಲ್ಲಿ ಪ್ರಮುಖ ಪಾತ್ರವನ್ನೂ ವಹಿಸಿದರು. ಒಂದಷ್ಟು ಕಾಲ ಹಲವು ಪ್ರಮುಖ ರಾಜಕಾರಣಿಗಳನ್ನು ಬೆರಳ ತುದಿಯಲ್ಲಿ ಕುಣಿಸಿದವರು ಅವರು. ಅನೇಕ ಸತ್ಪಾತ್ರರಿಗೆ ಹಣ, ಸೌಲಭ್ಯ ಇತ್ಯಾದಿ ನೆರವುಗಳನ್ನು ನೀಡಿದರು, ವಿವಿಧ ಪ್ರಶಸ್ತಿಗಳನ್ನು ಕೊಡಿಸಿದರು. ಇಂಥದೇ ನೆರವುಗಳನ್ನು, ಪ್ರಶಸ್ತಿಗಳನ್ನು ಅನೇಕ ಅಪಾತ್ರರಿಗೂ ನೀಡಿದರು. ಆ ಬಗೆಯ ದಾನಶೂರ ಅವರು! ಈ ಎಲ್ಲಾ ಕಾರಣಗಳಿಂದಾಗಿ ಅವರು ನನಗೆ ಅತಿ ವಿಶೇಷ ವ್ಯಕ್ತಿಯಾಗಿ ಕಾಣಿಸುತ್ತಿದ್ದರು! ಶಿವಶಂಕರಪ್ಪನವರು ಎಂಥ ವೃತ್ತಿಪರರು, ವ್ಯವಹಾರಾಸಕ್ತರು ಎಂದರೆ, ದಾವಣಗೆರೆಯಲ್ಲಿ ಅವರ ಬಗ್ಗೆ ಒಂದು ಜೋಕ್ ಹರಿದಾಡುತ್ತಿತ್ತು. ಗೆಳೆಯರೊಡನೆ ಅವರು ತಾಜ್‌ಮಹಲ್ ನೋಡಲು ಹೋದರಂತೆ. ಆದರೆ, ತಾಜ್‌ಮಹಲ್ ಎದುರಿಗೆ ಕುಳಿತು, ಅದರ ಸೌಂದರ್ಯವನ್ನು ಸವಿಯುವ ಬದಲು ಅಕ್ಕಿ ವ್ಯಾಪಾರದ ಬಗ್ಗೆ ಗೆಳೆಯರೊಡನೆ ಮಾತಾಡ ತೊಡಗಿದರಂತೆ!

ದಾವಣಗೆರೆಯ ಚೌಕಿಪೇಟೆಯಲ್ಲಿದ್ದ ನಮ್ಮ ಫೋಟೋ ಸ್ಟುಡಿಯೋ ಮತ್ತು ಮನೆಯಿಂದ ಮಾರುದೂರದಲ್ಲಿರುವ ಬಕ್ಕೇಶ್ವರ ದೇವಸ್ಥಾನದ ಪಕ್ಕದಲ್ಲಿ ಶಿವಶಂಕರಪ್ಪನವರ ಅಂಗಡಿ. ಬಕ್ಕಪ್ಪ ಸ್ವಾಮಿಯ (ಬಕ್ಕೇಶ್ವರರ) ಪರಮಭಕ್ತರು ಅವರು. ನಾನು ಕೂಡ. ಬಕ್ಕಪ್ಪ ಸ್ವಾಮಿಯು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ.

- ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:334

ಸಮಾಚಾರ ಸಣ್ಣದಲ್ಲ

2026ರಲ್ಲಿ ಷೇರು ಪೇಟೆಗೆ 15 ರಜೆ

ಮುಂಬೈ: 'ಎನ್‌ಎಸ್‌ಇ' ಮತ್ತು 'ಬಿಎಸ್‌ಇ'ಯ 2026ನೇ ವರ್ಷದ ಹೊಸ ಕ್ಯಾಲಂಡರ್ ಪ್ರಕಾರ ಭಾರತದ ವಾಣಿಜ್ಯ ರಾಜಧಾನಿ ಮುಂಬೈ ಮಹಾನಗರದಲ್ಲಿರುವ ಷೇರು ವಿನಿಮಯ ಮಾರುಕಟ್ಟೆಗೆ ಶನಿವಾರ ಮತ್ತು ಭಾನುವಾರದ ವಾರದ ರಜೆಗಳನ್ನು ಹೊರತುಪಡಿಸಿ ಒಟ್ಟು 15 ದಿನ ಇತರೆ ರಜೆಗಳು ಇವೆ. ಜ.26ರ ಗಣರಾಜ್ಯೋತ್ಸವದಿಂದ ಆರಂಭಿಸಿ ಡಿ.25ರ ಕ್ರಿಸ್ಮಸ್‌ವರೆಗೂ 15 ಹೆಚ್ಚಿನ ರಜೆಗಳಿರುತ್ತವೆ. ಮಾ.3 ಮಂಗಳವಾರ ಹೋಳಿ ಹಬ್ಬ, 26 ಗುರುವಾರ ಶ್ರೀರಾಮನವಮಿ ಮತ್ತು 31 ಮಂಗಳವಾರ: ಮಹಾವೀರ ಜಯಂತಿಗೆ ರಜೆ. ಏ.3 ಶುಕ್ರವಾರ ಗುಡ್ ಫ್ರೈಡೇ, 14 ಮಂಗಳವಾರ ಅಂಬೇಡ್ಕರ್ ಜಯಂತಿ, ಮೇ 1 ಶುಕ್ರವಾರ ಮಹಾರಾಷ್ಟ್ರ ದಿನ, 28 ಗುರುವಾರ ಬಕ್ರೀದ್, ಜೂ.26 ಶುಕ್ರವಾರ ಮುಹರಂ, ಸೆ.14 ಸೋಮವಾರ ಗಣೇಶ ಚತುರ್ಥಿ, ಅ.2 ಶುಕ್ರವಾರ ಗಾಂಧಿ ಜಯಂತಿ, 20 ಮಂಗಳವಾರ ದಸರಾ, ನ.10 ಮಂಗಳವಾರ ದೀಪಾವಳಿ, 24 ಮಂಗಳವಾರ ಗುರುನಾನಕ್ ಜಯಂತಿದಿನ ಷೇರುಪೇಟೆಗೆ ರಜೆ.

ಎಲ್‌ಡಿಎಫ್‌ಗೆ ಸೋಲು: ಕಾರ್ಯಕರ್ತ ಮೀಸೆ ಕಟ್

ತಿರುವನಂತಪುರಂ: ಕೇರಳ ರಾಜ್ಯದಲ್ಲಿ ಶನಿವಾರ ಪ್ರಕಟವಾದ ಮಹಾನಗರ ಪಾಲಿಕೆ, ಮುನಿಸಿಪಾಲಿಟಿ, ಜಿಲ್ಲಾ ಪಂಚಾಯಿಸಿ, ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಕಮ್ಯುನಿಸ್ಟ್ ಪಕ್ಷಗಳ

ನಾಯಕತ್ವದ 'ಎಲ್‌ಡಿಎಫ್' ಒಕ್ಕೂಟ ಸೋತಿದ್ದಕ್ಕೆ ಕಾರ್ಯಕರ್ತ ಬಾಬು ವರ್ಗೀಸ್ ಮೀಸೆ ಬೋಳಿಸಿ ಕೊಂಡಿದ್ದು, ಅದರ ವಿಡಿಯೊ ಜಾಲತಾಣದಲ್ಲಿ ಹರಿದಾಡುತ್ತಿದೆ. ಪಟ್ಟಣಂತಿಟ್ಟ ಪುರಸಭೆಯಲ್ಲಿ ಎಡ ಪಕ್ಷಗಳ ಒಕ್ಕೂಟ ಎಲ್‌ಡಿಎಫ್ ಅಧಿಕಾರ ಉಳಿಸಿಕೊ ಳ್ಳಲು ವಿಫಲವಾದರೆ ಮೀಸೆ ಬೋಳಿಸಿಕೊಳ್ಳುವೆ ಎಂದು ಚುನಾವಣೆಗೂ ಮುನ್ನ ವರ್ಗೀಸ್ ಸಾರ್ವಜನಿಕವಾಗಿ ಪ್ರತಿಜ್ಞೆ ಮಾಡಿದ್ದರು. ಪುರಸಭೆ ಮಾತ್ರವಲ್ಲದೆ ಪಟ್ಟಣಂತಿಟ್ಟ ಜಿಲ್ಲೆಯಾದ್ಯಂತ ಎಲ್‌ಡಿಎಫ್ ಸೋತು ಸುಣ್ಣವಾಗಿದೆ. 16 ಸದಸ್ಯರ ಪಟ್ಟಣಂತಿಟ್ಟ ಜಿಲ್ಲಾ ಪಂಚಾಯತ್‌ನಲ್ಲಿ 12 ಸ್ಥಾನಗಳಲ್ಲಿ 'ಯುಡಿಎಫ್' ಗೆಲುವು ಸಾಧಿಸಿ ಅಧಿಕಾರಕ್ಕೇರುತ್ತಿದೆ. ಎಲ್‌ಡಿಎಫ್‌ಗೆ ಕೇವಲ 4 ಸ್ಥಾನಗಳಷ್ಟೇ ಸಿಕ್ಕಿವೆ.

1000 ಕೋಟಿ ಲೂಟಿ: ಸಿಬಿಐ ದೋಷಾರೋಪ

ದೆಹಲಿ: ನಕಲಿ ಕಂಪನಿಗಳನ್ನು ಆಕರ್ಷಕ ಹೆಸರುಗಳಲ್ಲಿ ಆರಂಭಿಸಿ, ಅದನ್ನೇ ಬಂಡವಾಳವಾಗಿಸಿಕೊಂಡು ಅಮಾಯಕರಿಂದ ಸೈಬರ್ ವಂಚನೆ ಮೂಲಕ ಸಾವಿರಾರು ಕೋಟಿ ರು.ಗಳನ್ನು ದೋಚಿರುವ ನಾಲ್ವರು ಚೀನಿಯರು ಸೇರಿದಂತೆ 17 ಸೈಬರ್ ವಂಚಕರನ್ನು ಈ ಮೊದಲೇ(ಅಕ್ಟೋಬರ್) ಬಂಧಿಸಿರುವ 'ಕೇಂದ್ರ ತನಿಖಾ ದಳ'(ಸಿಬಿಐ) ಅಧಿಕಾರಿಗಳು, ತನಿಖೆ ಪೂರ್ಣಗೊಳಿಸಿ ಈಗ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ. 17 ವಂಚಕರು ಮತ್ತು 111 ನಕಲಿ ಕಂಪನಿಗಳನ್ನು ದೋಷಾರೋಪ ಪಟ್ಟಿಯಲ್ಲಿ ಹೆಸರಿಸಲಾಗಿದೆ. ಸುಲಭವಾಗಿ ಲಕ್ಷಾಂತರ ರು. ಸಾಲ ಕೊಡಿಸುವ ಆಮಿಷ, ಭಾರೀ ಮೊತ್ತ ಬಡ್ಡಿ ದೊರಕಿಸಿಕೊಡುವ ಬಾಂಡ್‌ಗಳು-ಹಣ ಹೂಡಿಕೆ ಯೋಜನೆಗಳು, ಮನೆಯಲ್ಲೇ ಇದ್ದು ಸಾವಿರಾರು ದುಡಿಯುವ ಕೆಲಸ ಎಂದೆಲ್ಲಾ ಆಸೆ ಹುಟ್ಟಿಸಿ ದೊಡ್ಡ ಮೊತ್ತ ಕಟ್ಟಿಸಿಕೊಂಡು ಜನರನ್ನು ಮೋಸಗೊಳಿಸುವುದೇ ಈ 17 ಸೈಬರ್ ವಂಚಕರ ಕೆಲಸವಾಗಿತ್ತು. ಈ ಮಾರ್ಗ ದಲ್ಲೇ ಇವರು ಒಟ್ಟು 1 ಸಾವಿರ ಕೋಟಿ ರು.ಗೂ ಅಧಿಕ ಹಣ ಗಳಿಸಿದ್ದಾರೆ ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

26 ಮತದ ಸೋಲು: ಸಿಪಿಎಂ ಅಭ್ಯರ್ಥಿ ಸಾವು

ತಿರುವನಂತಪುರ: ಕೇರಳ ರಾಜ್ಯದಲ್ಲಿ ಶನಿವಾರ ಪ್ರಕಟವಾದ ಸ್ಥಳೀಯ ಸಂಸ್ಥೆಗಳ ಚುನಾವಣಾ ಫಲಿತಾಂಶದ ಸುದ್ದಿ ಕೇಳಿದ ಎಲ್‌ಡಿಎಫ್ ಅಭ್ಯರ್ಥಿ, ಸಿಪಿಎಂ ಪಕ್ಷದ ನಾಯಕಿ ಹೃದಯಾಘಾತಕ್ಕೊಳಗಾಗಿ

ಹಠಾತ್ ಸಾವಿಗೀಡಾದರು. ತಿರುವನಂತರಪುರ ಮಹಾನಗರಪಾಲಿಕೆಯ ಒಂದು ವಾರ್ಡ್‌ನಲ್ಲಿ ಮರಳಿ ಆಯ್ಕೆ ಬಯಸಿ ಕಣಕ್ಕಿಳಿದಿದ್ದ ಎಲ್‌ಡಿಎಫ್ ಒಕ್ಕೂಟದ ಪ್ರಮುಖ ಪಾಲುದಾರ ಪಕ್ಷವಾದ ಸಿಪಿಐಎಂನ ಹಾಲಿ ಕೌನ್ಸಿಲರ್ ವಿ.ಆರ್.ಸಿನಿ, ತಾವು ಕೇವಲ 26 ಮತಗಳ ಅಂತರದಲ್ಲಿ ಸೋಲು ಅನುಭವಿಸಿರುವ ಸುದ್ದಿ ಕೇಳಿ ಶನಿವಾರ ಮಧ್ಯಾಹ್ನ ಆಘಾತಗೊಂಡರು. ಶ್ರೀಕಾರ್ಯಮ್‌ನ ನಿವಾಸದಲ್ಲಿ ಹಾಗೆಯೇ ಕುಸಿದುಬಿದ್ದು ಅಸುನೀಗಿದರು. ಕುಟುಂಬ ಸದಸ್ಯರು ತಕ್ಷಣವೇ ಆಸ್ಪತ್ರೆಗೆ ಕರೆದೊಯ್ದರೂ ಪ್ರಯೋಜನವಾಗಲಿಲ್ಲ. ಸಿನಿ ಎಂಬ ಹೆಸರಿನವರೇ ಇನ್ನಿಬ್ಬರು ಪಕ್ಷೇತರ ಅಭ್ಯರ್ಥಿಗಳು ಕಣದಲ್ಲಿದ್ದರು. ಅವರಿಬ್ಬರಿಗೂ ಒಟ್ಟು 44 ಮತಗಳು ಬಂದಿವೆ ಎಂಬುದು ಗಮನಾರ್ಹ ಸಂಗತಿ.

{ **ಭಗವಂತ್ ಮಾನ್** } ಪಂಜಾಬ್ ಸಿಎಂ

'ನನ್ನನ್ನು ಪ್ರಧಾನಿ ಮಾಡಿ, ಜನರಿಗೆ ಏನಾದರೂ ಮಾಡುತ್ತೇನೆ' ಎಂದು ರಾಹುಲ್ ಗಾಂಧಿ ಹೇಳುತ್ತಾರೆ. ಜನ, 'ಮೊದಲು ಏನಾದರೂ ಮಾಡಿ, ಬಳಿಕ ಪ್ರಧಾನಿ ಮಾಡುತ್ತೇವೆ' ಎನ್ನುತ್ತಾರೆ. ನವಜೋತ್ ಸಿಧು ಕೂಡ ಜನರಿಗೆ ಏನೂ ಮಾಡದಿದ್ದರೂ ಉನ್ನತ ಹುದ್ದೆಗೆ ಹಂಬಲಿಸುತ್ತಾರೆ. ಪಂಜಾಬಲ್ಲಿ ಕಾಂಗ್ರೆಸ್ ಸರಕಾರದ ಸಚಿವರಾಗಿದ್ದಾಗ ಸಿಧು ಯಾವುದೇ ಜನಕಲ್ಯಾಣ ಮಾಡಲಿಲ್ಲ.

2 ಯೋಧರು, ಒಬ್ಬ ಭಾಷಾಂತರಕಾರ ಮೃತ, 3 ಸೈನಿಕರಿಗೆ ಗಾಯ | ಐಸಿಸ್ ದಮನಕ್ಕೆಂದೇ ಸಿರಿಯಾದಲ್ಲಿರುವ ಅಮೆರಿಕ ಸೇನೆಗೇ ಪೆಟ್ಟು

ಸಿರಿಯ ಐಸಿಸ್ ಉಗ್ರ ದಾಳಿಗೆ 3 ಅಮೆರಿಕನ್ನರು ಬಲಿ

ಪಾಲ್ಮಿರಾ: ಸಿರಿಯಾ ದೇಶದ ಮಧ್ಯ ಭಾಗದಲ್ಲಿರುವ ಐತಿಹಾಸಿಕ ನಗರ ಪಾಲ್ಮಿರಾ ಬಳಿಯ ಪ್ರದೇಶವೊಂದರಲ್ಲಿ ಶನಿವಾರ ಭಾರೀ ಗುಂಡಿನ ಚಕಮಕಿ ನಡೆದಿದ್ದು, ಇಬ್ಬರು ಅಮೆರಿಕನ್ ಸೈನಿಕರು ಮತ್ತು ಒಬ್ಬ ಅಮೆರಿಕ ಪ್ರಜೆ ಹತರಾಗಿದ್ದಾರೆ. ಇತರೆ ಮೂವರು ಸೈನಿಕರು ಗಂಭೀರವಾಗಿ ಗಾಯಗೊಂಡಿದ್ದಾರೆ. ಇಸ್ಲಾಮಿಕ್ ಸ್ಟೇಟ್‌ನ 'ಐಎಸ್‌ಐಎಸ್'(ಇಸ್ಲಾಮಿಕ್ ಸ್ಟೇಟ್ ಆಫ್ ಇರಾಲ್ ಅಂಡ್ ಸಿರಿಯ) ಉಗ್ರ ಸಂಘಟನೆಯವರೇ ಈ ದಾಳಿ ನಡೆಸಿದ್ದಾರೆ ಎಂದು ಅಮೆರಿಕ ಸರಕಾರ ಆರೋಪಿಸಿದೆ.

'ಐಎಸ್‌ಐಎಸ್'(ಐಸಿಸ್) ಉಗ್ರ ಸಂಘಟನೆಯ ಒಬ್ಬ ಬಂದೂಕುಧಾರಿ ಅಮೆರಿಕದ ಸೇನಾಪಡೆಗಳು ನೆಲೆಸಿದ್ದ ಶಿಬಿರದ ಬಳಿ ಬಂದು ಗುಂಡು ಹಾರಿಸಿದ್ದಾನೆ. ಅಮೆರಿಕ್ ಸೈನಿಕರು ಆತನನ್ನು ಸ್ಥಳದಲ್ಲೇ ಗುಂಡಿಕ್ಕಿ ಕೊಂದಿದ್ದಾರೆ ಎಂದು ಯುಎಸ್ ಸೆಂಟ್ರಲ್ ಕಮಾಂಡ್ ಹೇಳಿದೆ.

ಐಸಿಸ್ ಉಗ್ರ ಗುಂಡಿನ ದಾಳಿ ನಡೆಸಿದಾಗ ಇಬ್ಬರು ಸಿರಿಯಾ ಯೋಧರು, ಒಬ್ಬ ಅಮೆರಿಕನ್ ಸೈನಿಕ ಗಾಯಗೊಂಡಿದ್ದಾರೆ. ಮೂವರೂ ಗಾಯಾಳುಗಳನ್ನು ಹೆಲಿಕಾಪ್ಟರ್ ಮೂಲಕ ಇರಾಕ್ ಮತ್ತು ಜೋರ್ಡಾನ್ ಗಡಿಯಲ್ಲಿನ ಅಲ್-ತನ್ಫ್ ಗ್ಯಾರಿಸನ್ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಗುತ್ತಿದೆ. ಅಯೋವಾ ರಾಷ್ಟ್ರೀಯ ಗಾರ್ಡ್‌ನ ಇಬ್ಬರು ಸೈನಿಕರು, ಒಬ್ಬ ನಾಗರಿಕ ಸಾವನ್ನಪ್ಪಿದ್ದಾರೆ ಎಂದು ರಿಪಬ್ಲಿಕನ್ ಪಕ್ಷದ ಸಂಸದ ಜೋನಿ ಅರ್ನ್ಸ್ಟ್ ಸುದ್ದಿಸಂಸ್ಥೆಗೆ ಮಾಹಿತಿ ನೀಡಿದ್ದಾರೆ.

ಉಗ್ರನ ಗುಂಡಿಗೆ ಬಲಿಯಾದ ಅಮೆರಿಕ ಪ್ರಜೆ, ಸೇನಾಪಡೆಗಳಿಗೆ ಸಿರಿಯಾ ಭಾಷೆಯ ಸಂಗತಿಗಳನ್ನು ಭಾಷಾಂತರಿ ಹೇಳಲು ನೆರವಾಗುತ್ತಿದ್ದರು ಎಂದು ಪೆಂಟಗನ್ ವಿವರಿಸಿದೆ. ಸಿರಿಯಾ ಅಧ್ಯಕ್ಷರ ನಿಯಂತ್ರಣವಿಲ್ಲದ ಪ್ರದೇಶದಲ್ಲಿ ದಾಳಿ ನಡೆದಿದೆ. ದಾಳಿಕೋರ ಉಗ್ರ ಈ ಹಿಂದೆ ಸಿರಿಯಾ ದೇಶದ ಆಂತರಿಕ ಭದ್ರತಾ ಪಡೆಯಲ್ಲಿದ್ದ. ಆತ ಉಗ್ರಗಾಮಿ ದೃಷ್ಟಿಕೋನ ಹೊಂದಿರುವ ಬಗ್ಗೆ ಸೇನೆ ಕಳವಳ ವ್ಯಕ್ತಪಡಿಸಿತ್ತು. ಆದರೆ ಕ್ರಮ ತೆಗೆದುಕೊಳ್ಳಲು ಆಗಿರಲಿಲ್ಲ, ಆ ಬಳಿಕ ಆತ ಐಸಿಸ್ ಸಿದ್ಧಾಂತ ಮೆಚ್ಚಿ ಉಗ್ರರ ಜತೆಗೇ ಗುರುತಿಸಿಕೊಂಡಿದ್ದ ಎಂದು ಸಿರಿಯಾ ಅಧಿಕಾರಿಗಳು ಮಾಹಿತಿ ಹಂಚಿಕೊಂಡಿರುವುದಾಗಿ ಪೆಂಟಗನ್ ತಿಳಿಸಿದೆ.

ಸಿರಿಯಾದಲ್ಲಿ ಐಸಿಸ್ ಉಗ್ರರು ಮತ್ತೆ ತಲೆ ಎತ್ತದಂತೆ ಮಾಡಲು ನೆಲೆಗೊಂಡಿರುವ ಅಮೆರಿಕ ಸೇನೆ.

ಸಿರಿಯಾ ಸರಕಾರ, ಐಸಿಸ್ ಉಗ್ರರ ನಡುವಿನ ಸೇನಾ ಸಂಘರ್ಷದಲ್ಲಿ ಹಾನಿಗೀಡಾಗಿರುವ ಜನವಸತಿ ಪ್ರದೇಶದ ಕಟ್ಟಡ.

ಕಠಿಣ ಪ್ರತೀಕಾರ ಕ್ರಮ: ಡೊನಾಲ್ಡ್ ಟ್ರಂಪ್ ಎಚ್ಚರಿಕೆ

ಇದು ಅಮೆರಿಕದ ಸೇನಾಪಡೆಗಳ ಮೇಲೆ ನಡೆದಿರುವ ಐಸಿಸ್ ದಾಳಿಯಾಗಿದೆ. ಅಮೆರಿಕ ಸೈನಿಕರನ್ನು ಕೊಂದವರನ್ನು ಸುಮ್ಮನೆ ಬಿಡುವುದಿಲ್ಲ. ಅವರು ವಿಶ್ವದಲ್ಲಿ ಎಲ್ಲೇ ಅಡಗಿದ್ದರೂ ದಮನ ಮಾಡುತ್ತೇವೆ. 'ಐಸಿಸ್' ಉಗ್ರ ಸಂಘಟನೆ ವಿರುದ್ಧ ಸರಿಯಾದ ಪ್ರತೀಕಾರ ಕ್ರಮ ಜರುಗಿಸುತ್ತೇವೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗುಡುಗಿದ್ದಾರೆ. ಈ ದಾಳಿಯು ಸಿರಿಯಾದ ಅಪಾಯಕಾರಿ ಪ್ರದೇಶದಲ್ಲಿ ನಡೆದಿದೆ. ಸಿರಿಯಾ ಅಧ್ಯಕ್ಷ ಅಹ್ಮದ್ ಅಲ್-ಶರಾ ಈ ದಾಳಿಯಿಂದ ಅತ್ಯಂತ ಕೋಪಗೊಂಡಿದ್ದಾರೆ, ಆಘಾತಕ್ಕೂ ಒಳಗಾಗಿದ್ದಾರೆ. ಅಮೆರಿಕದ ಶ್ರೇಷ್ಠ ತನಿಖಾ ಸಂಸ್ಥೆಯಾದ 'ಎಫ್‌ಬಿಐ'ನ ಒಂದು ತಂಡ ಅದಾಗಲೇ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸುತ್ತಿದೆ. ಈ ದಾಳಿ ಐಸಿಸ್ ಉಗ್ರರೇ ಮಾಡಿರುವುದಾ ಎಂಬುದನ್ನು ದೃಢಪಡಿಸಿಕೊಳ್ಳಲಾಗುವುದು. ಅಮೆರಿಕ ಮತ್ತು ಸಿರಿಯಾ ಸೇನಾಪಡೆಗಳೆರಡೂ ಸೇರಿಕೊಂಡು ಐಸಿಸ್ ಉಗ್ರ ಸಂಘಟನೆಗೆ ತಕ್ಕ ಪಾಠ ಕಲಿಸುತ್ತೇವೆ ಎಂದು ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ಐಎಸ್‌ಐಎಸ್ ಮತ್ತೆ ಸಂಘಟಿತವಾಗುತ್ತಿದೆ

ಸಿರಿಯಾದಲ್ಲಿ ಮತ್ತೆ 'ಐಎಸ್‌ಐಎಸ್' ಉಗ್ರ ಸಂಘಟನೆ ಬಲವಾಗಿ ಸಂಘಟಿತವಾಗುತ್ತಿದ್ದು, ಅಧ್ಯಕ್ಷ ಅಹ್ಮದ್ ಅಲ್-ಶರಾ ಸರಕಾರವನ್ನು ಕೆಡವಿ ಮುಸ್ಲಿಂ ಪ್ರಾಬಲ್ಯದ ದೇಶದ ಆಡಳಿತವನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸುತ್ತಿದೆ. ಐಎಸ್‌ಐಎಸ್ ಮತ್ತೆ ತಲೆ ಎತ್ತದಂತೆ ಮಾಡಲೆಂದೇ ಅಮೆರಿಕ ಸರಕಾರ ತನ್ನ ಸೇನಾಪಡೆಗಳನ್ನು ಸಿರಿಯಾದ ಕೆಲವೆಡೆ ನೆಲೆಗೊಳಿಸಿದೆ. ಆದರೆ, ಅಮೆರಿಕನ ಸೇನಾ ಶಿಬಿರಗಳು ಐಎಸ್‌ಐಎಸ್ ಉಗ್ರರಿಂದ ಅಪಾಯ ಎದುರಿಸುತ್ತಿರುವುದನ್ನು ಈ ದಾಳಿ ಎತ್ತಿ ತೋರಿಸಿದೆ.

ಪುತ್ರಿಗೆ ಮಾದಕ ವ್ಯಸನ: ಅಮ್ಮ ಆತ್ಮಹತ್ಯೆ ಯತ್ನ

ಗುಂಟೂರು: ಮುದ್ದಿನಿಂದ ಸಾಕಿದ ಒಬ್ಬಳೇ ಮಗಳು ಮಾದಕ ವ್ಯಸನಿಯಾಗಿದ್ದಾಳೆ ಎಂದು ತಿಳಿದು ಆಘಾತಕ್ಕೊಳಗಾದ ತಾಯಿ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಆಂಧ್ರಪ್ರದೇಶದ ಗುಂಟೂರಿನಲ್ಲಿ ನಡೆದಿದೆ. ಇಂಟರ್‌ಮಿಡಿಯೇಟ್ ಪ್ರಥಮ ವರ್ಷದಲ್ಲಿರುವ ಬಾಲಕಿಗೆ ಅದೇ ಕಾಲೇಜಿನ ಹಿರಿಯ ವಿದ್ಯಾರ್ಥಿ ಇನ್‌ಸ್ಟಾಗ್ರಾಮ್ ಮೂಲಕ ಪರಿಚಯವಾಗಿದ್ದಾನೆ. ಬಾಲಕಿಯನ್ನು ಪ್ರೀತಿಯ ಜಾಲಕ್ಕೆ ಒಳಪಡಿಸಿ ಕ್ರಮೇಣ ಮಾದಕ ವ್ಯಸನಿಯನ್ನಾಗಿಸಿದ್ದಾನೆ. ಅಮಲಿನಲ್ಲಿದ್ದ ಬಾಲಕಿಯನ್ನು ಲೈಂಗಿಕವಾಗಿ ಬಳಸಿಕೊಂಡು ಫೋಟೊ, ವಿಡಿಯೊ ಮಾಡಿ ಬಳಿಕ ಬ್ಲ್ಯಾಕ್‌ಮೇಲ್ ಮಾಡಲಾರಂಭಿಸಿದ್ದಾನೆ. ತಾಯಿ ಮೊನ್ನೆ ಮಗಳ ಮೊಬೈಲ್ ಫೋನ್ ಪರಿಶೀಲಿಸಿದಾಗ ಅದರಲ್ಲಿದ್ದ ಫೋಟೊಗಳನ್ನು ಕಂಡು ಆಘಾತಕ್ಕೊಳಗಾಗಿದ್ದಾರೆ. ಪ್ರಶ್ನಿಸಿದಾಗ ತಾಯಿ ಮೇಲೆಯೇ ಮಗಳು ಹಲ್ಲೆ ನಡೆಸಿದ್ದಾಳೆ. ಇದೇ ವೇಳೆ, ಮಗಳು ಮಾದಕ ವ್ಯಸನಿಯಾಗಿದ್ದಾಳೆ ಎಂಬುದೂ ತಾಯಿಗೆ ತಿಳಿದಿದೆ. ತೀವ್ರ ಆಘಾತಕ್ಕೊಳಗಾದ ತಾಯಿ, ನಿದ್ರೆ ಮಾತ್ರೆ ಸೇವಿಸಿದ್ದಾರೆ. ತಕ್ಷಣವೇ ಆಕೆಯನ್ನು ಗುಂಟೂರು ಸರಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ. ಬಾಲಕಿಗೆ ಮಾದಕ ದ್ರವ್ಯ ಪೂರೈಸಿದವನನ್ನು ಸೆರೆ ಹಿಡಿದು ಡ್ರಗ್ಸ್ ಮಾರಾಟ ಜಾಲ ಪತ್ತೆ ಮಾಡಲು ವಿಶೇಷ ತಂಡ ರಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ವಕುಲ್ ಜಿಂದಾಲ್ ಹೇಳಿದ್ದಾರೆ.

ಕೆನಡಾ: ಪಂಜಾಬ್‌ನ ಯುವಕರ ಗುಂಡಿಕ್ಕಿ ಹತ್ಯೆ

ಟೊರಂಟೊ: ಕೆನಡಾದ ಆಗ್ನೇಯ ಭಾಗದಲ್ಲಿರುವ ಎಡ್ಮಂಟನ್‌ನಲ್ಲಿ ಯೋಜಿತ ದಾಳಿ ನಡೆಸಿರುವ ದುಷ್ಕರ್ಮಿಗಳು ಪಂಜಾಬ್ ಮೂಲದ ಇಬ್ಬರು ಯುವಕರನ್ನು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ. ಮೃತ ಯುವಕರನ್ನು ಪಂಜಾಬ್ ರಾಜ್ಯದ ಬರೆಹ್ ಗ್ರಾಮದ ಗುರುದೀಪ್

ಸಿಂಗ್ ಮತ್ತು ಮಾನ್ಸಾದ ಬುಧ್ಲಾಡಾ ಬಳಿಯ ಉದ್ದತ್ ಸೈದೇವಾಲಾ ಗ್ರಾಮದ ರಣಬೀರ್ ಸಿಂಗ್ ಎಂದು ಗುರುತಿಸಲಾಗಿದೆ.

ಆಂಬ್ಯುಲೆನ್ಸ್ ಬರುವವರೆಗೂ ಪೊಲೀಸ್ ಅಧಿಕಾರಿಗಳೇ ಯುವಕರ ಜೀವ ಉಳಿಸಲು ಶ್ರಮಿಸಿದರು. ಆದರೆ ಇಬ್ಬರೂ ಯುವಕರು ಸ್ಥಳದಲ್ಲಿಯೇ ಕೊನೆಯುಸಿರೆಳೆದರು. ಇದೊಂದು ದುಷ್ಕರ್ಮಿಗಳ ಯೋಜಿತ ದಾಳಿಯಾಗಿದೆ ಎಂದು ಎಡ್ಮಂಟನ್ ಪೊಲೀಸರು ಅಂದಾಜು ಮಾಡಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ. ಡಿ.16-17ರಂದು ಮರಣೋತ್ತರ ಪರೀಕ್ಷೆ ನಡೆಸಲಾಗುವುದು. ಬಳಿಕ ಮೃತದೇಹಗಳನ್ನು ಕುಟುಂಬದವರಿಗೆ ಹಸ್ತಾಂತರಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹುಟ್ಟುಹಬ್ಬ: ಸ್ನೇಹಿತನೊಬ್ಬನ ಹುಟ್ಟುಹಬ್ಬ ಆಚರಿಸಲು ಗುರುದೀಪ್ ಮತ್ತು ರಣಬೀರ್ ಶುಕ್ರವಾರ ಸಂಜೆ ಹೋಗುತ್ತಿ ದ್ದರು. ದುಷ್ಕರ್ಮಿಗಳು ಅವರ ಮೇಲೆ ಏಕಾಏಕಿ ಗುಂಡು ಹಾರಿಸಿ ಕೊಂದಿದ್ದಾರೆ ಎಂದು ಗುರುದೀಪ್ ಅವರ ಸ್ನೇಹಿತ ಅರ್ಷ್ ದೀಪ್ ತಿಳಿಸಿರುವುದಾಗಿ ಗುರುದೀಪ್ ಕುಟುಂಬದವರು ಸುದ್ದಿಸಂಸ್ಥೆಗೆ ಭಾನುವಾರ ಮಾಹಿತಿ ನೀಡಿದ್ದಾರೆ. ಉನ್ನತ ವ್ಯಾಸಂಗಕ್ಕಾಗಿ ಕೆನಡಾಗೆ ತೆರಳಿದ್ದ ಇಬ್ಬರೂ ಯುವಕರು, ವ್ಯಾಸಂಗ ಪೂರ್ಣ ಗೊಂಡ ಕಾರಣ, ಉತ್ತಮ ನೌಕರಿಯ ಹುಡುಕಾಟದಲ್ಲಿದ್ದರು ಎಂದೂ ಕುಟುಂಬದವರು ತಿಳಿಸಿದ್ದಾರೆ.

ಲಿಬಿಯಾ: ಭಾರತೀಯ ಕುಟುಂಬ ಅಪಹರಣ

ಟ್ರಿಪೋಲಿ: ಉತ್ತರ ಆಫ್ರಿಕಾ ಖಂಡದ ದೇಶ ಲಿಬಿಯಾದಲ್ಲಿ ಭಾರತ ಮೂಲದ ಕುಟುಂಬವೊಂದರ ಅಪಹರಣವಾಗಿದ್ದು, 2 ಕೋಟಿ ರು. ಒತ್ತೆ ಹಣಕ್ಕೆ ಬೇಡಿಕೆಯ ಕರೆ ಬಂದಿದೆ.

ಪೋರ್ಚುಗಲ್‌ನ ಏಜೆಂಟ್‌ವೊಬ್ಬನ ನೆರವು ಪಡೆದು ಯೂರೋಪ್‌ನಲ್ಲಿ ನೆಲೆಸಲು ಬಯಸಿದ ಗುಜರಾತ್‌ನ ಪತಿ-ಪತ್ನಿ ಮತ್ತು 3 ವರ್ಷದ ಮಗಳನ್ನು ಒಳಗೊಂಡ ಕುಟುಂಬ ಲಿಬಿಯಾ ಮಾರ್ಗವಾಗಿ ಪೋರ್ಚುಗಲ್‌ಗೆ ತೆರಳುತ್ತಿದ್ದಾಗಲೇ ಅಪಹರಣಕ್ಕೊಳ ಗಾಗಿದೆ. ಮೂವರನ್ನು ಜೀವಂತ ಬಿಟ್ಟು ಕಳುಹಿಸಬೇಕೆಂದರೆ 2 ಕೋಟಿ ರು. ಹಣ ನೀಡಬೇಕು ಎಂದೂ ಅಪಹರಣಕಾರರು ಬೇಡಿಕೆ ಇಟ್ಟಿದ್ದಾರೆ ಎಂದು ಸುದ್ದಿಸಂಸ್ಥೆ ಶನಿವಾರ ವರದಿ ಮಾಡಿದೆ.

ಗುಜರಾತ್ ರಾಜ್ಯದ ಮೆಹ್ಸಾನಾ ಜಿಲ್ಲೆಯ ಬಾದಲ್‌ಪುರ ಗ್ರಾಮದ ಕುಟುಂಬವೊಂದರ ಕಿಸಮತ್‌ಸಿನ್ಹಾ ಛಾವ್ಡಾ, ಪತ್ನಿ ಹೀನಾಬೆನ್ ಮತ್ತು ಪುತ್ರಿ ದೇವಾಂಶಿ ಲಿಬಿಯಾದಲ್ಲಿ ಅಪಹರಣಕ್ಕೊಳಗಾಗಿದ್ದಾರೆ. ಒತ್ತೆ ಹಣ ನೀಡುವಂತೆ ಅಪಹರಣಕಾರರು ಗುಜರಾತ್ ಕುಟುಂಬಕ್ಕೇ ಕರೆ ಮಾಡಿದ್ದಾರೆ. ಗುಜರಾತ್ ಅಹಮದಾಬಾದ್‌ನಿಂದ ನ.29ರಂದು ವಿಮಾನದಲ್ಲಿ ಹೊರಟು ದುಬೈ ಮಾರ್ಗವಾಗಿ ಲಿಬಿಯಾದ ಬೆಂಘಾಜಿ ನಗರ ತಲುಪಿದ್ದರು. ಅಲ್ಲಿಂದ ಪೂರ್ಚುಗಲ್‌ಗೆ ತೆರಳಬೇಕೆಂದು ಸಿದ್ಧತೆ ನಡೆಸಿದ್ದಾಗಲೇ ಮೂವರ ಅಪಹರಣವಾಗಿದೆ. ಗುಜರಾತ್‌ನ ಕುಟುಂಬದವರು, ದಂಪತಿ ಮತ್ತು ಪುತ್ರಿಯ ಅಪಹರಣ, ಒತ್ತೆ ಹಣಕ್ಕೆ ಬೇಡಿಕೆ ವಿಚಾರವನ್ನು ಮೆಹ್ಸಾನಾ ಜಿಲ್ಲಾಧಿಕಾರಿಗೆ ಮತ್ತು ವಿದೇಶಾಂಗ ಸಚಿವಾಲಯಕ್ಕೆ ತಿಳಿಸಿದ್ದು, ನೆರವು ಕೋರಿದ್ದಾರೆ.

ಪ.ಬಂ.ದಲ್ಲಿ ಕೋಟಿ ನಕಲಿ ಮತದಾರರು

ಕೋಲ್ಕತ್ತ: ಬಿಹಾರ ರಾಜ್ಯದ ಬಳಿಕ 2ನೇ ಹಂತದಲ್ಲಿ 9 ರಾಜ್ಯಗಳು ಮತ್ತು 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆ ಸಲುವಾಗಿ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್‌ಐಆರ್) ಪ್ರಕ್ರಿಯೆ ನಡೆದಿದೆ. ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ಪ್ರಕ್ರಿಯೆಯ ಬಳಿಕ 1 ಕೋಟಿ ನಕಲಿ ಮತದಾರರು ಪತ್ತೆಯಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ' ನಡೆಸಿದಾಗ ಪುತ್ರನಿಗಿಂತ ತಂದೆ 15 ವರ್ಷವಷ್ಟೇ ಹಿರಿಯ, 40 ವರ್ಷಕ್ಕಿಂತ ಕಡಿಮೆ ಪ್ರಾಯದ ಅಜ್ಜಂದಿರು ಎಂಬ ಅಚ್ಚರಿಗಳೂ ಕಂಡುಬಂದಿವೆ. ಹೀಗೆ 85 ಲಕ್ಷ ಮತದಾರರ ಮಾಹಿತಿಗಳೇ ಎಸ್‌ಐಆರ್ ಅಧಿಕಾರಿಗಳನ್ನು ಬೆಚ್ಚಿಬೀಳಿಸಿವೆ. ಹೀಗೆ ತಪ್ಪು ಮಾಹಿತಿಗಳನ್ನು ಒಳಗೊಂಡ 1.38 ಕೋಟಿ ಮತದಾರರ ದಾಖಲೆಗಳನ್ನು ಮರು ಪರಿಶೀಲನೆ ಮಾಡಿ ನೈಜ ಮತದಾರರ ಹೆಸರನ್ನೇ ಮತದಾರರ ಪಟ್ಟಿಯಲ್ಲಿ ಉಳಿಸಲು ಚುನಾವಣಾ ಆಯೋಗ ಸಿದ್ಧತೆ ನಡೆಸಿದೆ. ಮತದಾರರ ಪಟ್ಟಿ ಪರಿಷ್ಕರಣೆ ವೇಳೆ 57.52 ಲಕ್ಷ ಮತದಾರರು ವಿಳಾಸದಲ್ಲಿ ಪತ್ತೆಯಾಗಿಲ್ಲ. 24.14 ಲಕ್ಷ ಮಂದಿ ಮೃತಪಟ್ಟಿದ್ದರೂ ಅವರ ಹೆಸರು ಈಗಲೂ ಮತದಾರರ ಪಟ್ಟಿಯಲ್ಲಿ ಉಳಿದುಕೊಂಡಿವೆ. 11.57 ಲಕ್ಷ ಜನರು ನಕಲಿ ವಿಳಾಸ ನೀಡಿದ್ದಾರೆ. 19.89 ಲಕ್ಷ ಮಂದಿ ಬೇರೆ ವಿಳಾಸಕ್ಕೆ ಸ್ಥಳಾಂತರಗೊಂಡಿದ್ದಾರೆ. 13.05 ಲಕ್ಷ ಮತದಾರರ ಹೆಸರು 2-3 ಮತ ಕ್ಷೇತ್ರಗಳಲ್ಲಿ ದಾಖಲಾಗಿದೆ. 11.57 ಲಕ್ಷ ಮಂದಿಯ ಅರ್ಜಿ ಭರ್ತಿಯಾಗಿ ಆಯೋಗಕ್ಕೆ ವಾಪಸಾಗಿಲ್ಲ ಎಂದು ಚುನಾವಣಾ ಆಯೋಗದ ಮೂಲಗಳು ತಿಳಿಸಿವೆ.

ಬಿಜೆಪಿ ಸಂಸದೀಯ ಮಂಡಳಿಯಿಂದ ನೇಮಕ | ಕಾಯಸ್ಥ, ಬಿಹಾರ ಲೋಕೋಪಯೋಗಿ ಸಚಿವ

ನಿತಿನ್ ನಬಿನ್ ಬಿಜೆಪಿ ಕಾರ್ಯಾಧ್ಯಕ್ಷ

ದೆಹಲಿ: ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಕಾರ್ಯಾಧ್ಯಕ್ಷರಾಗಿ ನಿತಿನ್ ನಬಿನ್(45) ನೇಮಕಗೊಂಡಿದ್ದಾರೆ.

ಬಿಜೆಪಿಯ ಸಂಸದೀಯ ಮಂಡಳಿಯು ಭಾನುವಾರ ಸಭೆ ನಡೆಸಿ ಮಹತ್ವದ ಈ ಘೋಷಣೆ ಮಾಡಿದೆ.

ಸಂಸದೀಯ ಮಂಡಳಿಯ ಈ ಆದೇಶ ತಕ್ಷಣದಿಂದಲೇ ಜಾರಿಗೆ ಬರಲಿದೆ ಎಂದು ಪಕ್ಷದ ರಾಷ್ಟ್ರೀಯ ಮಹಾ ಕಾರ್ಯದರ್ಶಿ ಅರುಣ್ ಸಿಂಗ್ ಅವರು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿತಿನ್ ನಬಿನ್ ಅವರು ನಂತರದ ದಿನಗಳಲ್ಲಿ ಬಿಜೆಪಿಯ ರಾಷ್ಟ್ರಾಧ್ಯಕ್ಷರಾಗಿರುವ ಜಗತ್ ಪ್ರಕಾಶ್ ನಡ್ಡಾ ಅವರ ಸ್ಥಾನಕ್ಕೆ ಬರಲಿದ್ದಾರೆ. ಪಟನಾ ವ್ಯಾಪ್ತಿಯ ಬಂಕಿಪುರ ವಿಧಾನಸಭಾ ಕ್ಷೇತ್ರ ದಿಂದ ಆಯ್ಕೆಯಾಗಿರುವ ನಿತಿನ್ ನಬಿನ್ ಅವರು ಸದ್ಯ ಬಿಹಾರ ರಾಜ್ಯ ಸರಕಾರದಲ್ಲಿ ಲೋಕೋ ಪಯೋಗಿ ಸಚಿವರಾಗಿದ್ದಾರೆ. ಪಕ್ಷದ ಈಗಿನ ದೊಡ್ಡ ನಿರ್ಧಾರದಿಂದ ನಿತಿನ್ ನಬಿನ್ ಅವರಿಗೆ ರಾಷ್ಟ್ರ ಮಟ್ಟದ ರಾಜಕಾರಣಕ್ಕೆ ಬಡ್ತಿ ಸಿಕ್ಕಿದೆ. ಕಾಯಸ್ಥ ಸಮುದಾಯದ ಪ್ರಮುಖ ಜನಪ್ರತಿನಿಧಿಯಾದ ನಿತಿನ್ ಅವರಿಗೆ ಅಧಿಕಾರ ರಾಜಕಾರಣದಲ್ಲಿ ಉನ್ನತೀಕರಣವಾಗಿದೆ.

ನಿತಿನ್ ಅವರು ಬಿಹಾರದ ಬಿಜೆಪಿ ಹಿರಿಯ ನಾಯಕರಾಗಿದ್ದ ದಿ.ನಬಿನ್ ಕಿಶೋರ್ ಸಿನ್ಹಾ ಅವರ ಪುತ್ರ. ವಿದ್ಯಾರ್ಥಿ ದೆಸೆಯಲ್ಲೇ ಎಬಿವಿಪಿ ಮೂಲಕ ಬಿಜೆಪಿಯ ಸಂಪರ್ಕಕ್ಕೆ ಬಂದಿದ್ದರು. 2000ದಲ್ಲಿ ರಾಜಕೀಯ ಪ್ರವೇಶಿಸಿ, ಮೊದಲ ಬಾರಿಗೆ 2010ರಲ್ಲಿ ಬಿಹಾರ ಶಾಸಕರಾದರು.

ಶುಭಾಶಯ: ಪ್ರಧಾನಿ ನರೇಂದ್ರ ಮೋದಿ ಅವರು ಪಕ್ಷದ ನೂತನ ರಾಷ್ಟ್ರೀಯ ಕಾರ್ಯಾಧ್ಯಕ್ಷರಾಗಿ ನೇಮಕಗೊಂಡ ನಿತಿನ್ ನಬಿನ್ ಅವರಿಗೆ ಶುಭ ಕೋರಿದ್ದಾರೆ. 'ಜನರ ಆಶೋತ್ತರಗಳನ್ನು ಅರ್ಥಮಾಡಿಕೊಂಡು ತಕ್ಷಣ ಈಡೇರಿಸುವ ಉತ್ಸಾಹಿ ಯುವ ನಾಯಕ, ವಿನಯವಂತ, ಶ್ರೇಷ್ಠ ಸಂಘಟನಾಕಾರ, ಹಲವು ಬಾರಿಯ ಶಾಸಕ-ಸಚಿವರಾಗಿ ಉತ್ತಮ ಹೆಸರು ಮಾಡಿರುವ ನಿತಿನ್ ಅವರಿಗೆ ಶುಭ ಹಾರೈಕೆಗಳು. ನಿತಿನ್ ಅವರು ಪಕ್ಷವನ್ನು ಮತ್ತಷ್ಟು ಬಲಿಷ್ಠವಾಗಿ ಸಂಘಟಿಸಲಿದ್ದಾರೆ ಎಂಬ ವಿಶ್ವಾಸವಿದೆ' ಎಂದು 'ಎಕ್ಸ್' ಸಂದೇಶ ರವಾನಿಸಿದ್ದಾರೆ.

ಇತ್ತೀಚೆಗಷ್ಟೇ ನಡೆದ ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟಕ್ಕೆ 202 ಶಾಸಕ ಬಲ ದೊರಕಿಸಿಕೊಟ್ಟು, ರಾಷ್ಟ್ರ ಮಟ್ಟದಲ್ಲಿಯೂ 'ಒಬಿಸಿ' ಸಮುದಾಯ ಪಕ್ಷದತ್ತ ಆಕರ್ಷಿತವಾಗುವಂತೆ ಮಾಡಿದ ಬಿಹಾರ ರಾಜ್ಯಕ್ಕೆ ಬಿಜೆಪಿ, ನಿತಿನ್ ನಬಿನ್ ಉನ್ನತೀಕರಣ ಮೂಲಕ 'ಉಡುಗೊರೆ' ಕೊಟ್ಟಂತಾಗಿದೆ.

ಶನಿವಾರ ಸಂಜೆ 4.22: ಎಂಟು ಮಂದಿಗೆ ಗಾಯ | ಬಂದೂಕುಧಾರಿ ಬಂಧನ

ಅಮೆರಿಕ ಬ್ರೌನ್ ವಿವಿ ಶೂಟೌಟ್, 2 ಸಾವು

ವಾಷಿಂಗ್ಟನ್: ಅಮೆರಿಕದ ರೋಡ್ ಐಲೆಂಡ್‌ನಲ್ಲಿರುವ ಬ್ರೌನ್ ವಿಶ್ವವಿದ್ಯಾಲಯದಲ್ಲಿ ಶನಿವಾರ ಸಂಜೆ 4.22ರ ಗುಂಡಿನ ದಾಳಿ ನಡೆದಿದ್ದು, ಇಬ್ಬರು ಮೃತಪಟ್ಟು, 8 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ.

ಬರಸ್ ಮತ್ತು ಹೋಲಿ ಇಂಜಿನಿಯರಿಂಗ್ ಕಟ್ಟಡದಲ್ಲಿದ್ದ ಇಬ್ಬರು ಗುಂಡಿನ ದಾಳಿಯಿಂದ ಮೃತಪಟ್ಟಿದ್ದಾರೆ. ಎಂಟು ಮಂದಿ ಗಾಯಾಳುಗಳು ಗಂಭೀರ ಸ್ಥಿತಿಯಲ್ಲಿ ಆಸ್ಪತ್ರೆಗೆ ದಾಖಲಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ. ಕೆಲ ಗಂಟೆ ಕಾಲ ವಿವಿ ಅಂಗಳದಲ್ಲಿ ಗುಂಡಿನ ದಾಳಿ ನಡೆದಿದೆ. ವಿದ್ಯಾರ್ಥಿಗಳು ರೋಡ್ ಐಲೆಂಡ್ ಪ್ರಾವಿಡೆನ್ಸ್‌ನಲ್ಲಿರುವ ಕ್ಯಾಂಪಸ್‌ನಲ್ಲಿನ ಹಾಸ್ಟೆಲ್ ವಸತಿ ನಿಲಯಗಳು ಮತ್ತು ತರಗತಿ ಕೋಣೆಗಳಲ್ಲಿ 3 ಗಂಟೆಗಳ ಕಾಲ ಅಡಗಿ ಕುಳಿತು ತಮ್ಮ ಜೀವ ರಕ್ಷಿಸಿಕೊಂಡರು ಎಂದು ರೋಡ್ ಐಲೆಂಡ್ ಪ್ರಾವಿಡೆನ್ಸ್ ಮೇಯರ್ ಬ್ರೆಟ್ ಸ್ಮೈಲಿ ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ. ಅಧಿಕಾರಿಗಳು ಪ್ರದೇಶವನ್ನು ಸುರಕ್ಷಿತವೆಂದು ಘೋಷಿಸುವವರೆಗೆ ಜನರು ಬಾಗಿಲುಗಳನ್ನು ಲಾಕ್ ಮಾಡಿ, ಮೊಬೈಲ್ ಫೋನ್‌ಗಳನ್ನು ಸೈಲೆಂಟ್ ಮೋಡ್‌ನಲ್ಲಿರಿಸಿ ಅಡಗಿ ಕುಳಿತು ಅಪಾಯದಿಂದ



ಬಂದೂಕುಧಾರಿ ಯುವಕ ಗುಂಡಿನ ದಾಳಿ ನಡೆಸಿದ ಸ್ಥಳ

ಪಾರಾದರು. ಬ್ರೌನ್ ವಿಶ್ವವಿದ್ಯಾಲಯದಲ್ಲಿ ಅಂತಿಮ ಪರೀಕ್ಷೆ ವೇಳೆ ಗುಂಡಿನ ದಾಳಿ ನಡೆದಿದೆ. ರೋಡ್ ಐಲೆಂಡ್ ಪ್ರಾವಿಡೆನ್ಸ್‌ನ ಏಳು ಅಂತಸ್ತುಗಳ ಬರಸ್ ಮತ್ತು ಹೋಲಿ ಎಂಬ ಕಟ್ಟಡಗಳ ಬಳಿ ಗುಂಡಿನ ದಾಳಿ ನಡೆದಿದೆ. ಈ ಕಟ್ಟಡದಲ್ಲಿ ಪ್ರಯೋಗಾಲಯಗಳು ಮತ್ತು ಹಲವು ತರಗತಿ ಕೊಠಡಿಗಳು ಮತ್ತು ಕಚೇರಿಗಳು ಸೇರಿದಂತೆ 100ಕ್ಕೂ ಹೆಚ್ಚು ಕೊಠಡಿಗಳಿವೆ.

ಬ್ರೌನ್ ವಿವಿ ಆವರಣದಲ್ಲಿ ನಿಂತಿರುವ ಶಂಕಿತ

ಶಂಕಿತನ ಬಂಧನ: ಟ್ರಂಪ್

ರೋಡ್ ಐಲೆಂಡ್‌ನ ಬ್ರೌನ್ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ ಶೂಟೌಟ್ ಘಟನೆಗೆ ಆಘಾತ ವ್ಯಕ್ತಪಡಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಕಪ್ಪು ಬಟ್ಟೆ ಧರಿಸಿರುವ ಬಂದೂಕುಧಾರಿಯನ್ನು ಪೊಲೀಸರು ಹುಡುಕಿ ತಮ್ಮ ವಶಕ್ಕೆ ಪಡೆದಿದ್ದಾರೆ. ಶಂಕಿತನ ವಿಚಾರಣೆ ನಡೆಸಲಾಗುತ್ತಿದೆ. ಶೂಟೌಟ್‌ಗೆ ಕಾರಣ ಏನೆಂದು ಸದ್ಯದಲ್ಲೇ ತಿಳಿದುಬರಲಿದೆ ಎಂದು ಹೇಳಿದ್ದಾರೆ.

ಭಾರತದ ಪ್ರಭಾವಿ ಮಹಿಳೆ ನಿರ್ಮಲಾ ಸೀತಾರಾಮನ್

ದೆಹಲಿ: ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಭಾರತದ ನಂ.1 ಪ್ರಭಾವಿ ಮಹಿಳೆ ಎಂದು ಗುರುತಿಸಲ್ಪಟ್ಟಿದ್ದಾರೆ. ಫೋರ್ಬ್ಸ್ ಮ್ಯಾಗಜಿನ್ 2025ರ ಪ್ರಭಾವಿ ಸ್ತ್ರೀಯರ ಪಟ್ಟಿ ಬಿಡುಗಡೆ ಮಾಡಿದ್ದು,

ಕರ್ನಾಟಕವನ್ನು ರಾಜ್ಯಸಭೆಯಲ್ಲಿ ಪ್ರತಿನಿಧಿಸುತ್ತಿರುವ ತಮಿಳುನಾಡು ಮೂಲದ ನಿರ್ಮಲಾ ಸೀತಾರಾಮನ್ ಅವರು ದೇಶದ ಮಹಿಳೆಯರಲ್ಲಿ ಅಗ್ರಸ್ಥಾನ ಪಡೆದಿದ್ದಾರೆ. ನಂತರದ ಸ್ಥಾನಗಳಲ್ಲಿ 'ಎಚ್‌ಸಿಎಲ್' ಕಂಪನಿ ಸಿಇಒ ರೋಶನಿ ನಾಡಾರ್, ಬೆಂಗಳೂರಿನ 'ಬಯೋಕಾನ್' ಕಂಪನಿ ಸಂಸ್ಥಾಪಕಿ ಕಿರಣ್ ಮಜುಂದಾರ್ ಇದ್ದಾರೆ. ಜಾಗತಿಕ ಮಟ್ಟದ ಪ್ರಭಾವಿ ಮಹಿಳೆಯರ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿ ಯುರೋಪಿಯನ್ ಕಮಿಷನ್ ಮೊದಲ ಅಧ್ಯಕ್ಷೆ ಉರ್ಸುಲಾ ವಾನ್‌ಡೆರ್ ಲೇನ್ ಇದ್ದಾರೆ. ವಿಶ್ವದ ಪ್ರಭಾವಿ ಸ್ತ್ರೀಯರ ರ್‍ಯಾಂಕಿಂಗ್‌ನಲ್ಲಿ ನಿರ್ಮಲಾ 24ನೇ ಸ್ಥಾನ, ರೋಶನಿ 76, ಮಜುಂದಾರ್ ಶಾ 83ನೇ ಸ್ಥಾನದಲ್ಲಿದ್ದಾರೆ. ಭಾರತದ 2ನೇ ವಿತ್ತ ಸಚಿವೆ, ಸತತ 8 ಬಾರಿ ಬಜೆಟ್ ಮಂಡಿಸಿದ ಖ್ಯಾತಿ, ಜಿಎಸ್‌ಟಿ ಸಮರ್ಪಕ ಜಾರಿ, ಆರ್ಥಿಕ ನೀತಿ ರೂಪಿಸುವುದು, ರಾಷ್ಟ್ರೀಯ ಹಣಕಾಸು ನಿರ್ವಹಣೆ ಮೊದಲಾದ ಕಾರ್ಯಗಳಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದಕ್ಕಾಗಿ ನಿರ್ಮಲಾ ಈ ಹಿರಿಮೆಗೆ ಪಾತ್ರರಾಗಿದ್ದಾರೆ. ರೋಶನಿ ಮತ್ತು ಕಿರಣ್ ಮಜುಂದಾರ್ ಶಾ ಸ್ವ-ಸಾಮರ್ಥ್ಯದಿಂದ ಕಂಪನಿ ಕಟ್ಟಿ ಬೆಳೆಸಿದವರು.

ಕೇರಳದ ಮೊದಲ ಮಹಿಳಾ ಐಪಿಎಸ್ ಅಧಿಕಾರಿ

ತಿರುವನಂತಪುರ ನೂತನ ಮೇಯರ್ ಶ್ರೀಲೇಖಾ?

ತಿರುವನಂತಪುರಂ: ಕೇರಳದ ಮೊಟ್ಟ ಮೊದಲ ಮಹಿಳಾ ಐಪಿಎಸ್ ಅಧಿಕಾರಿ ಎನಿಸಿಕೊಂಡವರು ಆರ್.ಶ್ರೀಲೇಖಾ. 26 ವರ್ಷದ ಯುವತಿ ಶ್ರೀಲೇಖಾ ಐಪಿಎಸ್ ಅಧಿಕಾರಿಯಾಗಬೇಕು ಎಂಬ ಕನಸನ್ನು 1987ರಲ್ಲಿ ನನಸಾಗಿಸಿಕೊಂಡರು. ಆ ಸಾಧನೆ ಮಾಡಿದ ಮೊದಲ ಮಲಯಾಳಿ ಮಹಿಳೆ ಎನಿಸಿಕೊಂಡರು. ಶ್ರೀಲೇಖಾಗೆ 2ನೇ ಮಹಾಯುದ್ಧದಲ್ಲಿ ಹೋರಾಡಿದ್ದ ತಂದೆ ವೇಲಾಯುಧನ್ ನಾಯರ್ ಅವರೇ ಸ್ಫೂರ್ತಿಯಾಗಿದ್ದರು.

ಈ ಶ್ರೀಲೇಖಾ ಮತ್ತೊಮ್ಮೆ ಸುದ್ದಿಯ ಕೇಂದ್ರದಲ್ಲಿದ್ದಾರೆ. ತಿರುವನಂತಪುರಂ ಮಹಾನಗರ ಪಾಲಿಕೆಯಲ್ಲಿ ಇದೇ ಮೊದಲ ಬಾರಿಗೆ ಭಾರತೀಯ ಜನತಾ ಪಕ್ಷ(ಬಿಜೆಪಿ) ಅಧಿಕಾರ ಹಿಡಿಯಲಿದ್ದು, ಬಿಜೆಪಿಯಿಂದ ಮೊದಲ ಮೇಯರ್ ಆಗುವ ಅವಕಾಶ ಶ್ರೀಲೇಖಾ ಅವರಿಗೆ ಸಿಗುವ ಸಾಧ್ಯತೆ ಇದೆ. ತಿರುವನಂತಪುರಂ ಸರಕಾರಿ ಶಾಲೆ-ಕಾಲೇಜಿನಲ್ಲಿ ಓದಿ ಮೊದಲಿಗೆ ಕಾಲೇಜು ಉಪನ್ಯಾಸಕಿ, ಬಳಿಕ ರಿಸರ್ವ್ ಬ್ಯಾಂಕ್ ಅಧಿಕಾರಿ, ಬರಹಗಾರ್ತಿಯೂ ಆಗಿ ಗುರುತಿಸಿಕೊಂಡು, ಆ ಬಳಿಕ ಐಪಿಎಸ್ ಅಧಿಕಾರಿಯಾದ ಶ್ರೀಲೇಖಾ, ಅಗ್ನಿಶಾಮಕ ವಿಭಾಗದ ಡಿಜಿಪಿಯಾಗಿ ನಿವೃತ್ತರಾದ ಬಳಿಕ ರಾಜಕೀಯ ಸೇರಿ, ತಿರುವನಂತಪುರಂನ ಸಸ್ತಮಂಗಲಂ ವಾರ್ಡ್‌ನಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಗೆದ್ದು ಈಗ ಮೇಯರ್ ಕುರ್ಚಿಗೆ ಹತ್ತಿರವಾಗಿದ್ದಾರೆ.

ಕೆಂಪು ಬದಲು ಕೇಸರಿ ಧ್ವಜ

ಬಿಜೆಪಿ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್ ನೇತೃತ್ವದ 'ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ'(ಎನ್‌ಡಿಎ) ತಿರುವನಂತಪುರಂ ಮಹಾನಗರ ಪಾಲಿಕೆಯ 101 ಸ್ಥಾನಗಳಲ್ಲಿ 50ರಲ್ಲಿ ಜಯಭೇರಿ ಬಾರಿಸಿದೆ. 45 ವರ್ಷಗಳಿಂದ ಎಡಪಕ್ಷಗಳ ಒಕ್ಕೂಟ 'ಎಲ್‌ಡಿಎಫ್' ಹಿಡಿತದಲ್ಲೇ ಇದ್ದ ತಿರುವನಂತಪುರಂ ಮಹಾನಗರ ಪಾಲಿಕೆಯನ್ನು ಬಿಜೆಪಿ ತನ್ನ ವಶಕ್ಕೆ ತೆಗೆದುಕೊಂಡಿದೆ. ಕೆಂಪು ಬಾವುಟ ಹಾರಾಡುವ ಕೇರಳ ರಾಜ್ಯದಲ್ಲಿ ಅದೂ ಎಡಪಕ್ಷಗಳೇ ಪ್ರಬಲವಾಗಿದ್ದ ತಿರುವನಂತಪುರಂನಲ್ಲಿ ಬಿಜೆಪಿ ಗೆದ್ದು ಕೇಸರಿ-ಹಸಿರು ಧ್ವಜ ಹಾರಿಸಿದೆ.

ಪಾಕ್ ಪರ ಬೇಹು, 3 ಕಾಶ್ಮೀರಿ ವ್ಯಕ್ತಿಗಳ ಸೆರೆ

ಗುವಾಹಟಿ: ಪಾಕಿಸ್ತಾನ ಜತೆ ನಂಟು ಹೊಂದಿ ಬೇಹುಗಾರಿಕೆ ನಡೆಸುತ್ತಿದ್ದ ಆರೋಪದಡಿ ಮೂವರು ಕಾಶ್ಮೀರ ಮೂಲದ ಜನರನ್ನು ಅರುಣಾಚಲ ಪ್ರದೇಶದಲ್ಲಿ ಬಂಧಿಸಲಾಗಿದೆ. ಜಮ್ಮು-ಕಾಶ್ಮೀರದ 26

ವರ್ಷದ ಯುವಕನನ್ನು ಅರುಣಾಚಲ ಪ್ರದೇಶದ ಪಶ್ಚಿಮ ಸಿಯಾಂಗ್ ಜಿಲ್ಲೆಯಲ್ಲಿ ಬಂಧಿಸಲಾಗಿದೆ. ಪಾಕ್ ಬೇಹುಗಾರರ ಸರಣಿ ಬಂಧನದಲ್ಲಿ ಈತ ಮೂರನೇ ವ್ಯಕ್ತಿಯಾಗಿದ್ದಾನೆ. ಸಿಯಾಂಗ್ ಜಿಲ್ಲೆಯ ಆಲೋ ಪಟ್ಟಣದಲ್ಲಿದ್ದ ಆರೋಪಿ ಹಿಲಾಲ್ ಅಹ್ಮದ್‌ನನ್ನು ರಾಜ್ಯ ಪೊಲೀಸರು ಶುಕ್ರವಾರ ರಾತ್ರಿ ಬಂಧಿಸಿದ್ದಾರೆ. ಈತ ಪಾಕ್‌ನ ಏಜೆಂಟ್‌ಗಳಿಗೆ ಸೂಕ್ಷ್ಮ ಮಾಹಿತಿಗಳನ್ನು ಹಂಚಿಕೊಂಡಿದ್ದ ಎಂದು ಆರೋಪಿಸಲಾಗಿದೆ. ಸೈನಿಕರ ಚಲನವಲನ ಮಾಹಿತಿ ಕಳುಹಿಸಿಕೊಡುತ್ತಿದ್ದ ಮೊದಲ ಆರೋಪಿ ನಜೀರ್ ಅಹ್ಮದ್ ಮಲಿಕ್‌ನನ್ನು ನ.22ರಂದು ಬಂಧಿಸಲಾಗಿತ್ತು. ಈತ ಕಾಶ್ಮೀರದ ಕುಪ್ವಾರ ಜಿಲ್ಲೆಯ ನಿವಾಸಿ ಎಂದು ತಿಳಿದುಬಂದಿದೆ. 2ನೇ ಆರೋಪಿ, ಕುಪ್ವಾರದ ನಿವಾಸಿ ಸಬೀರ್ ಅಹ್ಮದ್ ಮಿರ್‌ನನ್ನು ಅರುಣಾಚಲದ ರಾಜಧಾನಿ ಇಟಾನಗರದಲ್ಲಿ ಬಂಧಿಸಲಾಗಿದೆ. ಜಮ್ಮು-ಕಾಶ್ಮೀರ ಮೂಲದ ಮೂವರೂ ತಮ್ಮ ಊರಿನಿಂದ 3,000 ಕಿಮೀ ದೂರದ ಅರುಣಾಚಲ ಪ್ರದೇಶಕ್ಕೆ ಬಂದು ನೆಲೆಸಿ ಪಾಕ್ ಪರ ಬೇಹುಗಾರಿಕೆ ನಡೆಸುತ್ತಿದ್ದರು ಎಂಬುದು ತನಿಖೆ ವೇಳೆ ತಿಳಿದುಬಂದಿದೆ.

ಸಮಾಚಾರ ಸಣ್ಣದಲ್ಲ

ಹತ್ಯೆ ಆರೋಪಿಗೆ ಜೀವಾವಧಿ ಶಿಕ್ಷೆ

ಮಂಡ್ಯ: ಕುಡಿಯಲು ಹಣ ಕೇಳಿದ್ದಕ್ಕೆ ಕೋಪಗೊಂಡ ವ್ಯಕ್ತಿಯು ಆತನ ತಲೆ ಇಟ್ಟಿಗೆಯಿಂದ ಹೊಡೆದು ಕೊಲೆ ಮಾಡಿದ ಆರೋಪಿಗೆ ಜೀವಾವಧಿ ಶಿಕ್ಷೆ ಹಾಗೂ ದಂಡ ವಿಧಿಸಿ ನಗರದ 4ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ತೀರ್ಪು ನೀಡಿದೆ. ನಾಗಮಂಗಲ ತಾಲೂಕಿನ ಮುತ್ಸಂದ್ರ ಗ್ರಾಮದ 54 ವರ್ಷದ ಬೀರೇಶ ಶಿಕ್ಷೆಗೊಳಗಾದ ಆರೋಪಿಯಾಗಿದ್ದಾನೆ. ಅದೇ ಗ್ರಾಮದ ಪ್ರಕಾಶ್ ಈತನಿಂದ ಕೊಲೆಯಾದ ವ್ಯಕ್ತಿ. 2021ರ ಜುಲೈ 28ರ ರಾತ್ರಿ 8.30ರಲ್ಲಿ ಪ್ರಕಾಶ್ ಗ್ರಾಮದ ನಡೆದುಕೊಂಡು ಬರುತ್ತಿದ್ದಾಗ ಎದುರಿನಿಂದ ಬರುತ್ತಿದ್ದ ಬೀರೇಶನ ಬಳಿ ಹೋಗಿ ಕುಡಿಯಲು ಹಣ ಕೇಳಿದ್ದಾನೆ. ಆಗ ಬೀರೇಶ ಕೊಡಲು ನಿರಾಕರಿಸಿದ್ದಾನೆ. ಆಗ ಕೋಪಗೊಂಡ ಪ್ರಕಾಶ್ ಅವಾಚ್ಯ ಶಬ್ಧಗಳಿಂದ ನಿಂದಿಸಿದ್ದಾನೆ. ಇದರಿಂದ ಕೋಪಗೊಂಡ ಬೀರೇಶ ಪ್ರಕಾಶನನ್ನು ಹಿಡಿದು ಎಳೆದಾಡಿ ಕೆಳಗೆ ಬೀಳಿಸಿ ಇಟ್ಟಿಗೆಯಿಂದ ತಲೆ ಹಿಂಭಾಗಕ್ಕೆ ಹೊಡೆದಿದ್ದಾನೆ. ಆಗ ಗ್ರಾಮಸ್ಥರು ಸ್ಥಳಕ್ಕೆ ಬಂದಾಗ ಆರೋಪಿ ಬೀರೇಶ ಓಡಿ ಹೋಗಿದ್ದಾನೆ. ಕೂಡಲೇ ಗಾಯಗೊಂಡ ಪ್ರಕಾಶನನ್ನು ಬಿ.ಜಿ.ನಗರದ ಎ.ಸಿ.ಗಿರಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದನು. ಆರೋಪಿ ಬೀರೇಶನ ವಿರುದ್ಧ ನಾಗಮಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ದರೋಡೆ ಪ್ರಕರಣ: ಆರೋಪಿಗೆ ಜೈಲು ಶಿಕ್ಷೆ

ಮಂಡ್ಯ: ಅಪ್ರಾಪ್ತ ಬಾಲಕಿಯನ್ನು ಎದುರಿಸಿ ಕಿವಿಯೋಲೆ ದರೋಡೆ ಮಾಡಿದ್ದ ಆರೋಪಿಗೆ ಏಳು ವರ್ಷ ಕಠಿಣ ಶಿಕ್ಷೆ ಹಾಗೂ ದಂಡ ವಿಧಿಸಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ತೀರ್ಪು ನೀಡಿದೆ. ಸಂಪತ್ತುಮಾರ್ ಶಿಕ್ಷೆಗೊಳಗಾದ ಆಪಾದಿತನಾಗಿದ್ದಾನೆ. 2016ರಲ್ಲಿ ನಗರದ ಸರ್‌ಎಂವಿ ಕ್ರೀಡಾಂಗಣದ ಹಿಂಭಾಗದ ರಸ್ತೆಯಲ್ಲಿ ಅಪ್ರಾಪ್ತ ಬಾಲಕಿ ನಡೆದು ಕೊಂಡು ಹೋಗುತ್ತಿದ್ದಾರೆ. ಆರೋಪಿ ತನ್ನ ಬೈಕ್ನಲ್ಲಿ ಹಿಂದಿನಿಂದ ಹೋಗಿ ನನ್ನ ತಂಗಿಗೆ ಆಕ್ಸಿಡೆಂಟ್ ಆಗಿದ್ದು, ಅವಳ ಗೇರ್‌ಸೈಕಲ್ ಅಲ್ಲಿಯೇ ಬಿದ್ದಿದೆ. ಅದನ್ನು ನಿನಗೆ ಕೊಡುತ್ತೇನೆ ಎಂದು ತಿಳಿಸಿದ್ದಾನೆ. ಆಗ ಬಾಲಕಿ ನಾನು ಬರುವುದಿಲ್ಲ ಎಂದಾಗ ಆರೋಪಿ ಚಾಕು ತೋರಿಸಿ ಎದುರಿಸಿ ತನ್ನ ಬೈಕ್ಗೆ ಹತ್ತಿಸಿಕೊಂಡು ತಾಲೂಕಿನ ಗೋಪಾಲಪುರ ಎಚ್.ಕೋಡಿಹಳ್ಳಿ ಗ್ರಾಮಗಳ ಮಧ್ಯೆ ಇರುವ ಗಾಡಿ ಜಾಡು ರಸ್ತೆಯಲ್ಲಿ ನಿಲ್ಲಿಸಿ ಕಿವಿಯಲ್ಲಿದ್ದ 2 ಗ್ರಾಂ ತೂಕದ ಓಲೆಗಳನ್ನು ಕಿತ್ತುಕೊಂಡು ಅಲ್ಲಿಯೇ ಬಿಟ್ಟು ಹೋಗಿದ್ದನು. ಆತನ ವಿರುದ್ಧ ನಗರದ ಪೂರ್ವ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.

ಎಚ್‌ಡಿಕೆಯಿಂದ ಮೈಸೂರು ಪ್ರವಾಸ

ಮಂಡ್ಯ: ಕೇಂದ್ರದ ಉಕ್ಕು ಹಾಗೂ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಡಿಸೆಂಬರ್ 166ರಂದು 66ನೇ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿದ್ದು, ಈ ಹಿನ್ನಲೆಯಲ್ಲಿ ಸ್ವಕ್ಷೇತ್ರ ಮಂಡ್ಯ ಮತ್ತು ಮೈಸೂರು ಜಿಲ್ಲೆಯ ಪ್ರವಾಸ ಹಮ್ಮಿಕೊಂಡಿದ್ದಾರೆ. ಅಂದು ಬೆಳಿಗ್ಗೆ 8 ಗಂಟೆಗೆ ಮದ್ದೂರಿಗೆ ಅಗಮಿಸಲಿರುವ ಅವರು ನಗರದ ಟಿ.ಬಿ.ವೃತ್ತದಲ್ಲಿ ಕಾರ್ಯಕರ್ತರಿಂದ ಅಭಿನಂದನೆ ಸ್ವೀಕರಿಸಲಿದ್ದಾರೆ. ಬಳಿಕ 8.30ಕ್ಕೆ ಮಂಡ್ಯ ನಗರದ ಜಯಚಾಮರಾಜೇಂದ್ರ ಒಡೆಯರ್ (ಸಂಜಯ) ವೃತ್ತದಲ್ಲಿ ಕಾರ್ಯಕರ್ತರಿಂದ ಅಭಿನಂದನೆ ಮತ್ತು ಬೆಳಿಗ್ಗೆ 9ಗಂಟೆಗೆ ಶ್ರೀರಂಗಪಟ್ಟಣದ ಬಸ್ ನಿಲ್ದಾಣದ ಬಳಿ ಅಭಿನಂದೆ ಸ್ವೀಕರಿಸಲಿದ್ದಾರೆ. ಇಷ್ಟು ಕಡೆಗಳಲ್ಲಿ ಜೆಡಿಎಸ್ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಪಕ್ಷದ ಜಿಲ್ಲಾಧ್ಯಕ್ಷ ಡಿ.ರಮೇಶ್ ಮನವಿ ಮಾಡಿದ್ದಾರೆ. ಬಳಿಕ ಹೆಚ್ಚಿಕ್ಕೆ 10 ಗಂಟೆಗೆ ಮೈಸೂರಿನ ಚಾಮುಂಡಿಬೆಟ್ಟಕ್ಕೆ ಆಗಮಿಸಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಲಿದ್ದಾರೆ. ಬಳಿಕ ಮಧ್ಯಾಹ್ನ 3.30ಕ್ಕೆ ಮತ್ತೆ ಮಂಡ್ಯ ಜಿಲ್ಲೆಗೆ ಆಗಮಿಸಲಿರುವ ಅವರು, ಮಳವಳ್ಳಿಯಲ್ಲಿ ರಾಷ್ಟ್ರಪತಿ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

ಅನುದಾನ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಕೆ

ಮದ್ದೂರು: ನಗರಸಭೆ ಅಭಿವೃದ್ಧಿಗೆ ಹೈಟೆಕ್ ಯೋಜನೆ ಸಿದ್ಧಪಡಿಸಿಕೊಂಡಿದ್ದು ಅದರಂತೆ ಸಮಗ್ರ ಅಭಿವೃದ್ಧಿ ಪಡಿಸಲಾಗುವುದು ಎಂದು ಶಾಸಕ ಕೆ.ಎಂ.ಉದಯ ಶನಿವಾರ ತಿಳಿಸಿದರು.

ಮದ್ದೂರು ನಗರಸಭೆ ಆವರಣದಲ್ಲಿ ನಡೆದ 2.20 ಕೋಟಿ ಮೊತ್ತದ ಕಚೇರಿ ನವೀಕರಣ ಹಾಗೂ ಹೆಚ್ಚುವರಿ ಕಟ್ಟಡ ಸೇರಿದಂತೆ ಕಾಂಪೌಂಡ್ ನಿರ್ಮಾಣ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ನಗರಸಭೆ ವ್ಯಾಪ್ತಿಯನ್ನು ಅಭಿವೃದ್ಧಿ ಪಡಿಸಲು ಈಗಾಗಲೇ ಯೋಜನೆಗಳನ್ನು ಸಿದ್ಧಪಡಿಸಲಾಗಿದ್ದು ಅದರಂತೆ ನಗರಸಭೆ ಕಚೇರಿಯ ಪಕ್ಕದ ತೋಟಗಾರಿಕೆ ಇಲಾಖೆ ಜಾಗದಲ್ಲಿ ನೂತನವಾಗಿ ನಗರಸಭೆ ಕಟ್ಟಡ ನಿರ್ಮಾಣಕ್ಕೆ ಈಗಾಗಲೇ ಜಾಗ ಗುರುತಿಸಲಾಗಿದ್ದು ಪೌರಾಡಳಿತ ಸಚಿವರಿಗೆ 10 ಕೋಟಿ ರು. ಅನುದಾನ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

{ಡಿ.ಕೆ.ಶಿವಕುಮಾರ್ } ಡಿಸಿಎಂ

ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ಮತಗಳ್ಳತನ ನಡೆದಿರುವುದು ಸತ್ಯ. ಹೀಗಾಗಿ, ಬಿಜೆಪಿ ಮಾಜಿ ಶಾಸಕ ಗುತ್ತೇದಾರ್‌ಅವರ ವಿರುದ್ಧ ಆರೋಪ ಪಟ್ಟಿ ಸಲ್ಲಿಕೆ ಮಾಡುವ ಮೂಲಕ ಮತಗಳ್ಳತನ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

ಸುಸಜ್ಜಿತ ನಗರ ನಿರ್ಮಾಣ ಕುರಿತು ಚರ್ಚೆ | ಜಿಎಸ್‌ಎಸ್‌ಸಿಎಸ್‌ಆರ್ ವತಿಯಿಂದ ಆಯೋಜನೆ

ಮೈಸೂರಿಗೆ ವೇಗ, ಒತ್ತಡದ ಬೆಳವಣಿಗೆ ಬೇಡ

ಮೈಸೂರು: ಮೈಸೂರು ಅರಸರ ದೂರದೃಷ್ಟಿಯೊಂದಿಗೆ ಶತಮಾನಗಳ ಇತಿಹಾಸ ಮತ್ತು ಐತಿಹಾಸಿ ಹಿನ್ನೆಲೆ ಹೊಂದಿರುವ ಮೈಸೂರು ವಿಶ್ವದೆಲ್ಲೆಡೆ ತನ್ನದೇ ಛಾಪು ಮೂಡಿಸಿದೆ. ಕಲೆ, ಸಂಸ್ಕೃತಿ ಮತ್ತು ಪರಂಪರೆಗಳಿಂದ ಗಮನ ಸೆಳೆದಿರುವ ಸಾಂಸ್ಕೃತಿಕ ನಗರಿಯನ್ನು ಭವಿಷ್ಯದ ಉದ್ದೇಶದೊಂದಿಗೆ ಸುಸಜ್ಜಿತವಾಗಿ ನಿರ್ಮಿಸುವ ಕುರಿತಂತೆ ವಿವಿಧ ಕ್ಷೇತ್ರಗಳ ಪ್ರಮುಖರೊಂದಿಗೆ ಭಾನುವಾರ ಮುಕ್ತ ಚರ್ಚೆ ನಡೆಸಲಾಯಿತು.

ಜಿಎಸ್‌ಎಸ್ ಯೋಗಿಕ್ ಫೌಂಡೇಷನ್ ವತಿಯಿಂದ ಜಿಎಸ್‌ಎಸ್ ಸಿಎಸ್‌ಆರ್‌ವತಿಯಿಂದ '2050ರ ದೃಷ್ಟಿಕೋನದಲ್ಲಿ ಉತ್ತಮ ಮೈಸೂರು ನಿರ್ಮಾಣ' ವಿಷಯ ಕುರಿತು ಕೃಷ್ಣಮೂರ್ತಿಪುರಂ ಬಿಎಸ್‌ಎಸ್ ವಿದ್ಯೋದಯ ಸಂಸ್ಥೆಯ ಸಭಾಂಗಣದಲ್ಲಿ ನಡೆದ ಮೈಸೂರು ಸಿಎಸ್‌ಆರ್ ಕಾನ್ಲೇವ್ ಶೀರ್ಷಿಕೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಪ್ರಮುಖರು ಉತ್ತಮ ಮೈಸೂರಿನ ನಿರ್ಮಾಣಕ್ಕಾಗಿ ತಮ್ಮ ಸಲಹೆ, ಅಭಿಪ್ರಾಯಗಳನ್ನು ಮಂಡಿಸಿದರು.

ತಾನಾಗಿಯೇ ಬೆಳೆಯಬೇಕು:

ಕಾರ್ಯಕ್ರಮ ಉದ್ಘಾಟಿಸಿದ ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡ ಮಾತನಾಡಿ, ಇತ್ತೀಚೆಗೆ ಎಲ್ಲೆಡೆ ವೇಗ, ಗದ್ದಲ ಹಾಗೂ ಅಭಿವೃದ್ಧಿಯ ಹುಚ್ಚು ಹೆಚ್ಚಾಗಿದೆ. ಯಾವುದೇ ನಗರದ ಅಭಿವೃದ್ಧಿ ಜತೆಗೆ ಕ್ರಾಂತಿಯೂ ಆಗಬೇಕು. ಆ ಮೂಲಕವಾಗಿ ಒಂದು ಊರನ್ನು ತಾನಾಗಿಯೇ ಬೆಳೆಯಲು ಬಿಡಬೇಕು, ನಮ್ಮ ಊರು ಹೇಗಿರಬೇಕೆಂದು ಅರಿತು ಅದರ ಬೆಳವಣಿಗೆಗೆ ಬಿಡಬೇಕಿದೆ. ಮೈಸೂರಿಗೆ ತನ್ನದೇ ಆದ ವಿಶೇಷತೆ ಇದೆ. ಭಾರತ ಎಂದಿಗೂ ದುಃಖದಲ್ಲಿನ ಅಂತ್ಯವನ್ನು ಬಯಸದೆ, ಪ್ರತಿ ವಿಷಯದಲ್ಲೂ ಸುಖಾಂತ್ಯ ಬಯಸುತ್ತದೆ. ಈ ನಿಟ್ಟಿನಲ್ಲಿ ಅಭಿವೃದ್ಧಿ ನಮಗೆ ಬೇಕೇ? ಎಂದು ಯೋಚಿಸಬೇಕಿದೆ ಎಂದರು.

ಸಂಸ್ಕೃತಿ, ಹಿನ್ನಲೆ ನಶಿಸದಿರಲಿ:

ಆಧುನಿಕ ಸಮಾಜದಲ್ಲಿ ಒಗ್ಗಟ್ಟು ಇಲ್ಲ, ಬುದ್ಧಿವಂತ ಜನರು ಇರುವೆಡೆ ಒಗ್ಗಟ್ಟು ಸಾಧ್ಯವಿಲ್ಲ. ನನ್ನ ಪ್ರಕಾರ ಪ್ರವಾಸೋದ್ಯಮ ಅಸಹ್ಯಕರವಾಗಿದ್ದು, ಊರು ಇರುವುದು ನಿವಾಸಿಗಳಿಗೆ ಹೊರತು, ಪ್ರವಾಸಿಗರಿಗಾಗಿ ಅಲ್ಲ. ಇಂದು ಪ್ರವಾಸೋದ್ಯಮದಿಂದ ಹಲವು ಊರುಗಳ ಸಂಸ್ಕೃತಿ, ಹಿನ್ನೆಲೆಯೇ ನಶಿಸಿದೆ ಎಂದು ಕಳವಳ ವ್ಯಕ್ತಪಡಿಸಿದ ಅವರು, ನಮ್ಮ ಜೀವನಶೈಲಿಯ ಅಗತ್ಯತೆಗೆ ತಕ್ಕಂತೆ ನಗರದ ಅಭಿವೃದ್ಧಿ ಮಾಡದೆ, ಊರಿಗೆ ನಾವು ಹೊಂದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಮೂಲಸೌಕರ್ಯ ಅಗತ್ಯವಿದೆ:

ತಪೋವನ ಸಂಸ್ಥೆ ಸಂಸ್ಥಾಪಕ ಕೆ. ಶ್ರೀರಾಮ್ ಮಾತನಾಡಿ, ಇತ್ತೀಚೆಗೆ ಎಲ್ಲಾ ಕಡೆಗಳಲ್ಲೂ ಅಭಿವೃದ್ಧಿ, ಮೂಲಸೌರ್ಕಯದ ಚರ್ಚೆಗಳು ನಡೆಯುತ್ತಿದ್ದು, ಈ ನಿಟ್ಟಿನಲ್ಲಿ ಮೈಸೂರಿನ ಅಭಿವೃದ್ಧಿಗೆ ಇಂತಹ ಚರ್ಚೆಗಳ ಅಗತ್ಯವಿದೆ. ಮೈಸೂರು ಸುಂದರ ಹಾಗೂ ಉತ್ತಮವಾಗಿ ನಿರ್ಮಿಸಿರುವ ನಗರವಾಗಿದ್ದು, ಪ್ರವಾಸೋದ್ಯಮ, ರಸ್ತೆಗಳ ಹಾಗೂ ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಇತರೆ ರಾಜ್ಯಗಳಿಗಿಂತ ಹಿಂದುಳಿದಿದೆ. ಮೈಸೂರಿನಲ್ಲಿ ಸಾಕಷ್ಟು ಆಕರ್ಷಕ ಸ್ಥಳವಿದ್ದು, ಈ ನಿಟ್ಟಿನಲ್ಲಿ ಪ್ರವಾಸೋದ್ಯಮಕ್ಕೆ ಮನ್ನಣೆ ನೀಡಬೇಕಾಗಿದೆ. ಇದರಿಂದ ಹೆಚ್ಚಿನ ಉದ್ಯೋಗಗಳ ಸೃಷ್ಟಿಗೂ ಅನುಕೂಲವಾಗಲಿದೆ ಎಂದರು.

ಮೈಸೂರು ಸಿಎಸ್ ಆರ್‌ಕಾನ್ಲೇವ್ ಶೀರ್ಷಿಕೆಯಲ್ಲಿ ನಡೆದ ಕಾರ್ಯಕ್ರಮವನ್ನು ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡ ಸೇರಿದಂತೆ ಇನ್ನಿತರ ಪ್ರಮುಖರು ಉದ್ಘಾಟಿಸಿದರು.

> ವಿಶ್ವವಿದ್ಯಾಲಯಗಳಲ್ಲಿ ಇಂದಿಗೂ ಹಳೆಯ ಪಠ್ಯಗಳೇ ಅಡಗಿದ್ದು, ಹಿಂದಿನ ಬೋಧನಾ ಕ್ರಮವನ್ನೇ ಅನುಸರಿಸಲಾಗುತ್ತಿದೆ. ಇಂದು ನಾವೆಲ್ಲರೂ ಎಐ ನಾಗಾಲೋಟದಲ್ಲಿದ್ದು, ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯ ಮಟ್ಟದಲ್ಲೇ ವಿದ್ಯಾರ್ಥಿಗಳಿಗೆ ಕೌಶಲಾಭಿವೃದ್ಧಿ ಬಗ್ಗೆ ಅರಿವು ಮೂಡಿಸಬೇಕು.
> -ಸಿ.ಕೆ.ಮಹೇಂದ್ರ, ಪತ್ರಕರ್ತ

> ಮೈಸೂರಿಗೆ ಆತ್ಮವಿದ್ದು, ಹೊರಗಿನ ಸೌಂದರ್ಯದ ಜತೆಗೆ ಅದರದ್ದೇ ಆದ ಕಾಂತಿಯಿದೆ. ಇದೆಲ್ಲಾ ತನ್ನಷ್ಟಕ್ಕೆ ತಾನೇ ಆಗಬೇಕಿದ್ದು, ಒತ್ತಾಯದಿಂದ ಆಗಬಾರದು. ವೇಗದ ಹುಚ್ಚು ತಲೆಗೇರಿರುವ ಸಂದರ್ಭದಲ್ಲಿ ನಮ್ಮ ಮಕ್ಕಳಿಗೆ ನಿಧಾನಗತಿಯ ಜೀವನಶೈಲಿ ತಿಳಿಸಬೇಕಿದೆ.
> -ಪ್ರೊ.ಎಂ. ಕೃಷ್ಣೇಗೌಡ, ಖ್ಯಾತ ವಾಗ್ಮಿ

ಎಲ್ಲರ ಒಗ್ಗೂಡುವಿಕೆ ಮುಖ್ಯ

ಉತ್ತಮ ಹಾಗೂ ಶಾಂತಿಯುತ ನಗರದ ನಿರ್ಮಾಣಕ್ಕೆ ಪ್ರತಿಯೊಬ್ಬ ವ್ಯಕ್ತಿಯ ಪ್ರಭಾವ ಅತ್ಯಂತ ಮುಖ್ಯವಾಗಲಿದೆ ಎಂದು ಸಾಮಾಜಿಕ ಪ್ರಭಾವಿ ನಾಯಕ ಡಾ. ಜಾವೇದ್ ಹೇಳಿದರು. ಯಾವುದೇ ಕೆಲಸದಲ್ಲಿ ಕೇವಲ ಒಬ್ಬರಿಗೆ ಹೆಗ್ಗಳಿಕೆ ಸಿಗಬೇಕೆಂಬ ಮನಸ್ಥಿತಿ ಇಲ್ಲದೇ, ಎಲ್ಲರೂ ಒಗ್ಗೂಡಿ ಸಾಗಿದರೆ ಧೀರ್ಘಕಾಲ ಮುನ್ನಡೆಬಹುದು. ಒಂದು ನಗರ, ರಾಜ್ಯ, ದೇಶ ಅಥವಾ ಜಗತ್ತು ಮನುಷ್ಯನ ದೇಹದಂತಿದ್ದು, ಒಂದು ಅಂಗದಲ್ಲಿ ಸಣ್ಣ ಸಮಸ್ಯೆ ಆದರೆ, ಇಡೀ ದೇಹಕ್ಕೆ ಸಮಸ್ಯೆ ಎದುರಾಗಲಿದೆ. ಶಾಂತಿ ಇಲ್ಲದೇ ಸಮಾಜ ಸುಖಮಯವಾಗಿರಲು ಸಾಧ್ಯವಿಲ್ಲ ಹಾಗೂ ಮೈಸೂರಿನ ಚಿತ್ರಣ ಉತ್ತಮವಾಗಿರಬೇಕೆಂಬ ಕಾರಣಕ್ಕೆ ದಶಕಗಳ ಹಿಂದೆ ಆಕ್ಟ್ ಸಂಘಟನೆ ಅನುಷ್ಠಾನಗೊಳಿಸಲಾಯಿತು. ಇದರ ಮೂಲಕ ನಾವೆಲ್ಲರೂ ಜಾತಿ, ಧರ್ಮ,ಸ್ಥಾನಮಾನವನ್ನು ಬದಿಗಿಟ್ಟು ಕೆಲಸ ಮಾಡುತ್ತಾ ಬಂದಿದ್ದೇವೆ ಎಂದು ಹೇಳಿದರು.

> ನಾಲ್ವಡಿಯವರು ಕಟ್ಟಿ ಬೆಳೆಸಿರುವ ಮೈಸೂರನ್ನು ಉಳಿಸಿ, ಬೆಳೆಸುವುದನ್ನು ಪ್ರತಿಯೊಬ್ಬರೂ ಮಾಡಬೇಕು. ಮೈಸೂರು ಯೋಜನಾಬದ್ಧ ನಗರವಾಗಿದ್ದು, ಮೈಸೂರಿನ ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕವಾಗಿದೆ. ಮೈಸೂರನ್ನು ನಿವೃತ್ತರ ಸ್ವರ್ಗ ಎನ್ನುತ್ತಾರೆ. ಆದರೆ ಕೈ ಕೆಸರಾದರೆ ಬಾಯಿ ಮೊಸರು ಎಂಬ ರೀತಿಯಲ್ಲಿ ಎಲ್ಲರೂ ದುಡಿಯಬೇಕು. ಶಿಕ್ಷಣ ಕ್ಷೇತ್ರದಲ್ಲಿ ಎಲ್ಲ ಹಂತದ ಶಿಕ್ಷಣ ಮೈಸೂರಿನಲ್ಲಿ ಲಭ್ಯವಿದೆ. ಆದರೆ ಇಂದು ಸಂಸ್ಕಾರ ಶಿಕ್ಷಣದ ಕಲಿಕೆಯ ಬಗ್ಗೆ ಆದ್ಯತೆ ನೀಡಬೇಕಿದೆ. ಮಕ್ಕಳನ್ನು ಅಂಕಗಳಿಕೆಯ ಯಂತ್ರವನ್ನಾಗಿ ಮಾಡದೆ, ಪ್ರಾಥಮಿಕ ಹಂತದಿಂದಲೇ ಸಂಸ್ಕೃತಿ, ಸಂಸ್ಕಾರ ಕಲಿಸಬೇಕು.
> -ಆರ್. ವಾಸುದೇವಭಟ್, ಉದ್ಯಮಿ

> ಮೈಸೂರಿನ ಅಭಿವೃದ್ಧಿಗೆ ಪೂರಕವೆಂಬಂತೆ ಯೋಜನೆ ರೂಪಿಸಬೇಕಿದೆ. ಊರು ಚೆನ್ನಾಗಿದ್ದರೆ ಮುಂದಿನ 25 ವರ್ಷಗಳು ಉತ್ತಮವಾಗಿ ಬದುಕಲು ಸಾಧ್ಯವಿದೆ. ಊರಿನ ಆರೋಗ್ಯ, ಸ್ವಚ್ಛತೆ, ಉದ್ಯೋಗ ಲಭ್ಯತೆ ದೊರೆಯಬೇಕು. ಈ ನಿಟ್ಟಿನಲ್ಲಿ ಸುಸಜ್ಜಿತವಾದ ನಗರವನ್ನು ಕಟ್ಟುವ ನಿಟ್ಟಿನಲ್ಲಿ ಎಲ್ಲರೂ ಒಗ್ಗೂಡಿ ಹೆಜ್ಜೆ ಹಾಕೋಣ.
> -ಶ್ರೀಹರಿ ದ್ವಾರಕನಾಥ್, ಮುಖ್ಯಸ್ಥರು, ಜಿಎಸ್ ಎಸ್ ಸಮೂಹ ಸಂಸ್ಥೆಗಳು

ಫ್ಲೈ ಓವರ್‌ಉತ್ತರವಲ್ಲ :

ಇತ್ತೀಚೆಗೆ ಮೈಸೂರಿನಲ್ಲಿ ಹೆಚ್ಚುತ್ತಿರುವ ಟ್ರಾಫಿಕ್ ಸಮಸ್ಯೆಗಳಿಗೆ ಫ್ಲೈ ಓವರ್‌ನಿರ್ಮಾಣವೊಂದೇ ಉತ್ತರವಲ್ಲ. ಲಂಡನ್ ಸೇರಿದಂತೆ ಹಲವು ನಗರಗಳಲ್ಲಿ ಇಂದಿಗೂ ಫ್ಲೈ ಓವರ್‌ನಿರ್ಮಿಸಿಲ್ಲ. ಬದಲಾಗಿ ಟ್ರಾಫಿಕ್ ಸಮಸ್ಯೆ ತಪ್ಪಿಸಲು ಪಾರ್ಕ್ ಅಂಡ್ ರೈಡ್ ನಂತಹ ಸೇವೆಗಳನ್ನು ಪ್ರವಾಸಿಗರಿಗೆ ನೀಡಿದರೆ, ಮೈಸೂರಿನಲ್ಲಿ ವಾರಾಂತ್ಯ ಹಾಗೂ ಸಾರ್ವತ್ರಿಕ ರಜಾ ದಿನಗಳಲ್ಲಿ ಹೆಚ್ಚುವ ಪ್ರವಾಸಿಗರಿಂದ ಉಂಟಾಗುತ್ತಿರುವ ಟ್ರಾಫಿಕ್ ಸಮಸ್ಯೆ ಪರಿಹಾರ ದೊರಕಲಿದೆ ಎಂದು ಅಭಿಪ್ರಾಯಪಟ್ಟರು.

ಗ್ರಾಪಂ ಕಚೇರಿ ನಿರ್ಮಿಸಿರುವುದು ಉತ್ತಮ ಬೆಳವಣಿಗೆ

ಮದ್ದೂರು: ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸಬೇಕೆಂಬ ಹಂಬಲ ಪ್ರತಿಯೊಬ್ಬ ಅಭ್ಯರ್ಥಿಗಿದ್ದು ಗೆದ್ದ ಬಳಿಕ ಕಾರ್ಯಕ್ಷೇತ್ರವನ್ನೇ ಮರೆತು ತಮ್ಮ ರಾಜಕೀಯ ಜಂಜಾಟಕಷ್ಟೇ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವ ದಿನಗಳಲ್ಲಿ ಸಾದೊಳಲು ಗ್ರಾ.ಪಂ. ಆಡಳಿತ ಮಂಡಳಿ ರಾಜ್ಯಕ್ಕೆ ಮಾದರಿಯಾದ ಗ್ರಾ.ಪಂ. ಕಚೇರಿಯನ್ನು ನಿರ್ಮಿಸಿರುವುದು ಉತ್ತಮ ಬೆಳವಣಿಗೆಯೆಂದು ಶಾಸಕ ಕೆ.ಎಂ.ಉದಯ ಪ್ರಶಂಸಿದರು.

ತಾಲೂಕಿನ ಸಾದೊಳಲು ಗ್ರಾಮದಲ್ಲಿ ಸುಮಾರು 40 ಲಕ್ಷ ರು. ವೆಚ್ಚದಲ್ಲಿ ನಿರ್ಮಿಸಿರುವ ನೂತನ ಗ್ರಾ.ಪಂ. ಕಚೇರಿ, ಸಭಾಂಗಣ ಹಾಗೂ ಎನ್.ಆರ್.ಎಲ್.ಎಂ. ಶೆಡ್‌ನ್ನು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಚುನಾವಣೆಯಲ್ಲಿ ಗೆದ್ದ ಬಳಿಕ ಸ್ಥಳೀಯ ಜನರ ಆಶೋತ್ತರಗಳಿಗೆ ಸ್ಪಂಧಿಸುವ ಜತೆಗೆ ತಮ್ಮ ಕಾರ್ಯ ಕ್ಷೇತ್ರದಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಹಲವು ಕುರುಹುಗಳನ್ನು ಬಿಟ್ಟುಹೋಗುವ ಮೂಲಕ ಮುಂದಿನ ಪೀಳಿಗೆಗೂ ಪರಿಚಯಿಸುವಂತಹ ಕೆಲಸವಾಗಬೇಕಿದ್ದು ಸಾದೊಳಲು ಜಿಲ್ಲೆ ಮತ್ತು ರಾಜ್ಯಕ್ಕೆ ಮಾದರಿಯಾದಂತಹ ಗ್ರಾ.ಪಂ. ಕಚೇರಿಯನ್ನು ನಿರ್ಮಿಸಿರುವುದು ಸಂತಸದ ವಿಚಾರವೆಂದರು.

ಕೆಲ ಚುನಾಯಿತ ಪ್ರತಿನಿಧಿಗಳು ಕೇವಲ ಕಾಲಹರಣ ಮತ್ತು ಉದ್ದೇಶ ಪೂರ್ವಕವಾಗಿ ತಮ್ಮ ಅಧಿಕಾರದ ಅವಧಿಯನ್ನು ಪೂರ್ಣಗೊಳಿಸಲು ಮುಂದಾಗುತ್ತಾರೆಯೇ ಹೊರತು ಪೂರ್ಣ ಪ್ರಮಾಣದಲ್ಲಿ ತೊಡಗಿಕೊಂಡಾಗ ಮಾತ್ರ ಉನ್ನತ ಮಟ್ಟದ ಸಾಧನೆ ಮಾಡಲು ಸಹಕಾರಿಯಾಗುತ್ತದೆಂದರು.

ಜನಪ್ರತಿನಿಧಿಗಳಿಗೆ ಇಚ್ಛಾಶಕ್ತಿ, ಒಗ್ಗಟ್ಟು, ಕಾರ್ಯಕ್ಷೇತ್ರದಲ್ಲಿ ಹಲವು ಕೆಲಸಗಳನ್ನು ಮಾಡುವ ಹಂಬಲಗಳು ಇದ್ದಲ್ಲಿ ಇಂತಹ ಹಲವಾರು ಕಾಮಗಾರಿಗಳನ್ನು ಮಾಡುವುದರ ಮೂಲಕ ಮಾದರಿ ಗ್ರಾಮಗಳನ್ನಾಗಿಸಬಹುದಾಗಿದ್ದು ಜತೆಗೆ ಸರಕಾರದ ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಂಡು ಮೂಲ ಸೌಲಭ್ಯಗಳಿಗೆ ಒತ್ತು ನೀಡಿರುವ ಆಡಳಿತ ಮಂಡಳಿಯ ಕಾರ್ಯ ಉತ್ತಮವಾದುದ್ದೆಂದರು.

ಗಮನ ಸೆಳೆಯುತ್ತಿರುವ ಗ್ರಾ.ಪಂ. ಕಚೇರಿ:

ರಾಜ್ಯದಲ್ಲೇ ಮೊಟ್ಟ ಮೊದಲ ಬಾರಿಗೆ ಸಾದೊಳಲು ಗ್ರಾಮದಲ್ಲಿ ರಾಷ್ಟ್ರ ಲಾಂಛನವನ್ನು ನಿರ್ಮಾಣ ಮಾಡುವುದರ ಮೂಲಕ ನೋಡುಗರ ಗಮನ ಸೆಳೆಯುತ್ತಿರುವ ಜತೆಗೆ ಬೆಂಗಳೂರಿನಲ್ಲಿರುವ ವಿಧಾನಸೌಧದ ಮಾದರಿಯಲ್ಲೇ ರಾಷ್ಟ್ರ ಲಾಂಛನವನ್ನು ನಿರ್ಮಿಸಿ ಇತರರಿಗೆ ಮಾದರಿಯಾಗಿರುವ ಬಗ್ಗೆ ಶಾಸಕರು ಪ್ರಶಂಸಿದರು.

ಸಾದೊಳಲು ಗ್ರಾ.ಪಂ. ಕಚೇರಿಯಲ್ಲಿ ಹೈಟೆಕ್ ಸಭಾಂಗಣ, ಅಧ್ಯಕ್ಷರ ಮತ್ತು ಪಿ.ಡಿ.ಒ ಪ್ರತ್ಯೇಕ ಕೊಠಡಿ, ಗಣಕೀಕೃತ ಯಂತ್ರ ಇನ್ನಿತರ ಹಲವು ಸೌಲಭ್ಯಗಳುಳ್ಳ ಕಚೇರಿಯನ್ನು ನಿರ್ಮಿಸಿರುವುದು ಸಾರ್ವಜನಿಕರ ಪ್ರಶಂಸೆಗೆ ಕಾರಣವಾಗಿದೆ.

ಈ ವೇಳೆ ಗ್ರಾ.ಪಂ. ಅಧ್ಯಕ್ಷ ಎಸ್.ಆನಂದ್, ಉಪಾಧ್ಯಕ್ಷ ಚನ್ನಾಜಮ್ಮ, ಸದಸ್ಯರಾದ ಚಂದ್ರಪ್ರಭಾ, ಸಿ.ರಾಜು, ಕುಮಾರಿ, ಬಿ.ಜೆ.ಪುಟ್ಟಸ್ವಾಮಿ, ಶೋಭ, ಪದ್ಮಮ್ಮ, ಬಿ.ಎಸ್.ಪ್ರಕಾಶ್, ಎಸ್.ಬಿ.ನಂದಿನಿ, ರಾಜೇಶ್ವರಿ, ಕೆ.ಎಂ.ಸಿದ್ದಪ್ಪಗೌಡ, ಕೆ.ಎಸ್.ಸತೀಶ್, ಕೆ.ಎಸ್.ಉಮೇಶ್, ಶಾಂತಮ್ಮ, ಪಿ.ಡಿ.ಒ ಹೇಮಾ, ಕಾರ್ಯದರ್ಶಿ ಶಿವಕುಮಾರ್‌ಹಾಗೂ ಸ್ಥಳೀಯ ಗ್ರಾಮಸ್ಥರು ಹಾಜರಿದ್ದರು.

ಸಾದೊಳಲು ಗ್ರಾಮದಲ್ಲಿ ನಿರ್ಮಿಸಿರುವ ಗ್ರಾ.ಪಂ. ಕಚೇರಿಯನ್ನು ಶಾಸಕ ಕೆ.ಎಂ.ಉದಯ ಲೋಕಾರ್ಪಣೆಗೊಳಿಸಿದರು.

ರೋಟರಿ ಸಂಸ್ಥೆಯಿಂದ ನಿರಂತರ ಸಮಾಜಮುಖಿ ಸೇವೆ

ಚಾಮರಾಜನಗರ: ನಗರದ ಭ್ರಮರಾಂಭ ಬಡಾವಣೆಯಲ್ಲಿರುವ ಚಾಮರಾಜೇಶ್ವರ ನಗರದ ವಸತಿ ರಹಿತ ನಿರಾಶ್ರಿತರ ಅಶ್ರಮದ ನಿರಾಶ್ರಿತರಿಗೆ ರೋಟರಿ ಸಂಸ್ಥೆ ವತಿಯಿಂದ ಬೆಚ್ಚನೆಯ ಹೊದಿಕೆ ವಿತರಿಸಲಾಯಿತು.

ಈ ಸಂದರ್ಭದಲ್ಲಿರೋಟರಿ ಸಂಸ್ಥೆ ಕಾಳನಹುಂಡಿ ಗುರುಸ್ವಾಮಿ ಮಾತನಾಡಿ, ರೋಟರಿ ಸಂಸ್ಥೆಯು ನಿರಂತರವಾಗಿ ಸಮಾಜಮುಖಿ ಸೇವೆ ಮಾಡುತ್ತಿದ್ದು, ಮೈಕೊರೆಯುವ ಚಳಿಗಾಲ ಇರುವ ಕಾರಣ ಬೆಚ್ಚನೆಯ ಹೊದಿಕೆ ಬಹಳ ಅವಶ್ಯಕವಾಗಿದೆ. ಹೀಗಾಗಿ ನಿರ್ಗತಿಕರಿಗೆ ನಮ್ಮ ರೋಟರಿ ಸಂಸ್ಥೆ ವತಿಯಿಂದ ಹೊದಿಕೆ ವಿತರಿಸಲಾಗಿದೆ ಎಂದರು.

ರೋಟರಿ ಸಂಸ್ಥೆ ಅಧ್ಯಕ್ಷ ಕಾಗಲವಾಡಿ ಚಂದ್ರು ಮಾತನಾಡಿ, ನಮ್ಮ ರೋಟರಿ ಸಂಸ್ಥೆಯು ನಿರಂತರವಾಗಿ ಸಮಾಜಮುಖಿ ಕಾರ್ಯಗಳನ್ನು ಮಾಡಿಕೊಂಡು ಬರುತ್ತಿದ್ದು, ಕಳೆದ ಒಂದು ವಾರದಿಂದ ಮೈಕೊರೆಯುವ ಚಳಿಯಿದ್ದು ರಸ್ತೆಬದಿ, ದೇವಸ್ಥಾನ ಮುಂಭಾಗ, ಬಸ್ ನಿಲ್ದಾಣ ಸೇರಿದಂತೆ ಇತರ ಕಡೆಗಳಲ್ಲಿ ಮಲಗು ನಿರ್ಗತಿಕರ ಆರೋಗ್ಯ ದೃಷ್ಟಿಯಿಂದ ಬೆಚ್ಚನೆಯ ಹೊದಿಕೆಯನ್ನು ವಿತರಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ರೋಟರಿ ಸಂಸ್ಥೆ ಕಾರ್ಯದರ್ಶಿ ಕೆಂಪನಪುರ ಸಿದ್ದರಾಜು, ಅಂಕಶೆಟ್ಟಿ, ಅಬ್ದುಲ್ ಅಜೀಜ್ ದೀನಾ, ಸಿದ್ದಮಲ್ಲಪ್ಪ, ಯೋಗರಾಜ್ ಕಮಲ್ ರಾಜ್ .ಪ್ರಕಾಶ್.ನಾಗರಾಜ್ ಚಂದ್ರಪ್ರಭ ಜೈನ್. ಎಸ್ ಆರ್‌ಎಸ್ ಶ್ರೀನಿವಾಸ್. ನೇಮಿರಾಜ್, ಸಿದ್ದ ಮಲ್ಲಪ್ಪ. ಮಹಾದೇವಸ್ವಾಮಿ ಇತರರು ಹಾಜರಿದ್ದರು.

ರೋಟರಿ ಸಂಸ್ಥೆ ವತಿಯಿಂದ ವಸತಿ ರಹಿತ ನಿರಾಶ್ರಿತರಿಗೆ ಬೆಚ್ಚನೆಯ ಹೊದಿಕೆ ವಿತರಿಸಲಾಯಿತು.

ಗೀತಾ ಮೈತ್ರಿ ಮಿಲನ ಕರ್ನಾಟಕ 2.0 ಕಾರ್ಯಕ್ರಮ

ಮಕ್ಕಳ ಅದ್ಭುತ ಸ್ಮರಣ ಶಕ್ತಿಗೆ ಶ್ರೀಗಳ ಮೆಚ್ಚುಗೆ

ಮೈಸೂರು: ಅಮೆರಿಕ ಸೇರಿದಂತೆ ವಿದೇಶಗಳಲ್ಲಿ ನಡೆಯುತ್ತಿರುವ ''ಗೀತಾ ಟ್ಯಾಲೆಂಟ್ ಶೋ'' ಮೂಲಕ ಭಗವದ್ಗೀತೆಯು ಮನೆಮನಗಳನ್ನು ತಲುಪುತ್ತಿದೆ ಎಂದು ಮೈಸೂರಿನ ಗಣಪತಿ ಆಶ್ರಮದ ಸಚ್ಚಿದಾನಂದ ಶ್ರೀಗಳು ತಿಳಿಸಿದರು.

ಆಶ್ರಮದ ನಾದಮಂಟಪದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಗೀತಾ ಮೈತ್ರಿ ಮಿಲನ ಕರ್ನಾಟಕ 2.0 ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು.

ಹತ್ತು ವರ್ಷಗಳಿಂದ ಅಮೆರಿಕದಲ್ಲಿ ಈ ಗೀತಾ ಸ್ಪರ್ಧೆಯನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಾಗುತ್ತಿದೆ. ಕಾರ್ಯಕ್ರಮವನ್ನು ವೀಕ್ಷಿಸಲು ಜನರು ಕಿಕ್ಕಿರಿದು ತುಂಬಿರುತ್ತಾರೆ. ಅಲ್ಲಿನ ಮಕ್ಕಳು ಭಗವದ್ಗೀತೆಯನ್ನು ಕಂಠಪಾಠ ಮಾಡಿರುವ ರೀತಿ ಅದ್ಭುತವಾದುದು. ಶ್ಲೋಕದ ಮಧ್ಯದಿಂದಾಗಲಿ, ಮೇಲಿನಿಂದಾಗಲಿ ಅಥವಾ ಸಂಖ್ಯೆಗಳ ಆಧಾರದ ಮೇಲೆ ಎಷ್ಟೇ ಕಠಿಣವಾಗಿ ಪ್ರಶ್ನಿಸಿದರೂ ಮಕ್ಕಳು ಲೀಲಾಜಾಲವಾಗಿ ಉತ್ತರಿಸುತ್ತಾರೆ ಎಂದು ಶ್ರೀಗಳು ಬಣ್ಣಿಸಿದರು.

ವಿಶ್ವಾದ್ಯಂತ ಗೀತಾ ಪಾರಾಯಣ:

ಕೇವಲ ಅಮೆರಿಕವಷ್ಟೇ ಅಲ್ಲದೆ ಯುರೋಪ್, ದುಬೈ, ಕೆನಡಾ ಮತ್ತು ವಿಶೇಷವಾಗಿ ವೆಸ್ಟ್ ಇಂಡೀಸ್ನ ಜನರು ಕೂಡ ಇದರಲ್ಲಿ ಅತ್ಯಂತ ಶ್ರದ್ಧೆಯಿಂದ ಪಾಲ್ಗೊಳ್ಳುತ್ತಿದ್ದಾರೆ. ಅವರ ಇಂಗ್ಲಿಷ್ ಭಾಷಾ ಶೈಲಿ ನಮಗೆ ಅರ್ಥವಾಗದಿದ್ದರೂ, ಅವರು ಭಗವದ್ಗೀತೆಯನ್ನು ಕಲಿಯುವ ಪರಿ ಮತ್ತು ಭಕ್ತಿ ಮೆಚ್ಚುವಂತದ್ದು. ಗೋವಿಂದ್ ಗಿರಿ ಜೀ ಅವರ ಪರಿವಾರದ ಶ್ರದ್ಧೆ ಈ ಕಾರ್ಯಕ್ರಮದ ಯಶಸ್ಸಿಗೆ ಕಾರಣವಾಗಿದೆ ಎಂದು ಸ್ಮರಿಸಿದರು.

ಮಕ್ಕಳ ಭಕ್ತಿ ಮತ್ತು ಸವಾಲು:

ಸಾಮಾನ್ಯವಾಗಿ ಎಲೆಕ್ಟ್ರಾನಿಕ್ ಉಪಕರಣಗಳಲ್ಲಿ ಮುಳುಗಿರುವ ಅಮೆರಿಕದ ಮಕ್ಕಳು, ಸ್ವಾಮೀಜಿಯವರ ಮೇಲಿನ ಪ್ರೀತಿಯಿಂದ ಗೀತೆಯನ್ನು ಕಲಿಯುತ್ತಿದ್ದಾರೆ. ನಾನು ಚಾಕೊಲೇಟ್ ಕೊಡುವುದಿಲ್ಲ, ಭಾಷೆಯೂ ಬೇರೆ. ಆದರೂ ಮಕ್ಕಳು ನನ್ನ ಹಿಂದೆ ಪ್ರೀತಿಯಿಂದ ಓಡಿ ಬರುತ್ತಾರೆ ಎಂದು ಹೇಳಿದರು.

ಒಮ್ಮೆ ಅಮೆರಿಕದ ಸ್ವಾತಂತ್ರ್ಯ ದಿನವಾದ ಜುಲೈ 4 ರಂದು, ಭಕ್ತರು ಶ್ರೀಗಳನ್ನು ಒಂದು ದಿನ ಹೆಚ್ಚು ಉಳಿದುಕೊಳ್ಳಲು ಕೇಳಿಕೊಂಡರು. ಅದಕ್ಕೆ ಪ್ರತಿಯಾಗಿ ಶ್ರೀಗಳು, 'ನಾನು ಉಳಿದುಕೊಳ್ಳುತ್ತೇನೆ, ಆದರೆ ನೀವು ಭಗವದ್ಗೀತೆಯನ್ನು ಕಂಠಪಾಠ ಮಾಡಬೇಕು,' ಎಂಬ ಷರತ್ತು ವಿಧಿಸಿದರು. ಆಶ್ಚರ್ಯವೆಂಬಂತೆ, ಮುಂದಿನ ವರ್ಷ ಅದೇ ದಿನಾಂಕದಂದು ಶ್ರೀಗಳು ಹೋದಾಗ, 18 ಮಕ್ಕಳು ಕೇವಲ 6 ತಿಂಗಳಲ್ಲಿ ಸಂಪೂರ್ಣ ಗೀತೆಯನ್ನು ಕಂಠಪಾಠ ಮಾಡಿ ಒಪ್ಪಿಸಿದರು.

ಮನೆ ಮನೆಯಲ್ಲಿ ಗೀತೆ:

ಆರಂಭದಲ್ಲಿ ಚಿಕ್ಕದಾಗಿ ಶುರುವಾದ ಈ ಅಭಿಯಾನ ಈಗ ಬೃಹದಾಕಾರವಾಗಿ ಬೆಳೆದಿದೆ. ಈಗ ದೊಡ್ಡ ಕ್ರೀಡಾಂಗಣಗಳಲ್ಲಿ 40 ರಿಂದ 50 ಸಾವಿರ ಜನರು ಸೇರಿ ಗೀತಾ ಪಾರಾಯಣವನ್ನು ಆಲಿಸುತ್ತಾರೆ. ಈ ಮೂಲಕ ವಿದೇಶದಲ್ಲೂ 'ಮನೆ ಮನೆಯಲ್ಲಿ ಗೀತೆ' (ಘರ್‌ಘರ್‌ಗೀತಾ) ಎಂಬ ಸಂಕಲ್ಪ ಸಾಕಾರವಾಗುತ್ತಿದೆ ಎಂದು ಶ್ರೀಗಳು ಸಂತಸ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಅಂತಾರಾಷ್ಟ್ರೀಯ ಕಾರ್ಯಾಧ್ಯಕ್ಷರು, ಗೀತಾ ಪರಿವಾರ ಮತ್ತು ಕಾರ್ಯಕ್ರಮ ನಿರ್ದೇಶಕ ಡಾ. ಆಶು ಜೀ ಗೋಯಲ್, ರಾಷ್ಟ್ರೀಯ ಉಪಾಧ್ಯಕ್ಷರ ಮತ್ತು ದಕ್ಷಿಣಾಂಚಲ ಪ್ರಮುಖ್ ಗೀತಾ ಪರಿವಾರ ಹರಿ ನಾರಾಯಣ್ ಜೀ ವ್ಯಾಸ್ ಮತ್ತಿತರರಿದ್ದರು.

ಗೀತಾ ಮೈತ್ರಿ ಮಿಲನ ಕರ್ನಾಟಕ 2.0 ಕಾರ್ಯಕ್ರಮದಲ್ಲಿ ಸಚ್ಚಿದಾನಂದ ಶ್ರೀಗಳು ಆಶೀರ್ವಚನ ನೀಡಿದರು.

ಪಟ್ಟಣದ ಅಭಿವೃದ್ಧಿಗೆ ಪಣ: ಶಾಸಕ ಕೆ.ಎಂ.ಉದಯ

ಮದ್ದೂರು: ಪಟ್ಟಣವನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸಿ ಶಾಶ್ವತ ಯೋಜನೆಗಳನ್ನು ರೂಪಿಸಿ ಮಾದರಿ ಪಟ್ಟಣವನ್ನಾಗಿಸಬೇಕೆಂಬ ಪಣ ತೊಟ್ಟಿದ್ದು ಜತೆಗೆ ಪ್ರಮುಖ ವೃತ್ತಗಳಲ್ಲಿ ಮಹನೀಯರ ಪುತ್ಥಳಿಗಳನ್ನು ನಿರ್ಮಿಸಲು ಕ್ರಮ ವಹಿಸಲಾಗಿದೆ ಎಂದು ಶಾಸಕ ಕೆ.ಎಂ.ಉದಯ ತಿಳಿಸಿದರು. ಪಟ್ಟಣದ ಪೇಟೆಬೀದಿ ಮಾರ್ಗದಲ್ಲಿರುವ ವಿವಿಧ ವೃತ್ತಗಳಲ್ಲಿ ಮಹನೀಯರ ಪುತ್ಥಳಿಗಳನ್ನು ನಿರ್ಮಿಸುವ ಸಂಬಂಧ ಖ್ಯಾತ ಶಿಲ್ಪಿ ಮೈಸೂರು ಅರುಣ್ ಯೋಗಿರಾಜ್ ಮತ್ತು ಅಧಿಕಾರಿಗಳ ನೇತೃತ್ವದಲ್ಲಿ ಸ್ಥಳ ಪರಿಶೀಲನೆ ನಡೆಸಿ ಬಳಿಕ ಮಾತನಾಡಿದರು. ಮುಂದಿನ ಮೂರು ತಿಂಗಳೊಳಗಾಗಿ ಪೇಟೆಬೀದಿ ಅಗಲೀಕರಣ ಕಾಮಗಾರಿ ಕೈಗೊಳ್ಳಲಿದ್ದು ಸುಮಾರು 80 ಅಡಿಗೆ ರಸ್ತೆ ನಿರ್ಮಿಸಲು ಯೋಜನೆ ರೂಪಿಸಿದ್ದು ಈಗಾಗಲೇ ಸರಕಾರದ ಮಟ್ಟದಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳುವ ಜತೆಗೆ ಮುಂದಿನ ಸಚಿವ ಸಂಪುಟದ ಸಭೆಯಲ್ಲಿ ಅನುಮೋದನೆ ಸಿಗಲಿದ್ದು ಹೀಗಾಗಿ ಪೇಟೆಬೀದಿಯ ಐದು ವೃತ್ತಗಳಲ್ಲಿ ಮಹನೀಯರ ಪುತ್ಥಳಿಗಳನ್ನು ನಿರ್ಮಿಸಲು ಮುಂದಾಗಿರುವುದಾಗಿ ಹೇಳಿದರು. ಮದ್ದೂರು ಪುರಸಭೆಯನ್ನು ನಗರಸಭೆಯನ್ನಾಗಿ ಸರಕಾರ ಈಗಾಗಲೇ ಮೇಲ್ದರ್ಜೆಗೇರಿಸಿದ್ದು ಮತ್ತು ಶಾಶ್ವತ ಯೋಜನೆಗಳನ್ನು ರೂಪಿಸಬೇಕೆಂಬ ನಿಟ್ಟಿನಲ್ಲಿ ಪೇಟೆಬೀದಿ ಅಗಲೀಕರಣಕ್ಕೂ ಮುಂದಾಗಿದ್ದು ಸಾರ್ವಜನಿಕರಿಗೆ, ವರ್ತಕರಿಗೆ, ವ್ಯಾಪಾರಸ್ಥರಿಗೆ ಅನುಕೂಲವಾಗಲೆಂಬ ನಿಟ್ಟಿನಲ್ಲಿ ಅತ್ಯಾಧುನಿಕ ಮಾದರಿಯಲ್ಲಿ ರಸ್ತೆ ನಿರ್ಮಾಣ ಮಾಡಲು ಈಗಾಗಲೇ ಅಧಿಕಾರಿಗಳು ನಕ್ಷೆ ತಯಾರಿಸಿದ್ದು ಮುಂದಿನ ಮೂರು ತಿಂಗಳೊಳಗಾಗಿ ಕಾಮಗಾರಿ ಆರಂಭಗೊಳ್ಳಲಿರುವುದಾಗಿ ಹೇಳಿದರು.

ಫೀ.ಮಾ.ಕಾರ್ಯಪ್ಪ ಕಾಲೇಜು ಹಳೇ ವಿದ್ಯಾರ್ಥಿಗಳ ಸಂಘದ ಸಭೆ| ಬೊಳ್ಳಜಿರ ಅಯ್ಯಪ್ಪ ಹೇಳಿಕೆ

ಸುಸಜ್ಜಿತ ಫೈರಿಂಗ್ ರೇಂಜ್ ನಿರ್ಮಾಣಕ್ಕೆ ನಿರ್ಧಾರ

ಮಡಿಕೇರಿ: ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜ್ ನ ವಿದ್ಯಾರ್ಥಿಗಳು ಹಾಗೂ ಎನ್‌ಸಿಸಿ ವಿದ್ಯಾರ್ಥಿಗಳಿಗಾಗಿ ಕಾಲೇಜು ಮತ್ತು ಹಳೇ ವಿದ್ಯಾರ್ಥಿ ಸಂಘದ ವತಿಯಿಂದ ಕಾಲೇಜ್ ನ ಮೈದಾನದಲ್ಲಿ ಸುಸಜ್ಜಿತ ಫೈರಿಂಗ್ ರೇಂಜನ್ನು ನಿರ್ಮಾಣ ಮಾಡಲು ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು ಹಳೇ ವಿದ್ಯಾರ್ಥಿಗಳ ಸಂಘ ನಿರ್ಧರಿಸಿದೆ.

ಹಳೇ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಅವರ ಅಧ್ಯಕ್ಷತೆಯಲ್ಲಿ ಕಾಲೇಜ್ ನ ಸೆಮಿನಾರ್‌ಹಾಲ್ ನಲ್ಲಿ ನಡೆದ ಸಂಘದ ಸಭೆಯಲ್ಲಿ ಮುಂಬರುವ ದಿನಗಳಲ್ಲಿ ನಡೆಸಲಾಗುವ ವಿವಿಧ ಕಾರ್ಯಕ್ರಮಗಳ ಕುರಿತು ಚರ್ಚಿಸಲಾಯಿತು.

ಸಾರ್ವಜನಿಕರು, ಹಳೇ ವಿದ್ಯಾರ್ಥಿಗಳು ಹಾಗೂ ಕಾಲೇಜು ವಿದ್ಯಾರ್ಥಿಗಳಿಗಾಗಿ ಗುಂಡು ಹೊಡೆಯುವ ಸ್ಪರ್ಧೆಯನ್ನು ಶೀಘ್ರ ಆಯೋಜಿಸಲು ಮತ್ತು ಹಳೇ ವಿದ್ಯಾರ್ಥಿಗಳು ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಕ್ರೀಡೆ ಮತ್ತು ಮನೋರಂಜನಾ ಕಾರ್ಯಕ್ರಮಗಳನ್ನು ನಡೆಸಲು ನಿರ್ಧರಿಸಲಾಯಿತು.

ಹಳೇ ವಿದ್ಯಾರ್ಥಿ ಸಂಘಕ್ಕೆ ನೂತನ ಕಟ್ಟಡವನ್ನು ನಿರ್ಮಿಸುವ ಕುರಿತು ಚರ್ಚಿಸಿ, ಖಾತೆಯಲ್ಲಿ ಹೆಚ್ಚು ಹಣ ಇಲ್ಲದಿರುವ ಕಾರಣ ಮುಂದಿನ ದಿನಗಳಲ್ಲಿ ದಾನಿಗಳನ್ನು ಸಂಪರ್ಕಿಸಿ, ಸೂಕ್ತ ನಿರ್ಣಯ ಕೈಗೊಳ್ಳಲು ತೀರ್ಮಾನಿಸಲಾಯಿತು.

ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಅವರು ಮಾತನಾಡಿ, ಈ ಬಾರಿಯ ಮಹಾಸಭೆಯು ಅತ್ಯಂತ ಅಚ್ಚುಕಟ್ಟಾಗಿ ನಡೆದಿದ್ದು, ಸಹಕರಿಸಿದ ಎಲ್ಲರಿಗೂ ಧನ್ಯವಾದ ಸಲ್ಲಿಸಿದರು. ಮುಂದಿನ ಮಹಾಸಭೆಗೆ ಸದಸ್ಯತ್ವವನ್ನು ಹೆಚ್ಚಿಸಿ, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಸದಸ್ಯರು ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ಆಡಳಿತ ಮಂಡಳಿಯ ಸದಸ್ಯರು ತಮ್ಮ ಜವಾಬ್ದಾರಿಯನ್ನು ಅರಿತುಕೊಂಡು ಸಂಘ ಮತ್ತು ಕಾಲೇಜ್ ನ ಅಭಿವೃದ್ಧಿಗೆ ಕೈ ಜೋಡಿಸಬೇಕೆಂದು ಕೋರಿದರು.

ಬೈಲಾನುಸಾರ ನಿರಂತರ ಮೂರು ಸಭೆಗೆ ಗೈರು ಹಾಜರಾದ ಸದಸ್ಯರು ಸದಸ್ಯತ್ವವನ್ನು ಕಳೆದುಕೊಂಡಿದ್ದು, ಮುಂದಿನ ದಿನಗಳಲ್ಲಿ ಇದೇ ನಿಯಮವನ್ನು ಪಾಲಿಸುವುದಾಗಿ ತಿಳಿಸಿದರು. ಇದೇ ಸಂದರ್ಭ ಲೆಕ್ಕಪತ್ರ ಮಂಡಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಚಂದನ್ ನಂದರಬೆಟ್ಟು ಕಳೆದ ಸಭೆ ಹಾಗೂ ಮಹಾಸಭೆಯ ವರದಿ ವಾಚಿಸಿ, ಅನುಮೋದನೆ ಪಡೆದರು.

ಸಭೆಯಲ್ಲಿ ಕಾಲೇಜ್ ನ ಪ್ರಾಂಶುಪಾಲ ಮೇಜರ್ ಪ್ರೊ.ರಾಘವ ಬಿ, ಸಂಘದ ಉಪಾಧ್ಯಕ್ಷ ಬೊಟ್ಟಂಗಡ ಗಣಪತಿ, ನಿರ್ದೇಶಕರಾದ ಪೆಬ್ಬಟ್ಟೀರ ಶೀತಲ್ ಕಾರ್ಯಪ್ಪ, ಕೆ.ಹೆಚ್.ಖುರ್ಷಿದ್ ಬಾನು, ಲೋಹಿತ್ ಮಾಗಲು, ಆದರ್ಶ್ ಅದ್ಕಲೆಗಾರ್, ಎಸ್.ಆರ್.ವತ್ಸಲ ಹಾಗೂ ಬಲ್ಯದ ಚರಣ್ ಉಪಸ್ಥಿತರಿದ್ದರು.

ಸಂಘದ ನಿರ್ದೇಶಕರಾದ ಐತಿಚಂಡ ರಶ್ಮಿ ಮೇದಪ್ಪ ಪ್ರಾರ್ಥಿಸಿದರು, ಸಬ್ಬಂಡ್ರ ಜಗದೀಶ್ ಸ್ವಾಗತಿಸಿದರು, ಆಪಾಡಂಡ ಜಾನ್ಸಿ ಗಣಪತಿ ವಂದಿಸಿದರು.

ಸಂಘದ ಸಭೆಯಲ್ಲಿ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಅವರು ಮಾತನಾಡಿದರು.

ಕ್ರೀಡಾ ಸಮಿತಿ ರಚನೆ

ಮುಂದಿನ ದಿನಗಳಲ್ಲಿ ನಡೆಯಲಿರುವ ಕ್ರೀಡಾಕೂಟಗಳಿಗೆ ಸಭೆಯಲ್ಲಿ ಕ್ರೀಡಾ ಸಮಿತಿಯನ್ನು ರಚಿಸಲಾಯಿತು. ಸಂಚಾಲಕರನ್ನಾಗಿ ಸಬ್ಬಂಡ್ರ ಜಗದೀಶ್, ದಿಶಾಂತ್ ಗಾಳಿಬೀಡು, ಐಚಂಡ ರಶ್ಮಿ ಮೇದಪ್ಪ, ಆಪಾಡಂಡ ಜಾನ್ಸಿ ಗಣಪತಿ ಹಾಗೂ ಕರವಂಡ ಸೀಮಾ ಗಣಪತಿ ಅವರನ್ನು ನೇಮಕ ಮಾಡಲಾಯಿತು.

ಸಮಾಚಾರ ಸಣ್ಣದಲ್ಲ

ಅನುಮಾನಾಸ್ಪದ ಪಟ್ಟಿಗೆ ದೀಪಕ್ ಹೂಡಾ ಸೇರ್ಪಡೆ

ದೆಹಲಿ: ಬಹುನಿರೀಕ್ಷಿತ ಐಪಿಎಲ್-2026ರ ಮಿನಿ ಹರಾಜಿಗೆ ಇನ್ನೊಂದು ದಿನ ಮಾತ್ರ ಬಾಕಿ ಉಳಿದಿದ್ದು, ಇದೇ ಮಂಗಳವಾರ ದುಬೈನಲ್ಲಿ ಹರಾಜು ನಡೆಯಲಿದೆ. 19ನೇ ಆವೃತ್ತಿಯ ಟೂರ್ನಮೆಂಟ್‌ಗೆ ಮುನ್ನ ತಮ್ಮ ಅತ್ಯುತ್ತಮ ಆಟಗಾರರನ್ನು ಆಯ್ಕೆ ಮಾಡಿಕೊಳ್ಳಲು 10 ಫ್ರಾಂಚೈಸಿಗಳು ಸರ್ವ ಪ್ರಯತ್ನಗಳನ್ನು ಮಾಡುತ್ತಿವೆ. ಆದರೆ ಹರಾಜಿನ ಮುನ್ನ ದೀಪಕ್ ಹೂಡಾಗೆ ಭಾರೀ ಹಿನ್ನಡೆಯಾಗಿದೆ. ಬಿಸಿಸಿಐ ಅನುಮಾನಾಸ್ಪದ ಬೌಲರ್‌ಗಳ ಪಟ್ಟಿಯಲ್ಲಿ ಅವರನ್ನು ಸೇರಿಸಿದೆ. ಅವರ ಬೌಲಿಂಗ್ ಶೈಲಿಯ ಕುರಿತು ಬಿಸಿಸಿಐ, ಎಲ್ಲಾ ಫ್ರಾಂಚೈಸಿಗಳಿಗೂ ಮಾಹಿತಿಯನ್ನೂ ಕೂಡ ನೀಡಿದೆ. ಸ್ಪಿನ್ ಆಲ್‌ರೌಂಡರ್ ಆಗಿರುವ ಅವರು ಒಂದೊಮ್ಮೆ ಹರಾಜಿನಲ್ಲಿ ಯಾವುದೇ ಫ್ರಾಂಚೈಸಿ ಪಾಲಾದರೂ ಕೇವಲ ಬ್ಯಾಟರ್ ಆಗಿ ಮಾತ್ರ ಆಡಬೇಕಿದೆ. ಈ ಹಿಂದಿನ ಋತುವಿನಲ್ಲಿ ಐಪಿಎಲ್‌ನಲ್ಲಿ ಚೆನ್ನೈ ಫ್ರಾಂಚೈಸಿ ಪ್ರತಿನಿಧೀಕರಿಸಿ, 7 ಪಂದ್ಯಗಳಲ್ಲಿ ಆಡಿದ್ದರು. ಆದರೆ ಅವರು ಆಡಿದ ಯಾವುದೇ ಪಂದ್ಯಗಳಲ್ಲಿ ಬೌಲಿಂಗ್ ಮಾಡಿರಲಿಲ್ಲ.

ಮ್ಯಾನೇಜರ್ ಪ್ರಮಾದ: ಕ್ಯಾಮರೂನ್ ಗ್ರೀನ್ ಸ್ಪಷ್ಟನೆ

ದುಬೈ: ಐಪಿಎಲ್ 19ನೇ ಆವೃತ್ತಿಯ ಮಿನಿ ಹರಾಜಿನಲ್ಲಿ ಗರಿಷ್ಠ ಬೆಲೆ ಪಡೆಯಲಿದ್ದಾರೆ ಎಂದು ಬಿಂಬಿತವಾಗಿರುವ ಆಸ್ಟ್ರೇಲಿಯಾದ ಕ್ಯಾಮರೂನ್ ಗ್ರೀನ್ ತಮ್ಮ ನೋಂದಣಿ ವೇಳೆ ಆಗಿರುವ ಪ್ರಮಾದವನ್ನು ತಿಳಿಸಿದ್ದಾರೆ.

ಹರಾಜಿಗಾಗಿ ನೋಂದಾಯಿಸಿರುವ ಅವರ ಮ್ಯಾನೇಜರ್ ಗ್ರೀನ್‌ರನ್ನು ಬ್ಯಾಟರ್ ಎಂದು ಹೆಸರಿಸಿದ್ದಾರೆ, ಆದರೆ ಅವರು ಬೌಲಿಂಗ್ ಮಾಡಲು ಸಿದ್ಧರಿರುವುದಾಗಿ ತಿಳಿಸಿದ್ದಾರೆ. ತಮ್ಮ ಮ್ಯಾನೇಜರ್ ಮಾಡಿದ ತಪ್ಪಿನಿಂದಾಗಿ, ಐಪಿಎಲ್‌ಮಿನಿ ಹರಾಜಿನಲ್ಲಿ ತಪ್ಪಾಗಿ ಬ್ಯಾಟ್ಸ್‌ಮನ್ ಆಗಿ ನೋಂದಾಯಿಸಿಕೊಳ್ಳಲಾಗಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಆಸ್ಟ್ರೇಲಿಯಾದ ಆಲ್‌ರೌಂಡರ್ ಬೆನ್ನು ಶಸ್ತ್ರಚಿಕಿತ್ಸೆಯಿಂದಾಗಿ 2025ರ ಐಪಿಎಲ್ ಆವೃತ್ತಿಯನ್ನು ತಪ್ಪಿಸಿಕೊಂಡಿದ್ದರು. ಆದರೆ 26 ವರ್ಷದ ಗ್ರೀನ್ ಜೂನ್‌ನಲ್ಲಿ ತಜ್ಞ ಬ್ಯಾಟ್ಸ್‌ಮನ್ ಆಗಿ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಮರಳಿದ್ದರು. ಆರಂಭದಲ್ಲಿ ಅವರು ಬ್ಯಾಟಿಂಗ್ ಮಾತ್ರ ಮಾಡುತ್ತಿದ್ದರು, ಇದೀಗ ಅವರಿಗೆ ಬೌಲಿಂಗ್ ಮಾಡಲು ಅನುಮತಿ ನೀಡಲಾಗಿದ್ದು, ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ನಡುವಿನ ನಡೆಯುತ್ತಿರುವ ಆ್ಯಶಸ್ ಸರಣಿಯಲ್ಲಿ ಬೌಲಿಂಗ್ ಮಾಡುತ್ತಿದ್ದಾರೆ.

3ನೇ ಟಿ20 ಪಂದ್ಯ | ಮತ್ತೆ ಟೀಮ್ ಇಂಡಿಯಾ ಸಂಘಟಿತ ಪ್ರಯತ್ನ | ಅರ್ಶದೀಪ್‌ಗೆ ಪಂದ್ಯಶ್ರೇಷ್ಠ ಪ್ರಶಸ್ತಿ

ದ.ಆಫ್ರಿಕಾ ವಿರುದ್ಧ ಭಾರತಕ್ಕೆ ಸರಣಿ ಮುನ್ನಡೆ

ಧರ್ಮಶಾಲಾ: ಇಲ್ಲಿನ ಹಿಮಾಚಲ ಪ್ರದೇಶ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ನಡೆದ 3ನೇ ಟಿ20 ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಭಾರತವು 7 ವಿಕೆಟ್‌ಗಳ ಸುಲಭ ಜಯ ಸಾಧಿಸಿ ಸರಣಿಯಲ್ಲಿ 2-1 ಅಂತರದ ಮುನ್ನಡೆ ಸಾಧಿಸಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ ತಂಡ 20 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು ಕೇವಲ 117 ರನ್‌ಗಳ ಸಾಧಾರಣ ಮೊತ್ತ ದಾಖಲಿಸಿತು. 118 ರನ್‌ಗಳ ಗುರಿಯನ್ನು ಬೆಂಬತ್ತಿದ ಭಾರತ ಕೇವಲ 15.5 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು ಗೆಲುವು ದಾಖಲಿಸಿತು.

ಟೀಮ್ ಇಂಡಿಯಾಗೆ ಅಭಿಷೇಕ್ ಶರ್ಮಾ ಹಾಗೂ ಶುಭ್‌ಮನ್ ಗಿಲ್ ಭರ್ಜರಿ ಆರಂಭ ನೀಡಿದರು. ಈ ಜೋಡಿ 5.2 ಓವರ್‌ಗಳಲ್ಲಿ 60 ರನ್ ಕಲೆ ಹಾಕಿತು. ಅಭಿಷೇಕ್ ಶರ್ಮಾ ಕೇವಲ 18 ಎಸೆತಗಳಲ್ಲಿ ತಲಾ 3 ಬೌಂಡರಿ, 3 ಸಿಕ್ಸರ್‌ಗಳ ಸಹಿತ 35 ರನ್ ಗಳಿಸಿ ಔಟ್ ಆದರು.

ಫಾರ್ಮ್ ಸಮಸ್ಯೆ ಎದುರಿಸುತ್ತಿರುವ ಉಪನಾಯಕ ಶುಭ್‌ಮನ್ ಗಿಲ್ 28 ಎಸೆತಗಳಲ್ಲಿ 5 ಬೌಂಡರಿಗಳ ಸಹಿತ 28 ರನ್ ಗಳಿಸಿ ಔಟ್ ಆದರು. ನಂತರ ಬಂದ ನಾಯಕ ಸೂರ್ಯಕುಮಾರ್ ಯಾದವ್ 11 ಎಸೆತಗಳಲ್ಲಿ 2 ಬೌಂಡರಿ ಸಹಿತ 12 ರನ್ ಗಳಿಸಿ

ಮತ್ತೊಮ್ಮೆ ವೈಫಲ್ಯ ಕಂಡರು. ತಿಲಕ್ ವರ್ಮಾ 26 ರನ್ ಹಾಗೂ ಶಿವಂ ದುಬೆ 10 ರನ್ ಗಳಿಸಿ ಅಜೇಯರಾಗುಳಿದರು.

ದಕ್ಷಿಣ ಆಫ್ರಿಕಾ ಪರ ಕಾರ್ಬಿನ್ ಬಾಷ್, ಮಾರ್ಕೊ ಜಾನ್ಸನ್ ಹಾಗೂ ಲುಂಗು ಎನ್‌ಗಿಡಿ ತಲಾ 1 ವಿಕೆಟ್ ಪಡೆದರು.

ಇದಕ್ಕೂ ಮುನ್ನ ಟಾಸ್ ಸೋತು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ ತಂಡ ಸಂಪೂರ್ಣ ಬ್ಯಾಟಿಂಗ್ ವೈಫಲ್ಯ ಅನುಭವಿಸಿ ಕೇವಲ 117ಕ್ಕೆ ಆಲೌಟ್ ಆಯಿತು. ಆರಂಭಿಕರಾದ ರೀಜಾ ಹೆಂಡ್ರಿಕ್ಸ್ (0) ಮತ್ತು ಕ್ವಿಂಟನ್ ಡಿಕಾಕ್ 1 ರನ್ ಹಾಗೂ ಸ್ಫೋಟಕ ಬ್ಯಾಟರ್ ಡೆವಾಲ್ಡ್ ಬ್ರೆವಿಸ್ (2) ಕೇವಲ 7 ರನ್ ಗಳಿಸುವಷ್ಟರಲ್ಲಿ ಔಟ್ ಆದರು.

ನಂತರ ಬಂದ ಮಧ್ಯಮ ಕ್ರಮಾಂಕದ

ಬ್ಯಾಟರ್‌ಗಳೂ ಭಾರತೀಯ ಬೌಲರ್‌ಗಳ ದಾಳಿಯನ್ನು ಎದುರಿಸುವಲ್ಲಿ ವಿಫಲರಾದರು. ಟ್ರಿಸ್ಟಾನ್ ಸ್ಟಬ್ಸ್ (9), ಕಾರ್ಬಿನ್ ಬಾಷ್ (4) ಕ್ರಮವಾಗಿ ಪಾಂಡ್ಯ ಹಾಗೂ ಶಿವಂ ದುಬೆಗೆ ವಿಕೆಟ್ ಒಪ್ಪಿಸಿದರು. 2ನೇ ಟಿ20 ಪಂದ್ಯದಲ್ಲಿ 16 ಎಸೆತಗಳಲ್ಲಿ ಅಜೇಯ 30 ರನ್ ಸಿಡಿಸಿದ್ದ ಡೊನೊವನ್ ಫೆರ್ರೆರಾ 15 ಎಸೆತಗಳಲ್ಲಿ 20 ರನ್ ಗಳಿಸಿ ಔಟ್ ಆದರು. ಆಲ್‌ರೌಂಡರ್ ಮಾರ್ಕೊ ಜಾನ್ಸನ್ 2 ರನ್ ಗಳಿಸಿ ಕ್ಲೀನ್ ಬೌಲ್ಡ್ ಮಾಡಿದರು.

ಆದರೆ ಮೊದಲ ಓವರ್‌ನಲ್ಲಿ ಮೈದಾನದಕ್ಕೆ ಬಂದಿದ್ದ ಐಡೆನ್ ಮಾರ್ಕ್ರಮ್ 19ನೇ ಓವರ್‌ನಲ್ಲಿ ವಿಕೆಟ್ ಒಪ್ಪಿಸಿದರು. ಮಾರ್ಕ್ರಮ್ 46 ಎಸೆತಗಳಲ್ಲಿ 6 ಬೌಂಡರಿ, 2 ಸಿಕ್ಸರ್‌ಗಳ ಸಹಿತ 61 ರನ್ ಗಳಿಸಿ ಗರಿಷ್ಠ ಸ್ಕೋರರ್ ಎನಿಸಿಕೊಂಡರು. ಎನ್ರಿಚ್ ನಾರ್ಕಿಯಾ 12, ಒಟ್ನೀಲ್ 1 ರನ್ ಗಳಿಸಿದರು.

ಟೀಮ್ ಇಂಡಿಯಾ ಬೌಲಿಂಗ್ ದಾಳಿ: ಭಾರತದ ಪರ ಪ್ರಚಂಡ ಬೌಲಿಂಗ್ ದಾಳಿ ನಡೆಸಿದ ಅರ್ಷದೀಪ್ ಸಿಂಗ್ 4 ಓವರ್‌ಗಳಲ್ಲಿ ಕೇವಲ 13 ರನ್ ನೀಡಿ 2 ವಿಕೆಟ್ ಪಡೆದು ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ವರುಣ್ ಚಕ್ರವರ್ತಿ 4 ಓವರ್‌ಗಳಲ್ಲಿ ಕೇವಲ 11 ರನ್ ನೀಡಿ 2 ವಿಕೆಟ್ ಪಡೆದರು. ಕುಲ್ದೀಪ್ ಯಾದವ್ 2 ಓವರ್‌ಗಳಲ್ಲಿ 12 ರನ್ ನೀಡಿ 2 ವಿಕೆಟ್, ಹರ್ಷಿತ್ ರಾಣಾ 4 ಓವರ್‌ಗಳಲ್ಲಿ 34 ರನ್ ನೀಡಿ 2 ವಿಕೆಟ್ ಪಡೆದರು. ಹಾರ್ದಿಕ್ ಪಾಂಡ್ಯ ಹಾಗೂ ಶಿವಂ ದುಬೆ ಕೂಡ ತಲಾ 1 ವಿಕೆಟ್ ಪಡೆದು ಮಿಂಚಿದರು.

ಜೈಸ್ವಾಲ್ ಶತಕ: ಮುಂಬೈಗೆ ಗೆಲುವು

ಮುಂಬೈ: ಸೈಯದ್ ಮುಷ್ತಾಕ್ ಅಲಿ ಟ್ರೋಫಿಯ ಸೂಪರ್ ಲೀಗ್ ಸುತ್ತಿನಲ್ಲಿ ಭಾನುವಾರ ನಡೆದ ಗ್ರೂಪ್-ಬಿ ಪಂದ್ಯದಲ್ಲಿ ಹರಿಯಾಣ ತಂಡವನ್ನು ಮುಂಬೈ ಸೋಲಿಸಿತು.

ಯಶಸ್ವಿ ಜೈಸ್ವಾಲ್ ಶತಕ ಮತ್ತು ಸರ್ಫರಾಜ್ ಖಾನ್ ಅರ್ಧಶತಕದ ನೆರವಿನಿಂದ ಮುಂಬೈ ಗೆಲುವಿಗೆ ಕಾರಣವಾಯಿತು. ಮೊದಲು ಬೌಲಿಂಗ್ ಮಾಡಿದ ಮುಂಬೈ ನಿರೀಕ್ಷಿತ ಪ್ರದರ್ಶನ ತೋರಿಸಲಿಲ್ಲ. ಹರಿಯಾಣ 20 ಓವರ್‌ಗಳಲ್ಲಿ 3 ವಿಕೆಟ್‌ಗೆ 234 ರನ್ ಗಳಿಸಿತು. ಮುಂಬೈ 3.1 ಓವರ್‌ಗಳಲ್ಲಿ 53 ರನ್‌ಗಳ ಆರಂಭಿಕ ಜತೆಯಾಟ ಕಂಡಿತ್ತು.

ಎಡಗೈ ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್ ಮುಂಬೈ ಪರ ಮಿಂಚಿದರು. ಯಶಸ್ವಿ ಜೈಸ್ವಾಲ್ 50 ಎಸೆತಗಳಲ್ಲಿ 16 ಬೌಂಡರಿ ಮತ್ತು 1 ಸಿಕ್ಸರ್ ನೆರವಿನಿಂದ 101 ರನ್ ಬಾರಿಸಿದರು.

ಫುಟ್ಬಾಲ್ ಮಾಂತ್ರಿಕನಿಗೆ ತೆಂಡೂಲ್ಕರ್ ಜೆರ್ಸಿ ಉಡುಗೊರೆ | ಪಂದ್ಯದಲ್ಲಿ ಪಾಲ್ಗೊಂಡ ಚೆಟ್ರಿ

ಮುಂಬೈಯಲ್ಲಿ ಲಿಯೋನೆಲ್ ಮೆಸ್ಸಿ ಮೇನಿಯಾ

ಮುಂಬೈ: ವಿಶ್ವದ ಶ್ರೇಷ್ಠ ಫುಟ್ಬಾಲ್ ಆಟಗಾರರಲ್ಲಿ ಒಬ್ಬರಾದ ಅರ್ಜೆಂಟೀನಾದ ಲಿಯೋನೆಲ್ ಮೆಸ್ಸಿ ಮುಂಬೈನಲ್ಲಿ ಭಾನುವಾರ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರು. ಈ ವೇಳೆ ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್, ಭಾರತದ ಫುಟ್ಬಾಲ್ ತಾರೆ ಸುನಿಲ್ ಚೆಟ್ರಿ, ನಟ ಅಜಯ್ ದೇವಗನ್, ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಹಾಜರಿದ್ದರು.

ಸಚಿನ್ ತೆಂಡೂಲ್ಕರ್ ಅವರು ಮೆಸ್ಸಿಗೆ 2011ರ ಏಕದಿನ ವಿಶ್ವಕಪ್ ವಿಜೇತ ತಂಡದ ಜೆರ್ಸಿಯನ್ನು ಸ್ಮರಣಿಕೆಯಾಗಿ ನೀಡಿದರು. ವಾಂಖೆಡೆ ಕ್ರೀಡಾಂಗಣದಲ್ಲಿ ಮೆಸ್ಸಿಯನ್ನುದ್ದೇಶಿಸಿ ಮಾತನಾಡಿದ ಸಚಿನ್, 'ನಾನು ಇಲ್ಲಿ ಕೆಲವು ಅದ್ಭುತ ಕ್ಷಣಗಳನ್ನು ಕಳೆದಿದ್ದೇನೆ. ನಾವು ಮುಂಬೈ ಅನ್ನು ಕನಸುಗಳ ನಗರ ಎಂದು ಕರೆಯುತ್ತೇವೆ, ಹಲವಾರು ಕನಸುಗಳು ಈ ಸ್ಥಳದಲ್ಲಿ ಅಂತಿಮ ಗುರಿ ಕಂಡಿವೆ. ಇಂದು ದಿಗ್ಗಜ ಫುಟ್ಬಾಲ್ ಆಟಗಾರರನ್ನು ಮುಂಬೈ ಕಾಣುವುದು ಮತ್ತು ಮುಂಬೈ ನಿವಾಸಿಗಳು ನೋಡುತ್ತಿರುವುದು ಭಾರತಕ್ಕೆ ಸುವರ್ಣ ಕ್ಷಣವಾಗಿದೆ. ಎಲ್ಲರ

ಪರವಾಗಿ ಮೆಸ್ಸಿ, ಉರುಗ್ವೆಯ ಲೂಯಿಸ್ ಸುವಾರೆಜ್ ಮತ್ತು ರೊಡ್ರಿಗೋ ಡಿ ಪಾಲ್ ಅವರಿಗೆ ಮತ್ತು ಅವರ ಕುಟುಂಬಕ್ಕೆ ಉತ್ತಮ ಆರೋಗ್ಯವನ್ನು ಹಾರೈಸುತ್ತೇನೆ, ಪ್ರೋತ್ಸಾಹಿಸಿದ್ದಕ್ಕಾಗಿ ಮತ್ತೊಮ್ಮೆ ಧನ್ಯವಾದಗಳು. ಫುಟ್ಬಾಲ್ ನಾವೆಲ್ಲರೂ ಆಶಿಸುವ ಎತ್ತರವನ್ನು ತಲುಪುತ್ತದೆ ಎಂದು ನಾನು ಭಾವಿಸುತ್ತೇನೆ' ಎಂದು ಸಚಿನ್ ಹೇಳಿದರು.

ಪ್ರದರ್ಶನ ಪಂದ್ಯದಲ್ಲಿ ಮಿತ್ರಾ ಸ್ಟಾರ್ ತಂಡದ ಪರ

ಆಟವಾಡಿರುವ ಸುನಿಲ್ ಚೆಟ್ರಿ ಗೋಲು ಗಳಿಸುವ ಮೂಲಕ ಗಮನ ಸೆಳೆದರು. ಪಂದ್ಯಕ್ಕೂ ಮುನ್ನ ಮೆಸ್ಸಿ ಜೊತೆ ಮೈದಾನದಲ್ಲಿ ಮಾತುಕತೆಯನ್ನು ಕೂಡ ನಡೆಸಿದ್ದಾರೆ. ಲಿಯೊನೆಲ್ ಮೆಸ್ಸಿ ಅವರನ್ನು ಭೇಟಿಯಾಗಲು ಸುನಿಲ್ ಚೆಟ್ರಿ ನಿರಾಕರಿಸಿದ್ದಾರೆ ಎನ್ನುವ ವದಂತಿಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದವು, ಆದರೆ ಆ ಎಲ್ಲ ವದಂತಿಗಳಿಗೂ ಭಾನುವಾರ ತೆರೆ ಬಿತ್ತು.

ಸೋಲಿನ ಪಂದ್ಯದೊಂದಿಗೆ ಅಮೆರಿಕ ಆಟಗಾರ ಡಬ್ಲ್ಯುಡಬ್ಲ್ಯುಇ ಕುಸ್ತಿಗೆ ನಿವೃತ್ತಿ

ಕುಸ್ತಿಗೆ ಅಮೆರಿಕದ ಜಾನ್ ಸೀನಾ ವಿದಾಯ

ನ್ಯೂಯಾರ್ಕ್: ಡಬ್ಲ್ಯುಡಬ್ಲ್ಯುಇ ಸೂಪರ್‌ಸ್ಟಾರ್, 17 ಬಾರಿ ಚಾಂಪಿಯನ್ ಆಗಿರುವ ಅಮೆರಿಕದ ಜಾನ್ ಸೀನಾ ಅವರು ತಮ್ಮ ವೃತ್ತಿಜೀವನಕ್ಕೆ ನಿವೃತ್ತಿ ಘೋಷಿಸಿದ್ದಾರೆ. ಶನಿವಾರ ತಡರಾತ್ರಿ ನಡೆದ ಗುಂಥರ್ ವಿರುದ್ಧದ ವಿದಾಯ ಪಂದ್ಯದಲ್ಲಿ ಸೋಲು ಕಾಣುವ ಮೂಲಕ ತಮ್ಮ ಅದ್ಭುತ ಕುಸ್ತಿ ವೃತ್ತಿಜೀವನಕ್ಕೆ ಅವರು ವಿದಾಯ ಹೇಳಿದರು.

2002ರ ಜೂನ್ 27ರಂದು ಸ್ಮ್ಯಾಕ್‌ಡೌನ್‌ನಲ್ಲಿ ಜಾನ್ ಸೀನಾ ಡಬ್ಲ್ಯುಡಬ್ಲ್ಯುಇಗೆ ಪದಾರ್ಪಣೆ ಮಾಡಿದರು. ಮುಂದಿನ ಎರಡು ದಶಕಗಳಲ್ಲಿ ಪ್ರಚಾರದ ಅತ್ಯಂತ ಜನಪ್ರಿಯ ವ್ಯಕ್ತಿಗಳಲ್ಲಿ ಒಬ್ಬರಾದರು. 17 ಬಾರಿ ಡಬ್ಲ್ಯುಡಬ್ಲ್ಯುಇ ವಿಶ್ವ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಕಂಪನಿಯ ಪ್ರಶಸ್ತಿ ಇತಿಹಾಸದಲ್ಲಿ ಅವರು ಅಗ್ರಸ್ಥಾನದಲ್ಲಿರುವ ದಾಖಲೆಯನ್ನು ಹೊಂದಿದ್ದಾರೆ, ಅವರು ಆರು ಬಾರಿ ರೆಸಲ್‌ಮೇನಿಯಾದಲ್ಲಿ ಪ್ರಮುಖ ಸ್ಥಾನ ಪಡೆದಿದ್ದಾರೆ.

ಇಂಟರ್‌ಕಾಂಟಿನೆಂಟಲ್ ಪ್ರಶಸ್ತಿಯೂ ಸೇರಿದಂತೆ ಡಬ್ಲ್ಯುಡಬ್ಲ್ಯುಇನ ಪ್ರಮುಖ ಚಾಂಪಿಯನ್‌ಶಿಪ್‌ಗಳನ್ನು ಗೆಲ್ಲುವ ಮೂಲಕ ಗ್ರ್ಯಾಂಡ್ ಸ್ಲಾಮ್ ಅನ್ನು ಪೂರ್ಣಗೊಳಿಸಿದ್ದಾರೆ. ಜಾನ್ ಸೀನಾ ಸಿನಿಮಾ ರಂಗದಲ್ಲೂ ಗುರುತಿಸಿಕೊಂಡಿದ್ದಾರೆ. ಟೊರಾಂಟೊದಲ್ಲಿ ನಡೆದ ಮನಿ ಇನ್ ಬ್ಯಾಂಕ್ ಪ್ರೀಮಿಯಂ ಕಾರ್ಯಕ್ರಮದಲ್ಲಿ ಭಾಗವಹಿಸಿದ ಜಾನ್ ಸೀನಾ ಈ ಘೋಷಣೆ ಮಾಡಿದ್ದು, 'ದಿ ಲಾಸ್ಟ್ ಟೈಮ್ ಈಸ್ ನೌ' ಎಂದು ಬರೆದ ಟೀ ಶರ್ಟ್ ಧರಿಸಿ ಬಂದಿದ್ದರು. ಇದರೊಂದಿಗೆ ಕುಸ್ತಿಯಲ್ಲಿ 2025 ಅವರ ಕೊನೆಯ ವರ್ಷ ಎಂದು ಬಹಿರಂಗಪಡಿಸಿದ್ದರು.

ಶ್ರೇಷ್ಠ ಕುಸ್ತಿ ತಾರೆಗಳಲ್ಲಿ ಒಬ್ಬರೆಂದು ಗುರುತಿಸಲ್ಪಟ್ಟ ಜಾನ್ ಸೀನಾ ಅವರನ್ನು ವಿಶ್ವದ ಅತ್ಯಂತ ಶ್ರೀಮಂತ ಡಬ್ಲ್ಯುಡಬ್ಲ್ಯುಇ ತಾರೆಗಳಲ್ಲಿ ಒಬ್ಬರೆಂದು ಪರಿಗಣಿಸಲಾಗಿದೆ.

ಪೊಲೀಸರ ವಶದಲ್ಲಿ ಮೆಸ್ಸಿ ಭಾರತ ಪ್ರವಾಸದ ಸಂಘಟಕ

ಕೋಲ್ಕತ್ತಾ ದುರ್ಘಟನೆಯ ಹಿನ್ನೆಲೆಯಲ್ಲಿ ಕ್ರಮ

ಸತಾದ್ರು ದತ್ತಗೆ ಹದಿನಾಲ್ಕು ದಿನ ಪೊಲೀಸ್ ಕಸ್ಟಡಿ

ದೆಹಲಿ: ಕೋಲ್ಕತ್ತಾದ ಸಾಲ್ಟ್‌ಲೇಕ್ ಕ್ರೀಡಾಂಗಣದಲ್ಲಿ ಮೆಸ್ಸಿ ಸಂದರ್ಶನ ವೇಳೆ ನಡೆದಿದ್ದ ದಾಂಧಲೆ ಪ್ರಕರಣಕ್ಕೆ ಸಂಬಂಧಿಸಿ ಬಂಧಿತರಾಗಿರುವ ಗೋಟ್ ಟೂರ್ ಆಯೋಜಕ ಸತದ್ರು ದತ್ತ ಅವರಿಗೆ ಜಾಮೀನು ನಿರಾಕರಿಸಿದ ಕಾರಣ 14 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದೆ.

ಲಿಯೋನೆಲ್ ಮೆಸ್ಸಿ ಕೋಲ್ಕತ್ತಾದಿಂದ ಹೈದರಾಬಾದ್‌ಗೆ ತೆರಳುತ್ತಿದ್ದಾಗ ದತ್ತಾ ಅವರನ್ನು ಪೊಲೀಸರು ಬಂಧಿಸಿದ್ದರು. ಕ್ರೀಡಾಂಗಣದಲ್ಲಿ ರಾಜಕಾರಣಿಗಳು ಮತ್ತು ವಿಐಪಿಗಳು ಹೆಚ್ಚಿಗೆ ಇದ್ದಿದ್ದರಿಂದ ಅಭಿಮಾನಿಗಳಿಗೆ ಮೆಸ್ಸಿಯನ್ನು ನೋಡಲು ಸಾಧ್ಯವಾಗಲಿಲ್ಲ.

ಕೋಲ್ಕತಾದ ಕ್ರೀಡಾಂಗಣದಲ್ಲಿ 50 ಸಾವಿರ ಜನರು 5ರಿಂದ 20 ಸಾವಿರ ರು.ವರೆಗೆ ಟಿಕೆಟ್ ಖರೀದಿಸಿ ಗಂಟೆಗಟ್ಟಲೆಯಿಂದ ಮೆಸ್ಸಿ ಬರುವಿಕೆಗೆ ಕಾದಿದ್ದರು. ಅವರು ಕ್ರೀಡಾಂಗಣಕ್ಕೆ ಒಂದು ಸುತ್ತು ಹಾಕಲಿಲ್ಲ ಮಾತ್ರವಲ್ಲ, ದೊಡ್ಡ ಪರದೆಗಳಲ್ಲೂ ಚಿತ್ರ ಸ್ಪಷ್ಟವಾಗಿ ಕಾಣಲಿಲ್ಲ. ಗೊಂದಲ ಹೆಚ್ಚಾಗಿ

ಮೆಸ್ಸಿ 22 ನಿಮಿಷದಲ್ಲೇ ನಿರ್ಗಮಿಸಿದರು. ಕೆರಳಿದ ಜನ ಸ್ಟೇಡಿಯಗೆ ಕುರ್ಚಿ, ಬಾಟಲಿಗಳನ್ನು ಮೈದಾನಕ್ಕೆಸೆದು ಕೆಂಡಕಾರಿದರು

ಸಾಲ್ಟ್ ಲೇಕ್‌ನಲ್ಲಿನ ಅವ್ಯವಸ್ಥೆ, ದಾಂಧಲೆಗೆ ಬಗ್ಗೆ ಸಾಮಾಜಿಕ ತಾಣ ಎಕ್ಸ್‌ನಲ್ಲಿ ಮೆಸ್ಸಿ ಕ್ಷಮೆಯಾಚಿಸಿ, ದುರ್ಘಟನೆಯಿಂದಾಗಿ ಬಹಳ ನೋವಾಗಿರುವುದಾಗಿ ತಿಳಿಸಿದ್ದಾರೆ. ಕೋಲ್ಕತ್ತಾ ಕ್ರೀಡಾಂಗಣದಲ್ಲಿ ಮೆಸ್ಸಿ ಜತೆ ಪ.ಬಂಗಾಳ ಸಿಎಂ ಮಮತಾ ಬ್ಯಾನರ್ಜಿ, ಬಾಲಿವುಡ್ ನಟ ಶಾರುಖ್ ಖಾನ್, ಕ್ರಿಕೆಟಿಗ ಸೌರವ್ ಗಂಗೂಲಿ ಅವರೂ ಕಾಣಿಸಿಕೊಳ್ಳಬೇಕಿತ್ತು, ಆದರೆ ಜನದಟ್ಟಣೆಯಿಂದ ಅವರು ಕ್ರೀಡಾಂಗಣಕ್ಕೇ ಬರಲು ಆಗಲಿಲ್ಲ.

ಭಾವಪೂರ್ಣ ಶ್ರದ್ಧಾಂಜಲಿ

ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷರಾದ
ಡಾ. ಶಾಮನೂರು ಶಿವಶಂಕರಪ್ಪನವರು
ದಿನಾಂಕ 14.12.2025 ರ ಭಾನುವಾರ
ಸಂಜೆ ಲಿಂಗೈಕ್ಯರಾಗಿದ್ದಾರೆಂದು ತಿಳಿಸಲು ವಿಷಾಧಿಸುತ್ತೇವೆ.
ಮೃತರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ಹಾಗೂ ಅವರ
ಅಗಲುವಿಕೆಯಿಂದ ಸಮಾಜ ಮತ್ತು ಅವರ
ಕುಟುಂಬಕ್ಕಾಗಿರುವ ಅಗಾಧ ದುಃಖವನ್ನು ಭರಿಸುವ ಶಕ್ತಿ
ನೀಡಲೆಂದು ರೇಣುಕಾದಿ ಆಚಾರ್ಯರಲ್ಲಿ ಮತ್ತು ಬಸವಾದಿ
ಪ್ರಮಥರಲ್ಲಿ ಪ್ರಾರ್ಥಿಸುತ್ತೇವೆ. ದಿನಾಂಕ : 15.12.2025,
ಮಧ್ಯಾಹ್ನ 12.00 ಗಂಟೆಯವರೆಗೆ ದಾವಣಗೆರೆಯ
ಸ್ವಗೃಹದಲ್ಲಿ ಮತ್ತು ಮಧ್ಯಾಹ್ನ 3.30 ಗಂಟೆಯವರೆಗೆ
ದಾವಣಗೆರೆಯ ಹೈಸ್ಕೂಲ್ ಮೈದಾನದಲ್ಲಿ
ಅಂತಿಮ ದರ್ಶನದ ವ್ಯವಸ್ಥೆ ಮಾಡಲಾಗಿದೆ ಮತ್ತು
ಸಂಜೆ 5.00 ಗಂಟೆಗೆ ದಾವಣಗೆರೆಯ ಕಲ್ಲೇಶ್ವರ ಮಿಲ್‌ನಲ್ಲಿ
ಅಂತಿಮ ವಿಧಿ ವಿಧಾನಗಳು ನೆರವೇರಲಿದೆ.

ಡಾ. ಶಾಮನೂರು ಶಿವಶಂಕರಪ್ಪ
ರಾಷ್ಟ್ರೀಯ ಅಧ್ಯಕ್ಷರು ಮತ್ತು ಶಾಸಕರು

ದುಃಖದಿಂದ ಪ್ರಕಟಿಸುತ್ತಿರುವವರು

ಶ್ರೀ ಈಶ್ವರ ಖಂಡ್ರೆ, ಮಾನ್ಯ ಸಚಿವರು
ಹಿರಿಯ ಉಪಾಧ್ಯಕ್ಷರು ಮತ್ತು
ಮಹಾಪ್ರಧಾನ ಕಾರ್ಯದರ್ಶಿಗಳು

ಶ್ರೀ ಶಂಕರ ಬಿದರಿ
ಅಧ್ಯಕ್ಷರು,
ಕರ್ನಾಟಕ ರಾಜ್ಯ ಘಟಕ

ಹಾಗೂ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ (ರಿ.)

...continued from previous page.

BID/OFFER PERIOD:
ANCHOR INVESTOR BIDDING DATE OPENED AND CLOSED ON: FRIDAY, DECEMBER 5, 2025
BID/OFFER OPENED ON: MONDAY, DECEMBER 8, 2025
BID/ OFFER CLOSED ON: WEDNESDAY, DECEMBER 10, 2025

This Offer was made in terms of Rule 19(2)(b) of the SCRR read with Regulation 31 of the SEBI ICDR Regulations. This Offer was made through the Book Building Process in compliance with Regulation 6(2) of the SEBI ICDR Regulations wherein not less than 75% of the Offer was made available for allocation on a proportionate basis to Qualified Institutional Buyers ("**QIBs**" and such portion the "**QIB Portion**") provided that our Company in consultation with the BRLMs, allocated 60% of the QIB Portion to Anchor Investors on a discretionary basis in accordance with the SEBI ICDR Regulations ("**Anchor Investor Portion**"), of which one-third was reserved for domestic Mutual Funds, subject to valid Bids having been received from domestic Mutual Funds at or above the Anchor Investor Allocation Price, in accordance with the SEBI ICDR Regulations. However, if the aggregate demand from Mutual Funds was less than 5% of the Net QIB Portion, the balance Equity Shares available for allocation in the Mutual Fund Portion would have been added to the remaining QIB Portion for proportionate allocation to QIBs. Further, not more than 15% of the Offer was made available for allocation to NIBs of which (a) one-third portion was reserved for Bidders with application size of more than ₹0.20 million and ₹1.00 million; and (b) two-thirds of the portion was reserved for Bidders with application size of more than ₹1.00 million, provided that the unsubscribed portion in either of such sub-categories could have been allocated to Bidders in other sub-category of the NIBs in accordance with SEBI ICDR Regulations and not more than 10% of the Offer was made available for allocation to Retail Individual Bidders **("RIB")** in accordance with the SEBI ICDR Regulations, subject to valid Bids being received from them at or above the Offer Price. All Bidders (except Anchor Investors) were required to mandatorily utilise the Application Supported by Blocked Amount ("**ASBA**") process by providing details of their respective ASBA accounts and UPI ID (in case of UPI Bidders (defined herein) using the UPI Mechanism), in which case the corresponding Bid Amounts was blocked by the SCSBs or under the UPI Mechanism, as applicable to participate in the Offer. Anchor Investors were not permitted to participate in the Anchor Investor Portion of the Offer through the ASBA process. For details, see "*Offer Procedure*" on page 404 of the Prospectus. The bidding for Anchor Investors opened and closed on Friday, December 5, 2025. The company received 33 Anchor Investor Application Forms from 21 Anchor Investors (including 9 domestic mutual funds through 21 Mutual Fund scheme) for 29,795,800 Equity Shares. The Anchor investor price was finalized at ₹ 195.00 per Equity Share. A total of 2,97,43,590 Equity Shares were allocated under the Anchor Investor Portion aggregating to ₹ 5,81,01,81,000.00.The Offer received 2,34,547 applications for 121,611,324 Equity Shares (including applications from Anchor Investors and prior to rejections) resulting in 1.84 subscription. The details of the applications received in the Offer from various categories are as under: (before rejections):

Sr. No.	Category	No of Applications received	No. of Equity Shares applied	No. of Equity Shares available for allocation (as per Prospectus)	No. of times Subscribed	Amount (₹)
A	Retail Individual Investors	2,29,838	2,11,15,764	66,09,686	3.19	4,11,82,38,828.00
B	Non-Institutional Investors - More than ₹0.20 million Up to ₹1.00 million	3,974	46,98,016	33,04,843	1.42	91,56,42,984.00
C	Non-Institutional Investors - Above ₹1.00 million	682	58,19,092	66,09,686	0.88	1,13,45,04,060.00
D	Qualified Institutional Bidders (excluding Anchors Investors)	20	6,01,82,652	1,98,29,061	3.04	11,73,56,17,140.00
E	Anchor Investors	33	2,97,95,800	2,97,43,590	1.00	5,81,01,81,000.00
	TOTAL	**2,34,547**	**12,16,11,324**	**6,60,96,866**	**1.84**	**23,71,41,84,012.00**

Final Demand

A summary of the final demand as at different Bid prices is as under:

Sr. No.	Bid Price	No. of Equity Shares	% to Total	Cumulative Total	Cumulative % to Total
1	185	3,76,352	0.33	3,76,352	0.33
2	186	25,156	0.02	4,01,508	0.35
3	187	18,544	0.02	4,20,052	0.37
4	188	18,620	0.02	4,38,672	0.39
5	189	13,300	0.01	4,51,972	0.40
6	190	1,39,308	0.12	5,91,280	0.52
7	191	10,032	0.01	6,01,312	0.53
8	192	13,300	0.01	6,14,612	0.54
9	193	29,184	0.03	6,43,796	0.57
10	194	35,796	0.03	6,79,592	0.60
11	195	7,84,42,260	69.14	7,91,21,852	69.74
12	CUT-OFF	3,43,27,452	30.26	11,34,49,304	100.00
	TOTAL	**11,34,49,304**	**100.00**		

The Basis of Allotment was finalized in consultation with the Designated Stock Exchange, being NSE on December 11, 2025.

A. Allotment to Retail Individual Investors (after rejections) (including ASBA Applications)

The Basis of Allotment to the Retail Individual Investors, who have bid at the Cut-Off Price or at the Offer Price of ₹ 195.00 per Equity Share, was finalized in consultation with the NSE. This category has been subscribed to the extent of 3.07 times. The total number of Equity Shares Allotted in Retail Portion is 6,609,686 Equity Shares to 86,969 successful Retail Individual Investors. The category-wise details of the Basis of Allotment are as under:

Sr. No.	Category	No. of Applications Received	% of Total	Total No. of Equity Shares Applied	% to Total	No. of Equity Shares Allotted per Bidder	Ratio	Total No. of Equity Shares Allotted
1	76	2,02,426	91.63	1,53,84,376	75.88	76	63:160	60,56,364
2	152	10,599	4.80	16,11,048	7.95	76	63:160	3,17,148
3	228	3,149	1.43	7,17,972	3.54	76	63:160	94,240
4	304	1,275	0.58	3,87,600	1.91	76	63:160	38,152
5	380	969	0.44	3,68,220	1.82	76	63:160	29,032
6	456	465	0.21	2,12,040	1.05	76	63:160	13,908
7	532	535	0.24	2,84,620	1.40	76	63:160	16,036
8	608	134	0.06	81,472	0.40	76	53:134	4,028
9	684	58	0.03	39,672	0.20	76	23:58	1,748
10	760	388	0.18	2,94,880	1.45	76	63:160	11,628
11	836	42	0.02	35,112	0.17	76	17:42	1,292
12	912	48	0.02	43,776	0.22	76	19:48	1,444
13	988	824	0.37	8,14,112	4.02	76	63:160	24,624
14	0	7280 Allottees from Serial no 2 to 13 Additional 1(one) share				1	42:7280	42
	TOTAL	**2,20,912**	**100.00**	**2,02,74,900**	**100.00**			**66,09,686**

B. Allotment to Non-Institutional Bidders (more than ₹0.20 million and up to ₹1.00 million) (After Rejections) (including ASBA Applications)

The Basis of Allotment to the Non-Institutional Investors (more than ₹0.20 million Up to ₹1.00 million), who have bid at the Offer Price of ₹ 195.00 per Equity Share or above, was finalized in consultation with NSE. This category has been subscribed to the extent of 1.05 times. The total number of Equity Shares allotted in this category is 43,14,621 Equity Shares to 3,852 successful applicants. The category-wise details of the Basis of Allotment are as under **(Sample)**:

Sr. No.	Category	No. of Applications Received	% of Total	Total No. of Equity Shares Applied	% to Total	No. of Equity Shares Allotted per Bidder	Ratio	Total No. of Equity Shares Allotted
1	1,064	3410	88.53	36,28,240	80.10	1,064	1:1	36,28,240
2	1,140	85	2.21	96,900	2.14	1,102	1:1	93,670
3	1,216	17	0.44	20,672	0.46	1,140	1:1	19,380
4	1,292	29	0.75	37,468	0.83	1,178	1:1	34,162
5	1,368	13	0.34	17,784	0.39	1,216	1:1	15,808
6	1,444	10	0.26	14,440	0.32	1,254	1:1	12,540
7	1,520	38	0.99	57,760	1.28	1,293	1:1	49,134
8	1,596	18	0.47	28,728	0.63	1,331	1:1	23,958
9	1,672	7	0.18	11,704	0.26	1,369	1:1	9,583
10	1,748	1	0.03	1,748	0.04	1,407	1:1	1,407
23	2,888	1	0.03	2,888	0.06	1,978	1:1	1,978
27	3,192	34	0.88	1,08,528	2.40	2,130	1:1	72,420
	3,192	1 ADDITIONAL SHARE FOR CATEGORY 3192				1	11:34	11
36	4,788	1	0.03	4,788	0.11	2,930	1:1	2,930
	TOTAL	**3,852**	**100.00**	**45,29,676**	**100.00**			**43,14,621**

*This includes spillover of 10,09,778 Equity Shares from Non-Institutional Investors (above Rs. 1,000,000/-) category.

C. Allotment to Non-Institutional Bidders (more than ₹1.00 million) (After Rejections) (including ASBA Applications)

The Basis of Allotment to the Non-Institutional Investors (more than ₹1.00 million), who have bid at the Offer Price of ₹ 195.00 per Equity Share or above, was finalized in consultation with NSE. This category has been subscribed to the extent of 0.85 times. The total number of Equity Shares allotted in this category is 55,99,908 Equity Shares to 640 successful applicants. The category-wise details of the Basis of Allotment are as under **(Sample)**:

Sr. No.	Category	No. of Applications Received	% of Total	Total No. of Equity Shares Applied	% to Total	No. of Equity Shares Allotted per Bidder	Ratio	Total No. of Equity Shares Allotted
1	5,168	560	87.50	28,94,080	51.68	5,168	1:1	28,94,080
2	5,244	10	1.56	52,440	0.94	5,244	1:1	52,440
3	5,320	17	2.66	90,440	1.62	5,320	1:1	90,440
4	5,700	1	0.16	5,700	0.10	5,700	1:1	5,700
5	6,232	1	0.16	6,232	0.11	6,232	1:1	6,232
6	6,384	1	0.16	6,384	0.11	6,384	1:1	6,384
7	6,460	2	0.31	12,920	0.23	6,460	1:1	12,920
8	7,220	1	0.16	7,220	0.13	7,220	1:1	7,220
9	7,600	2	0.31	15,200	0.27	7,600	1:1	15,200
10	7,676	1	0.16	7,676	0.14	7,676	1:1	7,676
11	7,752	1	0.16	7,752	0.14	7,752	1:1	7,752
12	8,664	1	0.16	8,664	0.15	8,664	1:1	8,664
13	9,500	1	0.16	9,500	0.17	9,500	1:1	9,500
26	23,104	3	0.47	69,312	1.24	23,104	1:1	69,312
27	25,460	1	0.16	25,460	0.45	25,460	1:1	25,460
34	86,640	1	0.16	86,640	1.55	86,640	1:1	86,640
35	1,09,744	1	0.16	1,09,744	1.96	1,09,744	1:1	1,09,744
	TOTAL	**640**	**100.00**	**55,99,908**	**100.00**			**55,99,908**

D. Allotment to QIBs

Allotment to QIBs, who have Bid at the Offer Price of ₹ 195.00 per Equity Share or above, has been done on a proportionate basis in consultation with the NSE. This category has been subscribed to the extent of 3.04 times of QIB Portion. As per the SEBI Regulations, Mutual Funds were Allotted 5% of the Equity Shares of QIB Portion available i.e., 9,91,454 Equity Shares and other QIBs and unsatisfied demand of Mutual Funds were Allotted the remaining available Equity Shares i.e., 18,837,607 Equity Shares on a proportionate basis. The total number of Equity Shares Allotted in the QIB Portion is 49,572,651 Equity Shares which were allotted to 20 successful QIB Investors. The category-wise details of the Basis of Allotment are as under:

Category	FI'S/BANK'S	MF'S	IC'S	NBFC'S	AIF	FPC	OTHERS	Total
Allotment	-	45,92,768	37,53,678	1,63,190	50,164	1,12,69,261	-	**1,98,29,061**

E. Allotment to Anchor Investors

The Company, in consultation with the BRLMs, have allocated 29,743,590 Equity Shares to 21 Anchor Investors (through 33 Applications) at the Anchor Investor Offer Price of ₹ 195.00 per Equity Share in accordance with the SEBI Regulations. This represents 60% of the QIB Portion.

Category	FI'S/BANK'S	MF'S	IC'S	NBFC'S	AIF	FII/FPC	OTHERS	Total
Allotment	-	1,61,54,332	38,46,284	-	26,65,854	70,77,120	-	**2,97,43,590**

The IPO committee of the Company on December 11, 2025 has taken on record the Basis of Allotment of Equity Shares approved by the Designated Stock Exchange, being NSE and has allotted the Equity Shares to various successful Bidders. The Allotment Advice-cum-Intimations and/or notices have been dispatched to the address of the investors as registered with the depositories. Further, the instructions to the Self Certified Syndicate Banks for unblocking of funds, transfer to Public Offer Account have been issued on December 11, 2025 and payment to non-Syndicate brokers have been issued on December 12, 2025. In case the same is not received within ten days, investors may contact the Registrar to the Offer at the address given below. The Equity Shares Allotted to the successful Allottees have been uploaded on December 12, 2025 for credit into the respective beneficiary accounts subject to validation of the account details with the depositories concerned. The Company has filed the Listing application with BSE and NSE on December 11, 2025. The Company has received listing and trading approval from BSE and NSE and the trading will commence on December 15, 2025.

Note: All capitalised terms used and not specifically defined herein shall have the same meaning as ascribed to them in the Prospectus.

INVESTORS PLEASE NOTE

The details of the allotment made will be hosted on the website of the Registrar to the Offer, MUFG Intime India Private Limited *(Formerly Link Intime India Private Limited)* at https://.in.mpms.mufg.com/

All future correspondence in this regard may kindly be addressed to the Registrar to the Offer quoting full name of the First/ sole Bidder, Bid cum Application Form number, Bidder DP ID, Client ID, PAN, date of submission of Bid cum Application Form, address of the Bidder, number of Equity Shares applied for, the name and address of the Designated Intermediary where the Bid cum Application Form was submitted by the Bidder and a copy of the Acknowledgment Slip received from the Designated Intermediary at the address given below:

MUFG MUFG Intime

MUFG Intime India Private Limited
(Formerly Link Intime India Private Limited)
C-101, Embassy 247, L.B.S. Marg, Vikhroli (West),
Mumbai - 400 083, Maharashtra, India.
Tel: +91 91 810 811 4949;
E-mail: wakefitinnovations.ipo@in.mpms.mufg.com
Website: https://.in.mpms.mufg.com/
Investor Grievance E-mail: wakefitinnovations.ipo@in.mpms.mufg.com
Contact Person: Shanti Gopalkrishnan
SEBI Registration No: INR000004058

For **WAKEFIT INNOVATIONS LIMITED**
On behalf of the Board of Directors
Sd/-
Surbhi Sharma
Company Secretary and Compliance Officer

Place: Bengaluru, Karnataka
Date: December 12, 2025

THE LEVEL OF SUBSCRIPTION SHOULD NOT BE TAKEN TO BE INDICATIVE OF EITHER THE MARKET PRICE OF THE EQUITY SHARES ON LISTING OR THE BUSINESS PROSPECTS OF WAKEFIT INNOVATIONS LIMITED.

WAKEFIT INNOVATIONS LIMITED has filed the Prospectus dated December 10, 2025 with the RoC. The Prospectus is available on the website of SEBI at www.sebi.gov.in, as well as on the websites of the Stock Exchanges i.e. BSE and NSE at www.bseindia.com and www.nseindia.com, respectively, on the website of the Company at www.wakefit.co and on the websites of the Book Running Lead Managers ("**BRLMs**"), i.e. Axis Capital Limited, IIFL Capital Services Limited *(formerly known as IIFL Securities Limited)* and Nomura Financial Advisory and Securities (India) Private Limited at www.axiscapital.co.in, www.iiflcapital.com and http://www.nomuraholdings.com/company/group/asia/india/index.html, respectively. Any potential investors should note that investment in equity shares involves a high degree of risk and for details relating to such risk, see "*Risk Factors*" on page 33 of the Prospectus filed with SEBI and the details set out in the Prospectus, when filed.

The Equity Shares offered in the Offer have not been and will not be registered under the U.S. Securities Act of 1933, as amended ("**U.S. Securities Act**"), or any state securities laws in the United States, and unless so registered may not be offered or sold within the United States, except pursuant to an exemption from, or in a transaction not subject to, the registration requirements of the U.S. Securities Act and applicable state securities laws. Accordingly, such Equity Shares are being offered and sold outside of the United States in offshore transactions in reliance on Regulation S under the U.S. Securities Act and the applicable laws of the jurisdiction where those offers and sales occur.

Adfactors 697/25

ಸೋಲು, ಗೆಲುವಿನ ಬಗ್ಗೆ ಕಾಂಗ್ರೆಸಿಗರು ಯೋಚಿಸುವುದಿಲ್ಲ

ಜನರ ಮತದಾನದ ಹಕ್ಕು ಉಳಿಸಲು ಹೋರಾಟ: ಡಿಕೆ

ದೆಹಲಿ: ದೇಶದ 140 ಕೋಟಿ ಜನರ ಮತದಾನದ ಹಕ್ಕು ಉಳಿಸಲು ನಾವು ಮತಕಳ್ಳತನದ ವಿರುದ್ಧ ಹೋರಾಟ ಮಾಡುತ್ತಿದ್ದೇವೆ. ಇದರಲ್ಲಿ ಯಾವುದೇ ರಾಜಕೀಯ ಉದ್ದೇಶವಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ದೆಹಲಿಯ ಕರ್ನಾಟಕ ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ರಾಹುಲ್ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರ ನಾಯಕತ್ವದಲ್ಲಿ ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ನಾವು ಮತಕಳ್ಳತನ ವಿರುದ್ಧದ ಹೋರಾಟ ಆರಂಭಿಸಿದ್ದೆವು. ಈಗ ರಾಮ ಲೀಲಾ ಮೈದಾನದಲ್ಲಿ ಪ್ರತಿಭಟನೆ ಮಾಡುತ್ತಿದ್ದೇವೆ. ಈ ದೇಶದಲ್ಲಿ ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಸಬೇಕು ಎಂಬ ಸಂದೇಶ ನೀಡಲಾಗುತ್ತಿದೆ. ದೇಶದ ಚುನಾವಣೆಗಳು ಈಗ ನ್ಯಾಯಸಮ್ಮತವಾಗಿಲ್ಲ. ಮತಕಳ್ಳ ತನ ಮಾಡಲಾಗುತ್ತಿದೆ. ಇದಕ್ಕೆ ಸಾವಿರಾರು ಉದಾ ಹರಣೆಗಳಿವೆ. ರಾಹುಲ್ ಗಾಂಧಿ ಅವರು ಈ ವಿಚಾರ ವಾಗಿ ಸಂಸತ್ತಿನಲ್ಲಿ ಧ್ವನಿ ಎತ್ತಿದ್ದಾರೆ. ಇನ್ನು ಹಲವು ಬಾರಿ ಸುದ್ದಿಗೋಷ್ಠಿ ಮೂಲಕ ದಾಖಲೆಗಳನ್ನು ಬಹಿರಂಗ ಗೊಳಿಸಿದ್ದಾರೆ. ಇಷ್ಟಾದರೂ ಚುನಾವಣಾ ಆಯೋಗ ದಿಂದ ಸರಿಯಾದ ಉತ್ತರ ಸಿಗುತ್ತಿಲ್ಲ. ಹೀಗಾಗಿ ಸಾಂವಿ ಧಾನಿಕ ಸಂಸ್ಥೆಗಳ ದುರ್ಬಳಕೆ ಬಗ್ಗೆ ಜನರಿಗೆ ಅರಿವು ಮೂಡಿಸಲು ನಾವು ಬೀದಿಗಿಳಿದು ಹೋರಾಟ ಮಾಡಿದ್ದೇವೆ ಎಂದರು.

ರಾಜ್ಯದ ಸುಮಾರು 4 ಸಾವಿರ ಕಾರ್ಯಕರ್ತರು ಭಾಗಿ: ದೆಹಲಿಯ ಪ್ರತಿಭಟನೆಗೆ ರಾಜ್ಯದಿಂದ ಆಗಮಿ ಸುವ 1500 ಕಾರ್ಯಕರ್ತರಿಗೆ ವಾಸ್ತವ್ಯದ ವ್ಯವಸ್ಥೆ ಕಲ್ಪಿಸಲಾಗಿತ್ತು. 2 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಹಾಗೂ ನಾಯಕರು ತಮ್ಮ ವ್ಯವಸ್ಥೆ ತಾವೇ ಮಾಡಿ ಕೊಂಡಿದ್ದಾರೆ. ಕೆಲವರು ವಿಮಾನ, ಮತ್ತೆ ಕೆಲವರು ರೈಲಲ್ಲಿ ಆಗಮಿಸಿದ್ದಾರೆ. ಸುಮಾರು 3500 ರಿಂದ 4000 ಜನ ಪ್ರತಿಭಟನೆಗೆ ಬಂದಿದ್ದರು. ಮತಕಳ್ಳತನ ವಿರುದ್ಧ ರಾಜ್ಯದಲ್ಲಿ ನಡೆದ ಸಹಿಸಂಗ್ರಹ ಅಭಿಯಾನದಲ್ಲಿ 1.42 ಕೋಟಿ ಸಹಿ ಸಂಗ್ರಹ ಮಾಡಲಾಗಿದೆ. ಇಲ್ಲಿ ಸೇರಿರುವ ನಾಯಕರು, ಕಾರ್ಯಕರ್ತರೇ ಈ ಹೋರಾಟದ ಉತ್ಸಾಹಕ್ಕೆ ಸಾಕ್ಷಿ. ಇಲ್ಲಿರುವ ಪ್ರತಿಯೊಬ್ಬರೂ ದೇಶ ಹಾಗೂ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಉಳಿಸಿ ಕೊಳ್ಳಬೇಕು, ಮತದಾನದ ಹಕ್ಕು ಕಾಪಾಡಬೇಕು ಎಂದು ಬಂದಿದ್ದಾರೆ ಎಂದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ನೆಹರು ಸ್ಟ್ರೀಮ್ ಲ್ಯಾಬ್ ಸ್ಥಾಪನೆ

ಬೆಂಗಳೂರು: ರಾಜ್ಯದ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಕ್ರಾಂತಿಕಾರಿ ಬದಲಾವಣೆ ತರುವ ನಿಟ್ಟಿನಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ 41 ನೆಹರು ಸ್ಟ್ರೀಮ್ ಲ್ಯಾಬ್ ಸ್ಥಾಪಿಸುವುದಾಗಿ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ತಿಳಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಸಹಯೋಗದೊಂದಿಗೆ ಜಾರಿಗೊಳ್ಳುತ್ತಿರುವ ಈ ಯೋಜನೆಯು, ಸಾಂಪ್ರದಾಯಿಕ ವಿಜ್ಞಾನ ಕಲಿಕೆಗಿಂತ ಒಂದು ಹೆಜ್ಜೆ ಮುಂದೆ ಹೋಗಿ, ಭವಿಷ್ಯದ ಅತ್ಯಾಧುನಿಕ ವಿಜ್ಞಾನ ಮತ್ತು ಪರಿಸರ ಸುಸ್ಥಿರತೆ ಒಳಗೊಂಡ ವಿಶಿಷ್ಟ ಪಠ್ಯಕ್ರಮವನ್ನು ಆ ಭಾಗದ ವಿದ್ಯಾರ್ಥಿಗಳಿಗೆ ಪರಿಚಯಿಸಲಿದೆ. 'ಸ್ಟ್ರೀಮ್' ಪದದ ವ್ಯಾಖ್ಯಾನವನ್ನು ಜಾಗತಿಕ ವೈಜ್ಞಾನಿಕ ಪ್ರಗತಿ ಮತ್ತು ಸ್ಥಳೀಯ ಪರಿಸರ ಅಗತ್ಯಗಳಿಗೆ ಅನುಗುಣವಾಗಿ ರೂಪಿಸಲಾಗಿದ್ದು, ಇದು ವಿಜ್ಞಾನ, ತಂತ್ರಜ್ಞಾನ, ರೊಬೊಟಿಕ್ಸ್ , ಪರಿಸರ ವಿಜ್ಞಾನ, ಖಗೋಳಶಾಸ್ತ್ರ ಮತ್ತು ಗಣಿತ ಒಳಗೊಂಡಿರುತ್ತದೆ ಎಂದರು.

ಇದೇ ಮೊದಲ ಬಾರಿಗೆ ಶಾಲಾ ಮಟ್ಟದಲ್ಲಿಯೇ ವಿದ್ಯಾರ್ಥಿಗಳಿಗೆ 'ಕ್ವಾಂಟಮ್ ಫಿಸಿಕ್ಸ್‌ನ ಮೂಲ ಪರಿಕಲ್ಪನೆಗಳನ್ನು ಪರಿಚಯಿಸಲಾಗುತ್ತಿದೆ. ಇದು ಬ್ರಹ್ಮಾಂಡದ ಮೂಲ ಸ್ವರೂಪದ ಬಗ್ಗೆ ಮಕ್ಕಳಲ್ಲಿ ಕುತೂಹಲ ಮೂಡಿಸಲಿದೆ. ಅದೇ ಸಮಯದಲ್ಲಿ, ನಾವು ಪರಿಸರ ವಿಜ್ಞಾನಕ್ಕೆ ಹೆಚ್ಚಿನ ಒತ್ತು ನೀಡುತ್ತಿದ್ದೇವೆ. ಇದು ದೇಶದಲ್ಲೇ ಮೊದಲ ಬಾರಿಗೆ ಜಾರಿಯಾಗುತ್ತಿರುವ ವಿನೂತನ ಉಪಕ್ರಮವಾಗಿದ್ದು, ಇದರಲ್ಲಿ ಮಕ್ಕಳು ತರಗತಿ ಕೊಠಡಿಯಿಂದ ಹೊರಬಂದು, ತಮ್ಮ ಸುತ್ತಮುತ್ತಲಿನ ಸ್ಥಳೀಯ ಸಸ್ಯ ಮತ್ತು ಪ್ರಾಣಿ ಸಂಕುಲದ ಬಗ್ಗೆ ಪ್ರಾಯೋಗಿಕ ಜ್ಞಾನ ಪಡೆಯಲಿದ್ದಾರೆ. ಎಳೆಯ ವಯಸ್ಸಿನಲ್ಲೇ ಮಕ್ಕಳ ಮನಸ್ಸಿನಲ್ಲಿ ಸುಸ್ಥಿರತೆ ಮತ್ತು ಪರಿಸರ ಕಾಳಜಿಯನ್ನು ಬಿತ್ತುವುದು ನಮ್ಮ ಗುರಿಯಾಗಿದೆ ಎಂದರು.

ಕೆಕೆಆರ್‌ಡಿಬಿ ಅಧ್ಯಕ್ಷರಾದ ಡಾ. ಅಜಯ್ ಧರ್ಮಸಿಂಗ್ ಅವರು, ನಾವು ಮಕ್ಕಳನ್ನು ಎಳೆಯ ವಯಸ್ಸಿನಲ್ಲೇ ಭವಿಷ್ಯಕ್ಕೆ ಸಿದ್ಧಗೊಳಿಸಬೇಕು. ಮೊದಲ ಹಂತದಲ್ಲಿ, ಈ ಭಾಗದ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದರಂತೆ ಒಟ್ಟು 41 ಶಾಲೆಗಳಲ್ಲಿ ಈ ಲ್ಯಾಬ್‌ಗಳನ್ನು ಪ್ರಾರಂಭಿಸುತ್ತಿದ್ದೇವೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳಲ್ಲೂ ನಗರದ ವಿದ್ಯಾರ್ಥಿಗಳಿಗೆ ಸಮಾನವಾದ ವೈಜ್ಞಾನಿಕ ಮನೋಭಾವ ಮತ್ತು ಅವಕಾಶಗಳು ದೊರೆಯಬೇಕು ಎಂಬುದು ನಮ್ಮ ಆಶಯ ಎಂದರು.

ಮುಖ್ಯಾಂಶಗಳು

- ಒಟ್ಟು 3 ಕೋಟಿ ವೆಚ್ಚದ ಈ ಯೋಜನೆಯು ಸಮಗ್ರ ಪಠ್ಯಕ್ರಮ ಒಳಗೊಂಡಿದೆ
- ರೊಬೊಟಿಕ್ಸ್ : ಆಟೊಮೇಷನ್ ಮತ್ತು ಕೋಡಿಂಗ್ ಕೌಶಲ್ಯಗಳು.
- ಪರಿಸರ ವಿಜ್ಞಾನ: (ಪ್ರಮುಖ ಆದ್ಯತೆ) ಸ್ಥಳೀಯ ಜೀವವೈವಿಧ್ಯ (ಸಸ್ಯ/ಪ್ರಾಣಿ) ಮತ್ತು ಸುಸ್ಥಿರತೆಯ ಬಗ್ಗೆ ಪ್ರಾಯೋಗಿಕ ಕ್ಷೇತ್ರ ಅಧ್ಯಯನ.
- ಖಗೋಳಶಾಸ್ತ್ರ: ಬಾಹ್ಯಾಕಾಶ ಮತ್ತು ವಿಶ್ವದ ಅರಿವು.
- ಗಣಿತ: ಸುಧಾರಿತ ಗಣಿತದ ಸಮಸ್ಯೆಗಳ ಪರಿಹಾರ.
- ಕ್ವಾಂಟಮ್ ಫಿಸಿಕ್ಸ್ : ಮೂಲಭೂತ ಪರಿಕಲ್ಪನೆಗಳ ಪರಿಚಯ (ವಿಶೇಷ ಸೇರ್ಪಡೆ)



ನಗರದ ಮೈಸೂರು ರಸ್ತೆಯ ಡಿವಿನಿಟಿ ಮಾಲ್ ಮುಂದೆ ಕ್ರಿಸ್‌ಮಸ್ ಹಿನ್ನೆಲೆ ವಿದ್ಯುತ್ ದೀಪಾಲಂಕಾರದಲ್ಲಿ ಅರಳಿರುವ ಜಿಂಕೆಯ ಕಲಾಕೃತಿ.

ಹೊಸ ವರ್ಷ, ಕ್ರಿಸ್‌ಮಸ್‌ಗೆ ವಿಶೇಷ ರೈಲು

ಬೆಂಗಳೂರು: ಹೊಸ ವರ್ಷ ಹಾಗೂ ಕ್ರಿಸ್‌ಮಸ್ ಹಬ್ಬದ ಆಚರಣೆಯ ಹಿನ್ನೆಲೆ ಪ್ರಯಾಣಿಕರ ಅನುಕೂಲಕ್ಕಾಗಿ ನೈಋತ್ಯ ರೈಲ್ವೆಯು ವಿಶೇಷ ರೈಲುಗಳ ವ್ಯವಸ್ಥೆ ಘೋಷಿಸಿದೆ.

ಹಬ್ಬದ ದಿನಗಳಲ್ಲಿ ಹೆಚ್ಚಿನ ಪ್ರಯಾಣದ ಒತ್ತಡ ನಿಯಂತ್ರಿಸಲು ಡಿಸೆಂಬರ್ 24ರಂದು ಹುಬ್ಬಳ್ಳಿ ಹಾಗೂ ಯಶವಂತಪುರ ವಿಜಯಪುರ ಮಾರ್ಗದಲ್ಲಿ ವಿಶೇಷ ರೈಲುಗಳ ಸಂಚಾರ ನಡೆಸಲಾಗುತ್ತಿದೆ.

ರೈಲು ಸಂಖ್ಯೆ 07379 ಡಿಸೆಂಬರ್ 24ರಂದು ಮಧ್ಯಾಹ್ನ 12ಕ್ಕೆ ಹುಬ್ಬಳ್ಳಿಯಿಂದ ಹೊರಟು ಹಾವೇರಿ, ಹರಿಹರ, ದಾವಣಗೆರೆ, ಅರಸೀಕೆರೆ ಮತ್ತು ತುಮಕೂರು ಮೂಲಕ ರಾತ್ರಿ 8.30ಕ್ಕೆ ಯಶವಂತಪುರ ತಲುಪಲಿದ್ದು, ಆದೇ ದಿನ ಯಶವಂತಪುರದಿಂದ ರೈಲು ಸಂಖ್ಯೆ 06277 ರಾತ್ರಿ 9.50ಕ್ಕೆ ಪ್ರಯಾಣ ಆರಂಭಿಸಿ ತುಮಕೂರು, ಅರಸೀಕೆರೆ, ದಾವಣಗೆರೆ, ಹರಿಹರ, ಬಾದಾಮಿ, ಬಾಗಲಕೋಟೆ ಹಾಗೂ ಆಲಮಟ್ಟಿ ಮಾರ್ಗವಾಗಿ ಬೆಳಗ್ಗೆ 9ಕ್ಕೆ ವಿಜಯಪುರ ತಲುಪಲಿದೆ.

ಈ ವಿಶೇಷ ಸೇವೆ ಉತ್ತರ ಕರ್ನಾಟಕ ಹಾಗೂ ಬೆಂಗಳೂರಿನ ನಡುವೆ ಪ್ರಯಾಣಿಸುವವರಿಗೆ ಅನುಕೂಲವಾಗಲಿದೆ. ತುಮಕೂರು, ಮಲ್ಲಸಂದ್ರ ವಿಭಾಗದಲ್ಲಿ ಅಗತ್ಯ ಎಂಜಿನಿಯರಿಂಗ್ ಕಾಮಗಾರಿಗಳ ಹಿನ್ನೆಲೆ ಕೆಲ ಮೆಮು ಹಾಗೂ ಎಕ್ಸ್‌ಪ್ರೆಸ್ ರೈಲುಗಳು ನಿಗದಿತ ಗಮ್ಯಸ್ಥಾನ ತಲುಪದೇ ಮಧ್ಯದಲ್ಲೇ ಅಂತ್ಯಗೊಳ್ಳಲಿದ್ದು, ಕೆಲವು ರೈಲುಗಳು ಬದಲಿ ನಿಲ್ದಾಣಗಳಿಂದ ಪ್ರಯಾಣ ಆರಂಭಿಸಲಿವೆ. ಇನ್ನೂ ಕೆಲವು ಆಯ್ದ ರೈಲುಗಳ ಸಂಚಾರವನ್ನು ಡಿ. 17 ಮತ್ತು 24ರಂದು ಸಂಪೂರ್ಣವಾಗಿ ರದ್ದುಪಡಿಸಲಾಗಿದೆ. ಪ್ರಯಾಣಿಕರು ಪ್ರಯಾಣಕ್ಕೂ ಮುನ್ನ ರೈಲುಗಳ ಸಮಯ ಹಾಗೂ ಮಾರ್ಗಗಳ ಬಗ್ಗೆ ಅಧಿಕೃತ ಮಾಹಿತಿ ಪಡೆದು ಯೋಜನೆ ರೂಪಿಸಿಕೊಳ್ಳುವಂತೆ ರೈಲ್ವೆ ಇಲಾಖೆ ಮನವಿ ಮಾಡಿದೆ.

ಸಮಾಚಾರ ಸಣ್ಣದಲ್ಲ

ಅನುಮಾನಾಸ್ಪದ ಪಟ್ಟಿಗೆ ದೀಪಕ್ ಹೂಡಾ ಸೇರ್ಪಡೆ

ದೆಹಲಿ: ಬಹುನಿರೀಕ್ಷಿತ ಐಪಿಎಲ್-2026ರ ಮಿನಿ ಹರಾಜಿಗೆ ಇನ್ನೊಂದು ದಿನ ಮಾತ್ರ ಬಾಕಿ ಉಳಿದಿದ್ದು, ಇದೇ ಮಂಗಳವಾರ ದುಬೈನಲ್ಲಿ ಹರಾಜು ನಡೆಯಲಿದೆ. 19ನೇ ಆವೃತ್ತಿಯ ಟೂರ್ನಮೆಂಟ್‌ಗೆ ಮುನ್ನ ತಮ್ಮ ಅತ್ಯುತ್ತಮ ಆಟಗಾರರನ್ನು ಆಯ್ಕೆ ಮಾಡಿಕೊಳ್ಳಲು 10 ಫ್ರಾಂಚೈಸಿಗಳು ಸರ್ವ ಪ್ರಯತ್ನಗಳನ್ನು ಮಾಡುತ್ತಿವೆ. ಆದರೆ ಹರಾಜಿನ ಮುನ್ನ ದೀಪಕ್ ಹೂಡಾಗೆ ಭಾರೀ ಹಿನ್ನಡೆಯಾಗಿದೆ. ಬಿಸಿಸಿಐ ಅನುಮಾನಾಸ್ಪದ ಬೌಲರ್‌ಗಳ ಪಟ್ಟಿಯಲ್ಲಿ ಅವರನ್ನು ಸೇರಿಸಿದೆ. ಅವರ ಬೌಲಿಂಗ್ ಶೈಲಿಯ ಕುರಿತು ಬಿಸಿಸಿಐ, ಎಲ್ಲಾ ಫ್ರಾಂಚೈಸಿಗಳಿಗೂ ಮಾಹಿತಿಯನ್ನೂ ಕೂಡ ನೀಡಿದೆ. ಸ್ಪಿನ್ ಆಲ್‌ರೌಂಡರ್ ಆಗಿರುವ ಅವರು ಒಂದೊಮ್ಮೆ ಹರಾಜಿನಲ್ಲಿ ಯಾವುದೇ ಫ್ರಾಂಚೈಸಿ ಪಾಲಾದರೂ ಕೇವಲ ಬ್ಯಾಟರ್ ಆಗಿ ಮಾತ್ರ ಆಡಬೇಕಿದೆ. ಈ ಹಿಂದಿನ ಋತುವಿನಲ್ಲಿ ಐಪಿಎಲ್‌ನಲ್ಲಿ ಚೆನ್ನೈ ಫ್ರಾಂಚೈಸಿ ಪ್ರತಿನಿಧೀಕರಿಸಿ, 7 ಪಂದ್ಯಗಳಲ್ಲಿ ಆಡಿದ್ದರು. ಆದರೆ ಅವರು ಆಡಿದ ಯಾವುದೇ ಪಂದ್ಯಗಳಲ್ಲಿ ಬೌಲಿಂಗ್ ಮಾಡಿರಲಿಲ್ಲ.

ಮ್ಯಾನೇಜರ್ ಪ್ರಮಾದ: ಕ್ಯಾಮರೂನ್ ಗ್ರೀನ್ ಸ್ಪಷ್ಟನೆ

ದುಬೈ: ಐಪಿಎಲ್ 19ನೇ ಆವೃತ್ತಿಯ ಮಿನಿ ಹರಾಜಿನಲ್ಲಿ ಗರಿಷ್ಠ ಬೆಲೆ ಪಡೆಯಲಿದ್ದಾರೆ ಎಂದು ಬಿಂಬಿತವಾಗಿರುವ ಆಸ್ಟ್ರೇಲಿಯಾದ ಕ್ಯಾಮರೂನ್ ಗ್ರೀನ್ ತಮ್ಮ ನೋಂದಣಿ ವೇಳೆ ಆಗಿರುವ ಪ್ರಮಾದವನ್ನು ತಿಳಿಸಿದ್ದಾರೆ.



ಹರಾಜಿಗಾಗಿ ನೋಂದಾಯಿಸಿರುವ ಅವರ ಮ್ಯಾನೇಜರ್ ಗ್ರೀನ್‌ರನ್ನು ಬ್ಯಾಟರ್ ಎಂದು ಹೆಸರಿಸಿದ್ದಾರೆ, ಆದರೆ ಅವರು ಬೌಲಿಂಗ್ ಮಾಡಲು ಸಿದ್ಧರಿರುವುದಾಗಿ ತಿಳಿಸಿದ್ದಾರೆ. ತಮ್ಮ ಮ್ಯಾನೇಜರ್ ಮಾಡಿದ ತಪ್ಪಿನಿಂದಾಗಿ, ಐಪಿಎಲ್‌ಮಿನಿ ಹರಾಜಿನಲ್ಲಿ ತಪ್ಪಾಗಿ ಬ್ಯಾಟ್ಸ್‌ಮನ್ ಆಗಿ ನೋಂದಾಯಿಸಿಕೊಳ್ಳಲಾಗಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಆಸ್ಟ್ರೇಲಿಯಾದ ಆಲ್‌ರೌಂಡರ್ ಬೆನ್ನು ಶಸ್ತ್ರಚಿಕಿತ್ಸೆಯಿಂದಾಗಿ 2025ರ ಐಪಿಎಲ್ ಆವೃತ್ತಿಯನ್ನು ತಪ್ಪಿಸಿಕೊಂಡಿದ್ದರು. ಆದರೆ 26 ವರ್ಷದ ಗ್ರೀನ್ ಜೂನ್‌ನಲ್ಲಿ ತಜ್ಞ ಬ್ಯಾಟ್ಸ್‌ಮನ್ ಆಗಿ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಮರಳಿದ್ದರು. ಆರಂಭದಲ್ಲಿ ಅವರು ಬ್ಯಾಟಿಂಗ್ ಮಾತ್ರ ಮಾಡುತ್ತಿದ್ದರು, ಇದೀಗ ಅವರಿಗೆ ಬೌಲಿಂಗ್ ಮಾಡಲು ಅನುಮತಿ ನೀಡಲಾಗಿದ್ದು, ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ನಡುವಿನ ನಡೆಯುತ್ತಿರುವ ಆ್ಯಶಸ್ ಸರಣಿಯಲ್ಲಿ ಬೌಲಿಂಗ್ ಮಾಡುತ್ತಿದ್ದಾರೆ.

3ನೇ ಟಿ20 ಪಂದ್ಯ | ಮತ್ತೆ ಟೀಮ್ ಇಂಡಿಯಾ ಸಂಘಟಿತ ಪ್ರಯತ್ನ | ಅರ್ಶದೀಪ್‌ಗೆ ಪಂದ್ಯಶ್ರೇಷ್ಠ ಪ್ರಶಸ್ತಿ

ದ.ಆಫ್ರಿಕಾ ವಿರುದ್ಧ ಭಾರತಕ್ಕೆ ಸರಣಿ ಮುನ್ನಡೆ

ಧರ್ಮಶಾಲಾ: ಇಲ್ಲಿನ ಹಿಮಾಚಲ ಪ್ರದೇಶ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ನಡೆದ 3ನೇ ಟಿ20 ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಭಾರತವು 7 ವಿಕೆಟ್‌ಗಳ ಸುಲಭ ಜಯ ಸಾಧಿಸಿ ಸರಣಿಯಲ್ಲಿ 2-1 ಅಂತರದ ಮುನ್ನಡೆ ಸಾಧಿಸಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ ತಂಡ 20 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು ಕೇವಲ 117 ರನ್‌ಗಳ ಸಾಧಾರಣ ಮೊತ್ತ ದಾಖಲಿಸಿತು. 118 ರನ್‌ಗಳ ಗುರಿಯನ್ನು ಬೆಂಬತ್ತಿದ ಭಾರತ ಕೇವಲ 15.5 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು ಗೆಲುವು ದಾಖಲಿಸಿತು.

ಟೀಮ್ ಇಂಡಿಯಾಗೆ ಅಭಿಷೇಕ್ ಶರ್ಮಾ ಹಾಗೂ ಶುಭ್‌ಮನ್ ಗಿಲ್ ಭರ್ಜರಿ ಆರಂಭ ನೀಡಿದರು. ಈ ಜೋಡಿ 5.2 ಓವರ್‌ಗಳಲ್ಲಿ 60 ರನ್ ಕಲೆ ಹಾಕಿತು. ಅಭಿಷೇಕ್ ಶರ್ಮಾ ಕೇವಲ 18 ಎಸೆತಗಳಲ್ಲಿ ತಲಾ 3 ಬೌಂಡರಿ, 3 ಸಿಕ್ಸರ್‌ಗಳ ಸಹಿತ 35 ರನ್ ಗಳಿಸಿ ಔಟ್ ಆದರು.

ಫಾರ್ಮ್ ಸಮಸ್ಯೆ ಎದುರಿಸುತ್ತಿರುವ ಉಪನಾಯಕ ಶುಭ್‌ಮನ್ ಗಿಲ್ 28 ಎಸೆತಗಳಲ್ಲಿ 5 ಬೌಂಡರಿಗಳ ಸಹಿತ 28 ರನ್ ಗಳಿಸಿ ಔಟ್ ಆದರು. ನಂತರ ಬಂದ ನಾಯಕ ಸೂರ್ಯಕುಮಾರ್ ಯಾದವ್ 11 ಎಸೆತಗಳಲ್ಲಿ 2 ಬೌಂಡರಿ ಸಹಿತ 12 ರನ್ ಗಳಿಸಿ ಮತ್ತೊಮ್ಮೆ ವೈಫಲ್ಯ ಕಂಡರು. ತಿಲಕ್ ವರ್ಮಾ 26 ರನ್ ಹಾಗೂ ಶಿವಂ ದುಬೆ 10 ರನ್ ಗಳಿಸಿ ಅಜೇಯರಾಗುಳಿದರು.

ದಕ್ಷಿಣ ಆಫ್ರಿಕಾ ಪರ ಕಾರ್ಬಿನ್ ಬಾಷ್, ಮಾರ್ಕೊ ಜಾನ್ಸನ್ ಹಾಗೂ ಲುಂಗು ಎನ್‌ಗಿಡಿ ತಲಾ 1 ವಿಕೆಟ್ ಪಡೆದರು.

ಇದಕ್ಕೂ ಮುನ್ನ ಟಾಸ್ ಸೋತು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ ತಂಡ ಸಂಪೂರ್ಣ ಬ್ಯಾಟಿಂಗ್ ವೈಫಲ್ಯ ಅನುಭವಿಸಿ ಕೇವಲ 117ಕ್ಕೆ ಆಲೌಟ್ ಆಯಿತು. ಆರಂಭಿಕರಾದ ರೀಜಾ ಹೆಂಡ್ರಿಕ್ಸ್ (0) ಮತ್ತು ಕ್ವಿಂಟನ್ ಡಿಕಾಕ್ 1 ರನ್ ಹಾಗೂ ಸ್ಫೋಟಕ ಬ್ಯಾಟರ್ ಡೆವಾಲ್ಡ್ ಬ್ರೆವಿಸ್ (2) ಕೇವಲ 7 ರನ್ ಗಳಿಸುವಷ್ಟರಲ್ಲಿ ಔಟ್ ಆದರು.

ನಂತರ ಬಂದ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳೂ ಭಾರತೀಯ ಬೌಲರ್‌ಗಳ ದಾಳಿಯನ್ನು ಎದುರಿಸುವಲ್ಲಿ ವಿಫಲರಾದರು. ಟ್ರಿಸ್ಟಾನ್ ಸ್ಟಬ್ಸ್ (9), ಕಾರ್ಬಿನ್ ಬಾಷ್ (4) ಕ್ರಮವಾಗಿ ಪಾಂಡ್ಯ ಹಾಗೂ ಶಿವಂ ದುಬೆಗೆ ವಿಕೆಟ್ ಒಪ್ಪಿಸಿದರು. 2ನೇ ಟಿ20 ಪಂದ್ಯದಲ್ಲಿ 16 ಎಸೆತಗಳಲ್ಲಿ ಅಜೇಯ 30 ರನ್ ಸಿಡಿಸಿದ್ದ ಡೊನೊವನ್ ಫೆರ್ರೈರಾ 15 ಎಸೆತಗಳಲ್ಲಿ 20 ರನ್ ಗಳಿಸಿ ಔಟ್ ಆದರು. ಆಲ್‌ರೌಂಡರ್ ಮಾರ್ಕೊ ಜಾನ್ಸನ್ 2 ರನ್ ಗಳಿಸಿ ಕ್ಲೀನ್ ಬೌಲ್ಡ್ ಮಾಡಿದರು.

ಆದರೆ ಮೊದಲ ಓವರ್‌ನಲ್ಲಿ ಮೈದಾನದಕ್ಕೆ ಬಂದಿದ್ದ ಐಡೆನ್ ಮಾರ್ಕ್ರಮ್ 19ನೇ ಓವರ್‌ನಲ್ಲಿ ವಿಕೆಟ್ ಒಪ್ಪಿಸಿದರು. ಮಾರ್ಕ್ರಮ್ 46 ಎಸೆತಗಳಲ್ಲಿ 6 ಬೌಂಡರಿ, 2 ಸಿಕ್ಸರ್‌ಗಳ ಸಹಿತ 61 ರನ್ ಗಳಿಸಿ ಗರಿಷ್ಠ ಸ್ಕೋರರ್ ಎನಿಸಿಕೊಂಡರು. ಎನ್ರಿಚ್ ನಾರ್ಕಿಯಾ 12, ಒಟ್ನೀಲ್ 1 ರನ್ ಗಳಿಸಿದರು.

ಟೀಮ್ ಇಂಡಿಯಾ ಬೌಲಿಂಗ್ ದಾಳಿ: ಭಾರತದ ಪರ ಪ್ರಚಂಡ ಬೌಲಿಂಗ್ ದಾಳಿ ನಡೆಸಿದ ಅರ್ಷದೀಪ್ ಸಿಂಗ್ 4 ಓವರ್‌ಗಳಲ್ಲಿ ಕೇವಲ 13 ರನ್ ನೀಡಿ 2 ವಿಕೆಟ್ ಪಡೆದು ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ವರುಣ್ ಚಕ್ರವರ್ತಿ 4 ಓವರ್‌ಗಳಲ್ಲಿ ಕೇವಲ 11 ರನ್ ನೀಡಿ 2 ವಿಕೆಟ್ ಪಡೆದರು. ಕುಲ್ದೀಪ್ ಯಾದವ್ 2 ಓವರ್‌ಗಳಲ್ಲಿ 12 ರನ್ ನೀಡಿ 2 ವಿಕೆಟ್, ಹರ್ಷಿತ್ ರಾಣಾ 4 ಓವರ್‌ಗಳಲ್ಲಿ 34 ರನ್ ನೀಡಿ 2 ವಿಕೆಟ್ ಪಡೆದರು. ಹಾರ್ದಿಕ್ ಪಾಂಡ್ಯ ಹಾಗೂ ಶಿವಂ ದುಬೆ ಕೂಡ ತಲಾ 1 ವಿಕೆಟ್ ಪಡೆದು ಮಿಂಚಿದರು.

ಜೈಸ್ವಾಲ್ ಶತಕ: ಮುಂಬೈಗೆ ಗೆಲುವು

ಮುಂಬೈ: ಸೈಯದ್ ಮುಷ್ತಾಕ್ ಅಲಿ ಟ್ರೋಫಿಯ ಸೂಪರ್ ಲೀಗ್ ಸುತ್ತಿನಲ್ಲಿ ಭಾನುವಾರ ನಡೆದ ಗ್ರೂಪ್-ಬಿ ಪಂದ್ಯದಲ್ಲಿ ಹರಿಯಾಣ ತಂಡವನ್ನು ಮುಂಬೈ ಸೋಲಿಸಿತು.

ಯಶಸ್ವಿ ಜೈಸ್ವಾಲ್ ಶತಕ ಮತ್ತು ಸರ್ಫ ರಾಜ್ ಖಾನ್ ಅರ್ಧಶತಕದ ನೆರವಿನಿಂದ ಮುಂಬೈ ಗೆಲುವಿಗೆ ಕಾರಣವಾಯಿತು. ಮೊದಲು ಬೌಲಿಂಗ್ ಮಾಡಿದ ಮುಂಬೈ ನಿರೀಕ್ಷಿತ ಪ್ರದರ್ಶನ ತೋರಿಸಲಿಲ್ಲ. ಹರಿಯಾಣ 20 ಓವರ್‌ಗಳಲ್ಲಿ 3 ವಿಕೆಟ್‌ಗೆ 234 ರನ್ ಗಳಿಸಿತು. ಮುಂಬೈ 3.1 ಓವರ್‌ಗಳಲ್ಲಿ 53 ರನ್‌ಗಳ ಆರಂಭಿಕ ಜತೆಯಾಟ ಕಂಡಿತ್ತು.

ಎಡಗೈ ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್ ಮುಂಬೈ ಪರ ಮಿಂಚಿದರು. ಯಶಸ್ವಿ ಜೈಸ್ವಾಲ್ 50 ಎಸೆತಗಳಲ್ಲಿ 16 ಬೌಂಡರಿ ಮತ್ತು 1 ಸಿಕ್ಸರ್ ನೆರವಿನಿಂದ 101 ರನ್ ಬಾರಿಸಿದರು.

ಫುಟ್ಬಾಲ್ ಮಾಂತ್ರಿಕನಿಗೆ ತೆಂಡೂಲ್ಕರ್ ಜೆರ್ಸಿ ಉಡುಗೊರೆ | ಪಂದ್ಯದಲ್ಲಿ ಪಾಲ್ಗೊಂಡ ಚೆಟ್ರಿ

ಮುಂಬೈಯಲ್ಲಿ ಲಿಯೋನೆಲ್ ಮೆಸ್ಸಿ ಮೇನಿಯಾ

ಮುಂಬೈ: ವಿಶ್ವದ ಶ್ರೇಷ್ಠ ಫುಟ್ಬಾಲ್ ಆಟಗಾರರಲ್ಲಿ ಒಬ್ಬರಾದ ಅರ್ಜೆಂಟೀನಾದ ಲಿಯೋನೆಲ್ ಮೆಸ್ಸಿ ಮುಂಬೈನಲ್ಲಿ ಭಾನುವಾರ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರು. ಈ ವೇಳೆ ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್, ಭಾರತದ ಫುಟ್ಬಾಲ್ ತಾರೆ ಸುನಿಲ್ ಚೆಟ್ರಿ, ನಟ ಅಜಯ್ ದೇವಗನ್, ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಹಾಜರಿದ್ದರು.

ಸಚಿನ್ ತೆಂಡೂಲ್ಕರ್ ಅವರು ಮೆಸ್ಸಿಗೆ 2011ರ ಏಕದಿನ ವಿಶ್ವಕಪ್ ವಿಜೇತ ತಂಡದ ಜೆರ್ಸಿಯನ್ನು ಸ್ಮರಣಿಕೆಯಾಗಿ ನೀಡಿದರು. ವಾಂಖೆಡೆ ಕ್ರೀಡಾಂಗಣದಲ್ಲಿ ಮೆಸ್ಸಿಯನ್ನುದ್ದೇಶಿಸಿ ಮಾತನಾಡಿದ ಸಚಿನ್, 'ನಾನು ಇಲ್ಲಿ ಕೆಲವು ಅದ್ಭುತ ಕ್ಷಣಗಳನ್ನು ಕಳೆದಿದ್ದೇನೆ. ನಾವು ಮುಂಬೈ ಅನ್ನು ಕನಸುಗಳ ನಗರ ಎಂದು ಕರೆಯುತ್ತೇವೆ, ಹಲವಾರು ಕನಸುಗಳು ಈ ಸ್ಥಳದಲ್ಲಿ ಅಂತಿಮ ಗುರಿ ಕಂಡಿವೆ. ಇಂದು ದಿಗ್ಗಜ ಫುಟ್ಬಾಲ್ ಆಟಗಾರರನ್ನು ಮುಂಬೈ ಕಾಣುವುದು ಮತ್ತು ಮುಂಬೈ ನಿವಾಸಿಗಳು ನೋಡುತ್ತಿರುವುದು ಭಾರತಕ್ಕೆ ಸುವರ್ಣ ಕ್ಷಣವಾಗಿದೆ. ಎಲ್ಲರ ಪರವಾಗಿ ಮೆಸ್ಸಿ, ಉರುಗ್ವೆಯ ಲೂಯಿಸ್ ಸುವಾರೆಜ್ ಮತ್ತು ರೊಡ್ರಿಗೋ ಡಿ ಪಾಲ್ ಅವರಿಗೆ ಮತ್ತು ಅವರ ಕುಟುಂಬಕ್ಕೆ ಉತ್ತಮ ಆರೋಗ್ಯವನ್ನು ಹಾರೈಸುತ್ತೇನೆ, ಪ್ರೋತ್ಸಾಹಿಸಿದ್ದಕ್ಕಾಗಿ ಮತ್ತೊಮ್ಮೆ ಧನ್ಯವಾದಗಳು. ಫುಟ್ಬಾಲ್ ನಾವೆಲ್ಲರೂ ಆಶಿಸುವ ಎತ್ತರವನ್ನು ತಲುಪುತ್ತದೆ ಎಂದು ನಾನು ಭಾವಿಸುತ್ತೇನೆ' ಎಂದು ಸಚಿನ್ ಹೇಳಿದರು.

ಪ್ರದರ್ಶನ ಪಂದ್ಯದಲ್ಲಿ ಮಿತ್ರಾ ಸ್ಟಾರ್ ತಂಡದ ಪರ ಆಟವಾಡಿರುವ ಸುನಿಲ್ ಚೆಟ್ರಿ ಗೋಲು ಗಳಿಸುವ ಮೂಲಕ ಗಮನ ಸೆಳೆದರು. ಪಂದ್ಯಕ್ಕೂ ಮುನ್ನ ಮೆಸ್ಸಿ ಜೊತೆ ಮೈದಾನದಲ್ಲಿ ಮಾತುಕತೆಯನ್ನು ಕೂಡ ನಡೆಸಿದ್ದಾರೆ. ಲಿಯೊನೆಲ್ ಮೆಸ್ಸಿ ಅವರನ್ನು ಭೇಟಿಯಾಗಲು ಸುನಿಲ್ ಚೆಟ್ರಿ ನಿರಾಕರಿಸಿದ್ದಾರೆ ಎನ್ನುವ ವಂದತಿಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದವು, ಆದರೆ ಆ ಎಲ್ಲ ವಂದತಿಗಳಿಗೂ ಭಾನುವಾರ ತೆರೆ ಬಿತ್ತು.

ಸೋಲಿನ ಪಂದ್ಯದೊಂದಿಗೆ ಅಮೆರಿಕ ಆಟಗಾರ ಡಬ್ಲ್ಯುಡಬ್ಲ್ಯುಇ ಕುಸ್ತಿಗೆ ನಿವೃತ್ತಿ

ಕುಸ್ತಿಗೆ ಅಮೆರಿಕದ ಜಾನ್ ಸೀನಾ ವಿದಾಯ

ನ್ಯೂಯಾರ್ಕ್: ಡಬ್ಲ್ಯುಡಬ್ಲ್ಯುಇ ಸೂಪರ್ ಸ್ಟಾರ್, 17 ಬಾರಿ ಚಾಂಪಿಯನ್ ಆಗಿರುವ ಅಮೆರಿಕದ ಜಾನ್ ಸೀನಾ ಅವರು ತಮ್ಮ ವೃತ್ತಿಜೀವನಕ್ಕೆ ನಿವೃತ್ತಿ ಘೋಷಿಸಿದ್ದಾರೆ. ಶನಿವಾರ ತಡರಾತ್ರಿ ನಡೆದ ಗುಂಥರ್ ವಿರುದ್ಧದ ವಿದಾಯ ಪಂದ್ಯದಲ್ಲಿ ಸೋಲು ಕಾಣುವ ಮೂಲಕ ತಮ್ಮ ಅದ್ಭುತ ಕುಸ್ತಿ ವೃತ್ತಿಜೀವನಕ್ಕೆ ಅವರು ವಿದಾಯ ಹೇಳಿದರು.

2002ರ ಜೂನ್ 27ರಂದು ಸ್ಮ್ಯಾಕ್‌ಡೌನ್‌ನಲ್ಲಿ ಜಾನ್ ಸೀನಾ ಡಬ್ಲ್ಯುಡಬ್ಲ್ಯುಇಗೆ ಪದಾರ್ಪಣೆ ಮಾಡಿದರು. ಮುಂದಿನ ಎರಡು ದಶಕಗಳಲ್ಲಿ ಪ್ರಚಾರದ ಅತ್ಯಂತ ಜನಪ್ರಿಯ ವ್ಯಕ್ತಿಗಳಲ್ಲಿ ಒಬ್ಬರಾದರು. 17 ಬಾರಿ ಡಬ್ಲ್ಯುಡಬ್ಲ್ಯುಇ ವಿಶ್ವ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಕಂಪನಿಯ ಪ್ರಶಸ್ತಿ ಇತಿಹಾಸದಲ್ಲಿ ಅವರು ಅಗ್ರಸ್ಥಾನದಲ್ಲಿರುವ ದಾಖಲೆಯನ್ನು ಹೊಂದಿದ್ದಾರೆ, ಅವರು ಆರು ಬಾರಿ ರೆಸಲ್‌ಮೇನಿಯಾದಲ್ಲಿ ಪ್ರಮುಖ ಸ್ಥಾನ ಪಡೆದಿದ್ದಾರೆ.

ಇಂಟರ್‌ಕಾಂಟಿನೆಂಟಲ್ ಪ್ರಶಸ್ತಿಯೂ ಸೇರಿದಂತೆ ಡಬ್ಲ್ಯುಡಬ್ಲ್ಯುಇನ ಪ್ರಮುಖ ಚಾಂಪಿಯನ್‌ಶಿಪ್‌ಗಳನ್ನು ಗೆಲ್ಲುವ ಮೂಲಕ

ಗ್ರ್ಯಾಂಡ್ ಸ್ಲಾಮ್ ಅನ್ನು ಪೂರ್ಣಗೊಳಿಸಿದ್ದಾರೆ. ಜಾನ್ ಸೀನಾ ಸಿನಿಮಾ ರಂಗದಲ್ಲೂ ಗುರುತಿಸಿಕೊಂಡಿದ್ದಾರೆ. ಟೊರಾಂಟೊದಲ್ಲಿ ನಡೆದ ಮನಿ ಇನ್ ಬ್ಯಾಂಕ್ ಪ್ರೀಮಿಯಂ ಕಾರ್ಯಕ್ರಮದಲ್ಲಿ ಭಾಗವಹಿಸಿದ ಜಾನ್ ಸೀನಾ ಈ ಘೋಷಣೆ ಮಾಡಿದ್ದು, 'ದಿ ಲಾಸ್ಟ್ ಟೈಮ್ ಈಸ್ ನೌ' ಎಂದು ಬರೆದ ಟೀ ಶರ್ಟ್ ಧರಿಸಿ ಬಂದಿದ್ದರು. ಇದರೊಂದಿಗೆ ಕುಸ್ತಿಯಲ್ಲಿ 2025 ಅವರ ಕೊನೆಯ ವರ್ಷ ಎಂದು ಬಹಿರಂಗಪಡಿಸಿದ್ದರು.

ಶ್ರೇಷ್ಠ ಕುಸ್ತಿ ತಾರೆಗಳಲ್ಲಿ ಒಬ್ಬರೆಂದು ಗುರುತಿಸಲ್ಪಟ್ಟ ಜಾನ್ ಸೀನಾ ಅವರನ್ನು ವಿಶ್ವದ ಅತ್ಯಂತ ಶ್ರೀಮಂತ ಡಬ್ಲ್ಯುಡಬ್ಲ್ಯುಇ ತಾರೆಗಳಲ್ಲಿ ಒಬ್ಬರೆಂದು ಪರಿಗಣಿಸಲಾಗಿದೆ.

ಪೊಲೀಸರ ವಶದಲ್ಲಿ ಮೆಸ್ಸಿ ಭಾರತ ಪ್ರವಾಸದ ಸಂಘಟಕ
ಕೋಲ್ಕತ್ತಾ ದುರ್ಘಟನೆಯ ಹಿನ್ನೆಲೆಯಲ್ಲಿ ಕ್ರಮ

ಸತಾದ್ರು ದತ್ತಗೆ ಹದಿನಾಲ್ಕು ದಿನ ಪೊಲೀಸ್ ಕಸ್ಟಡಿ

ದೆಹಲಿ: ಕೋಲ್ಕತ್ತಾದ ಸಾಲ್ಟ್‌ಲೇಕ್ ಕ್ರೀಡಾಂಗಣದಲ್ಲಿ ಮೆಸ್ಸಿ ಸಂದರ್ಶನ ವೇಳೆ ನಡೆದಿದ್ದ ದಾಂಧಲೆ ಪ್ರಕರಣಕ್ಕೆ ಸಂಬಂಧಿಸಿ ಬಂಧಿತರಾಗಿರುವ ಗೋಟ್ ಟೂರ್ ಆಯೋಜಕ ಸತದ್ರು ದತ್ತ ಅವರಿಗೆ ಜಾಮೀನು ನಿರಾಕರಿಸಿದ ಕಾರಣ 14 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದೆ.

ಲಿಯೋನೆಲ್ ಮೆಸ್ಸಿ ಕೋಲ್ಕತ್ತಾದಿಂದ ಹೈದರಾಬಾದ್‌ಗೆ ತೆರಳುತ್ತಿದ್ದಾಗ ದತ್ತಾ ಅವರನ್ನು ಪೊಲೀಸರು ಬಂಧಿಸಿದ್ದರು. ಕ್ರೀಡಾಂಗಣದಲ್ಲಿ ರಾಜಕಾರಣಿಗಳು ಮತ್ತು ವಿಐಪಿಗಳು ಹೆಚ್ಚಿಗೆ ಇದ್ದಿದ್ದರಿಂದ ಅಭಿಮಾನಿಗಳಿಗೆ ಮೆಸ್ಸಿಯನ್ನು ನೋಡಲು ಸಾಧ್ಯವಾಗಲಿಲ್ಲ.

ಕೋಲ್ಕತಾದ ಕ್ರೀಡಾಂಗಣದಲ್ಲಿ 50 ಸಾವಿರ ಜನರು 5ರಿಂದ 20 ಸಾವಿರ ರು.ವರೆಗೆ ಟಿಕೆಟ್ ಖರೀದಿಸಿ ಗಂಟೆಗಟ್ಟಲೆಯಿಂದ ಮೆಸ್ಸಿ ಬರುವಿಕೆಗೆ ಕಾದಿದ್ದರು. ಅವರು ಕ್ರೀಡಾಂಗಣಕ್ಕೆ ಒಂದು ಸುತ್ತು ಹಾಕಲಿಲ್ಲ ಮಾತ್ರವಲ್ಲ, ದೊಡ್ಡ ಪರದೆಗಳಲ್ಲೂ ಚಿತ್ರ ಸ್ಪಷ್ಟವಾಗಿ ಕಾಣಲಿಲ್ಲ. ಗೊಂದಲ ಹೆಚ್ಚಾಗಿ

ಮೆಸ್ಸಿ 22 ನಿಮಿಷದಲ್ಲೇ ನಿರ್ಗಮಿಸಿದರು. ಕೆರಳಿದ ಜನ ಸ್ಟೇಡಿಯಗೆ ಕುರ್ಚಿ, ಬಾಟಲಿಗಳನ್ನು ಮೈದಾನಕ್ಕೆಸೆದು ಕೆಂಡಕಾರಿದರು

ಸಾಲ್ಟ್ ಲೇಕ್‌ನಲ್ಲಿನ ಅವ್ಯವಸ್ಥೆ, ದಾಂಧಲೆಗೆ ಬಗ್ಗೆ ಸಾಮಾಜಿಕ ತಾಣ ಎಕ್ಸ್‌ನಲ್ಲಿ ಮೆಸ್ಸಿ ಕ್ಷಮೆಯಾಚಿಸಿ, ದುರ್ಘಟನೆಯಿಂದಾಗಿ ಬಹಳ ನೋವಾಗಿರುವುದಾಗಿ ತಿಳಿಸಿದ್ದಾರೆ. ಕೋಲ್ಕತ್ತಾ ಕ್ರೀಡಾಂಗಣದಲ್ಲಿ ಮೆಸ್ಸಿ ಜತೆ ಪ.ಬಂಗಾಳ ಸಿಎಂ ಮಮತಾ ಬ್ಯಾನರ್ಜಿ, ಬಾಲಿವುಡ್ ನಟ ಶಾರುಖ್ ಖಾನ್, ಕ್ರಿಕೆಟಿಗ ಸೌರವ್ ಗಂಗೂಲಿ ಅವರೂ ಕಾಣಿಸಿಕೊಳ್ಳಬೇಕಿತ್ತು, ಆದರೆ ಜನದಟ್ಟಣೆಯಿಂದ ಅವರು ಕ್ರೀಡಾಂಗಣಕ್ಕೇ ಬರಲು ಆಗಲಿಲ್ಲ.

ಭಾವಪೂರ್ಣ ಶ್ರದ್ಧಾಂಜಲಿ

ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷರಾದ
ಡಾ. ಶಾಮನೂರು ಶಿವಶಂಕರಪ್ಪನವರು
ದಿನಾಂಕ 14.12.2025 ರ ಭಾನುವಾರ
ಸಂಜೆ ಲಿಂಗೈಕ್ಯರಾಗಿದ್ದಾರೆಂದು ತಿಳಿಸಲು ವಿಷಾಧಿಸುತ್ತೇವೆ.
ಮೃತರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ಹಾಗೂ ಅವರ
ಅಗಲುವಿಕೆಯಿಂದ ಸಮಾಜ ಮತ್ತು ಅವರ
ಕುಟುಂಬಕ್ಕಾಗಿರುವ ಅಗಾಧ ದುಃಖವನ್ನು ಭರಿಸುವ ಶಕ್ತಿ
ನೀಡಲೆಂದು ರೇಣುಕಾದಿ ಆಚಾರ್ಯರಲ್ಲಿ ಮತ್ತು ಬಸವಾದಿ
ಪ್ರಮಥರಲ್ಲಿ ಪ್ರಾರ್ಥಿಸುತ್ತೇವೆ. ದಿನಾಂಕ : 15.12.2025,
ಮಧ್ಯಾಹ್ನ 12.00 ಗಂಟೆಯವರೆಗೆ ದಾವಣಗೆರೆಯ
ಸ್ವಗೃಹದಲ್ಲಿ ಮತ್ತು ಮಧ್ಯಾಹ್ನ 3.30 ಗಂಟೆಯವರೆಗೆ
ದಾವಣಗೆರೆಯ ಹೈಸ್ಕೂಲ್ ಮೈದಾನದಲ್ಲಿ
ಅಂತಿಮ ದರ್ಶನದ ವ್ಯವಸ್ಥೆ ಮಾಡಲಾಗಿದೆ ಮತ್ತು
ಸಂಜೆ 5.00 ಗಂಟೆಗೆ ದಾವಣಗೆರೆಯ ಕಲ್ಲೇಶ್ವರ ಮಿಲ್‌ನಲ್ಲಿ
ಅಂತಿಮ ವಿಧಿ ವಿಧಾನಗಳು ನೆರವೇರಲಿದೆ.

ಡಾ. ಶಾಮನೂರು ಶಿವಶಂಕರಪ್ಪ
ರಾಷ್ಟ್ರೀಯ ಅಧ್ಯಕ್ಷರು ಮತ್ತು ಶಾಸಕರು

ದುಃಖದಿಂದ ಪ್ರಕಟಿಸುತ್ತಿರುವವರು

ಶ್ರೀ ಈಶ್ವರ ಖಂಡ್ರೆ, ಮಾನ್ಯ ಸಚಿವರು
ಹಿರಿಯ ಉಪಾಧ್ಯಕ್ಷರು ಮತ್ತು
ಮಹಾಪ್ರಧಾನ ಕಾರ್ಯದರ್ಶಿಗಳು

ಶ್ರೀ ಶಂಕರ ಬಿದರಿ
ಅಧ್ಯಕ್ಷರು,
ಕರ್ನಾಟಕ ರಾಜ್ಯ ಘಟಕ

ಹಾಗೂ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ (ರಿ.)